ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೪೭

# ಪಟ್ಟಿ – ೩೩

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತಮೂರನೇ ಅಧಿವೇಶನ

## (ಮುಂದುವರೆದ ಉಪವೇಶನ)

## ಶುಕ್ರವಾರ, ದಿನಾಂಕ: ೨೪ನೇ ನವೆಂಬರ್, ೨೦೧೭

---

## ಸಮೂಹ – V

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು.

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

೩. ಉನ್ನತ ಶಿಕ್ಷಣ ಸಚಿವರು.

೪. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು.

೫. ಸಾರಿಗೆ ಸಚಿವರು.

೬. ಗಣಿ ಮತ್ತು ಭೂವಿಜ್ಞಾನ ಸಚಿವರು.

೭. ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ರಾಜ್ಯ ಸಚಿವರು.

---

## ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಶಿಕ್ಷಕರ ಹಾಗೂ ಉಪನ್ಯಾಸಕರ ಖಾಲಿ ಹುದ್ದೆಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೪೨೩೩ (೪೮೯೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಶಿಕ್ಷಕರ ಹಾಗೂ ಉಪನ್ಯಾಸಕರ ಹುದ್ದೆಗಳು ಖಾಲಿ ಇರುವುದರಿಂದ ಶೈಕ್ಷಣಿಕ ಫಲಿತಾಂಶಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ; (ವಿವರ ನೀಡುವುದು)

(ಆ) ಶಿಕ್ಷಕರ ಹಾಗೂ ಉಪನ್ಯಾಸಕರ ನೇಮಕಾತಿಗಳಲ್ಲಿ ಬಹಳ ವಿಳಂಬ ಆಗುತ್ತಿರುವುದು ನಿಜವೇ; ಶಿಕ್ಷಕರ ಹಾಗೂ ಉಪನ್ಯಾಸಕರ ನೇಮಕಾತಿಗಾಗಿ ಹೊರಡಿಸಲಾದ ಅಧಿಸೂಚನೆಯ ಪ್ರತಿಗಳೊಂದಿಗೆ ಸಂಪೂರ್ಣ ವಿವರ ನೀಡುವುದು;

(ಇ) ಸದರಿ ನೇಮಕಾತಿಗಳಲ್ಲಿ ೩೭೧ (ಜೆ) ಮೀಸಲಾತಿ ನೀಡಿ ಈ ಭಾಗದಲ್ಲಿ ನೇಮಕಾತಿಗಳನ್ನು ಮಾಡಿ ಶೈಕ್ಷಣಿಕ ಪ್ರಗತಿಗಾಗಿ ಸರ್ಕಾರ ಮುಂದಾಗುವುದೇ? (ಹುದ್ದೆಗಳ ಮೀಸಲಾತಿಗಳ ಸಂಪೂರ್ಣ ವಿವರ ನೀಡುವುದು)

## ಈಶಾನ್ಯ ಪದವೀಧರರ ಕ್ಷೇತ್ರದ ಗ್ರಾಮೀಣ ಯುವಕರಿಗೆ "ರಾಜೀವ್ ಗಾಂಧಿ ಚೈತನ್ಯ ಯೋಜನೆ"ಗಳ ಬಗ್ಗೆ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೪೨೩೪ (೪೮೯೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈಶಾನ್ಯ ಪದವೀಧರ ಕ್ಷೇತ್ರಗಳಲ್ಲಿ ಗ್ರಾಮೀಣ ಯುವಜನರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಸ್ವ–ಉದ್ಯೋಗಿಗಳನ್ನಾಗಿ ಮಾಡುವ "ರಾಜೀವ್ ಗಾಂಧಿ ಚೈತನ್ಯ ಯೋಜನೆ"ಯಡಿಯಲ್ಲಿ ಇದುವರೆಗೂ ಸರ್ಕಾರ ಯಾವ ಯಾವ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಜಿಲ್ಲೆಗಳಲ್ಲಿ ಎಷ್ಟು ಯುವ ಜನರಿಗೆ ಈ ಯೋಜನೆಯಡಿ ಫಲಾನುಭವಿಗಳು ಸ್ವ–ಉದ್ಯೋಗಿಗಳಾಗಿದ್ದಾರೆ; ಯಾವ ಯಾವ ವೃತ್ತಿಗಳಲ್ಲಿ ತರಬೇತಿ ಪಡೆದು ಪರಿಣಿತರಾಗಿ ಉದ್ಯೋಗದಲ್ಲಿದ್ದಾರೆ; (ವಿವರ ನೀಡುವುದು)

(ಇ) ಪ್ರಸ್ತುತ ಈ ಯೋಜನೆ ಪ್ರಗತಿಯಲ್ಲಿದೆಯೇ; (ಮಾಹಿತಿ ನೀಡುವುದು)

(ಈ) ಸದರಿ "ರಾಜೀವ್ ಗಾಂಧಿ ಚೈತನ್ಯ ಯೋಜನೆ" ಕ್ರಿಯಾಶೀಲವನ್ನಾಗಿ ಮಾಡಲು ಹಾಗೂ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು)

## ಸರ್ವ ಶಿಕ್ಷಣ ಅಭಿಯಾನದ ಯೋಜನೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೪೨೩೫ (೪೮೯೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ "ಸರ್ವ ಶಿಕ್ಷಣ ಅಭಿಯಾನ"ದಡಿಯಲ್ಲಿ ಕಳೆದ ೩ ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹೈದ್ರಾಬಾದ್–ಕರ್ನಾಟಕ ಭಾಗಕ್ಕೆ ರಾಜ್ಯ ಸರ್ಕಾರದಿಂದ ಮೀಸಲಿಟ್ಟ ಅನುದಾನವೆಷ್ಟು ಹಾಗೂ ಕೇಂದ್ರ ಸರ್ಕಾರದಿಂದ ಮಂಜೂರಾಗಿರುವ ಅನುದಾನವೆಷ್ಟು; (ಮಾಹಿತಿ ನೀಡುವುದು)

(ಇ) "ಸರ್ವ ಶಿಕ್ಷಣ ಅಭಿಯಾನ"ದಡಿಯಲ್ಲಿ ಶಿಕ್ಷಣಕ್ಕೆ ಬಿಡುಗಡೆಯಾದ ಹಣವೆಷ್ಟು; ಇದರಲ್ಲಿ ಶಾಲೆಗಳ ಕಟ್ಟಡ, ಬಿಸಿಯೂಟ, ಸೈಕಲ್ ವಿತರಣೆ, ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಖರ್ಚಾಗಿರುವ ಹಣ ಹಾಗೂ ಶಿಕ್ಷಕರ ಕೌಶಲ್ಯ ತರಬೇತಿಗೆ ಎಷ್ಟು ಹಣ ವಿನಿಯೋಗಿಸಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ೧೯೮೭ ರಿಂದ ೧೯೯೫ ರವರೆಗೆ ಸ್ಥಾಪಿಸಿರುವ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಿರುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೪೨೩೬ (೪೮೯೭) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈಶಾನ್ಯ ಪದವೀಧರರ ಕ್ಷೇತ್ರಗಳಲ್ಲಿ ೧೯೮೭ ರಿಂದ ೧೯೯೫ರವರೆಗೆ ಸ್ಥಾಪಿಸಲಾಗಿರುವ ಪಾಲಿಟೆಕ್ನಿಕ್ ಕಾಲೇಜುಗಳ ಸಂಖ್ಯೆ ಎಷ್ಟು; (ಸಂಸ್ಥೆವಾರು ಮಾಹಿತಿ ನೀಡುವುದು)

(ಆ) ಸದರಿ ಪಾಲಿಟೆಕ್ನಿಕ್ ಕಾಲೇಜುಗಳು ಸರ್ಕಾರದಿಂದ ವೇತನಾನುದಾನಕ್ಕೆ ಒಳಪಡಿಸಿದ ಆದೇಶಗಳು ಇದ್ದರೂ ಸಹ ಕಾರ್ಯರೂಪಕ್ಕೆ ಬರದೇ ಇರುವುದಕ್ಕೆ ಕಾರಣಗಳೇನು; (ವಿವರ ನೀಡುವುದು)

(ಇ) ಸದರಿ ವೇತನಾನುದಾನಕ್ಕೆ ಒಳಪಡಿಸಿರುವ ಪಾಲಿಟೆಕ್ನಿಕ್ ಕಾಲೇಜುಗಳನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಂಡಿದೆ? (ವಿವರ ನೀಡುವುದು)

## ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೪೨೩೭ (೪೮೯೯) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉನ್ನತ ಶಿಕ್ಷಣ ಇಲಾಖೆಯಲ್ಲಿ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ವಿಫಲವಾಗಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ; (ವಿವರ ನೀಡುವುದು)

(ಆ) ಈಗಲಾದರೂ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆಯನ್ನು ಒದಗಿಸಲು, ವೇತನ ಹೆಚ್ಚಿಸಲು ಹಾಗೂ ನಿಗಧಿಪಡಿಸಿರುವ ವೇತನವನ್ನು ಪಾವತಿಸಲು ಸರ್ಕಾರ ಮುಂದಾಗುವುದೇ; ಇದ್ದರೆ, ಸರ್ಕಾರದ ಮುಂದಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

## ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಸಿ & ಆರ್ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) –**

೪೨೩೮ (೪೯೦೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಸಿ & ಆರ್ ರಚನೆ ಆಗಿದೆಯೇ;

(ಆ) ಪ್ರಾಥಮಿಕದಿಂದ ಹಿರಿಯ ಪ್ರಾಥಮಿಕಕ್ಕೆ ಪದೋನ್ನತಿ ಹೊಂದಲು ಇರುವಂತಹ ಅವಕಾಶ ಹಾಗೂ ಪ್ರಕ್ರಿಯೆ ಏನು;

(ಇ) ಈಗ ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಪದೋನ್ನತಿ ನೀಡುವ ಕುರಿತು ಸರ್ಕಾರದ ನಿಲುವೇನು;

(ಈ) ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರೌಢ ಶಾಲಾ ಶಿಕ್ಷಕರಾಗಿ ಪದೋನ್ನತಿ ಹೊಂದಲು ಇರುವಂತಹ ನಿಯಮಾವಳಿ ಹಾಗೂ ಪ್ರಕ್ರಿಯೆ ಏನು;

(ಉ) ಪ್ರೌಢ ಶಾಲಾ ಶಿಕ್ಷಕರಿಂದ ಪದವಿ ಪೂರ್ವ ಉಪನ್ಯಾಸಕರಾಗಿ ಪದೋನ್ನತಿ ಹೊಂದಲು ಇರುವ ನಿಯಮಗಳು ಹಾಗೂ ಪ್ರಕ್ರಿಯೆ ಏನು;

(ಊ) ಈ ನಿಟ್ಟಿನಲ್ಲಿ ದೂರುಗಳು, ಆಕ್ಷೇಪಣೆಗಳು, ಬೇಡಿಕೆಗಳು ಸರ್ಕಾರಕ್ಕೆ ಬಂದಿರುವ ವಿವರ ಒದಗಿಸುವುದು;

(ಋ) ಆ ಶಿಕ್ಷಕರ ಅಹವಾಲುಗಳ ಕುರಿತು ಸರ್ಕಾರದ ನಿಲುವೇನು? (ಪ್ರತಿಯೊಂದರ ಕುರಿತು ವಿವರಣೆ ಒದಗಿಸುವುದು)

## ಗುತ್ತಿಗೆ ಆಧಾರದ ಶಿಕ್ಷಕ/ಉಪನ್ಯಾಸಕರ ವೇತನ ಬಡ್ತಿ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) –**

೪೨೩೯ (೪೯೦೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಪದವಿ ಪೂರ್ವ ಹಾಗೂ ಪ್ರೌಢ ಶಾಲೆಗಳಲ್ಲಿ ನೇಮಕಾತಿ ಹೊಂದಿರುವ ಗುತ್ತಿಗೆ ಆಧಾರದ ಶಿಕ್ಷಕ/ಉಪನ್ಯಾಸಕರುಗಳ "ಸೇವೆಗೆ ಸೇರಿದ ದಿನಾಂಕ" ಸಕ್ರಮಾತಿ ಆದ ದಿನಾಂಕದ ಮಧ್ಯದ ಅವಧಿ"ಯ ಸೇವೆಯನ್ನು ಪರಿಗಣಿಸಿ ನೀಡಲಾದ ವೇತನ ಬಡ್ತಿಗಳನ್ನು ಕಡಿತಗೊಳಿಸಲು ಸೂಚಿಸಲಾಗಿದೆಯೇ; ಯಾವ ಕಾರಣಕ್ಕಾಗಿ ಈ ಕ್ರಮ ಕೈಗೊಳ್ಳಲಾಗುತ್ತಿದೆ?

(ಆ) ಈ ರೀತಿ ಕಡಿತಗೊಳಿಸುತ್ತಿರುವುದರಿಂದ ಇವರಿಗೆ ಆಗುತ್ತಿರುವ ಸಮಸ್ಯೆಯನ್ನು ತಪ್ಪಿಸಲು ಕಡಿತಗೊಳಿಸುವ ಕ್ರಮದಿಂದ ಸರ್ಕಾರ ಹಿಂದೆ ಸರಿಯುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು?

## ಶಿಕ್ಷಣ ಇಲಾಖೆಯ ಆಡಳಿತದಲ್ಲಿ ಜಿಲ್ಲಾ ಪಂಚಾಯತ್‌ನ ಅಧಿಕಾರ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) –**

೪೨೪೦ (೪೯೦೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಿಲ್ಲಾ ಪಂಚಾಯತ್ ಮೂಲಕ ಶಿಕ್ಷಣ ಇಲಾಖೆ ಆಡಳಿತದಲ್ಲಿ ಸೂಸೂತ್ರವಾಗಿ ನಡೆಸಲು ಜಿಲ್ಲಾ ಪಂಚಾಯತ್‌ಗಳಿಗೆ ನೀಡಿರುವ ಅಧಿಕಾರವೇನು;(ಮಾಹಿತಿ ನೀಡುವುದು)

(ಆ) ಶಿಕ್ಷಣ ಇಲಾಖೆಯ ಆಡಳಿತದಲ್ಲಿ ಜಿಲ್ಲಾ ಪಂಚಾಯತ್‌ಗಳ ಪಾತ್ರವೇನು; ಜಿಲ್ಲಾ ಪಂಚಾಯತ್ ಅಧ್ಯಕ್ಷರ ಪಾತ್ರವೇನು; ಸ್ಥಾಯಿ ಸಮಿತಿಯ ಪಾತ್ರವೇನು; ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಪಾತ್ರವೇನು;

(ಇ) ಶಿಕ್ಷಣ ಇಲಾಖೆಯ ಹಲವು ನೀತಿ ನಿರೂಪಣಾ ಕಾರ್ಯಗಳನ್ನು ‘ಆ ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ತೆಗೆದುಕೊಳ್ಳುವ ಅಧಿಕಾರದ ವ್ಯಾಪ್ತಿ ಏನು; ಯಾವ ರೀತಿ ಸೀಮಿತವಾಗಿದೆ; ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿ ನೀತಿ ನಿರೂಪಣೆ ಮಾಡಿಕೊಳ್ಳಲು ಅವಕಾಶವಿದೆಯೇ;

(ಈ) ರಾಜ್ಯದ ಶಿಕ್ಷಣ ನೀತಿಗೂ, ಜಿಲ್ಲೆಯಲ್ಲಿ ತೆಗೆದುಕೊಂಡ ಶಿಕ್ಷಣ ನೀತಿಗೂ ವ್ಯತ್ಯಾಸವಿದ್ದಲ್ಲಿ ಯಾರಿಗೆ ದೂರು ನೀಡಬೇಕು ಮತ್ತು ಇದನ್ನು ಇತ್ಯರ್ಥಪಡಿಸುವ ಅಧಿಕಾರ ಯಾರಿಗೆ ಇರುತ್ತದೆ;

(ಉ) ಶಿಕ್ಷಕರ ಪ್ರತಿ ತಿಂಗಳ ಸಂಬಳವನ್ನು ಸಮಯಕ್ಕೆ ಸರಿಯಾಗಿ ನೀಡಲು ಜಿಲ್ಲಾ ಪಂಚಾಯತ್ ವಿಫಲವಾಗಿದೆಯೇ; ಸರೆಂಡರ್ ವೇತನ ಬಾಕಿ, ವೈದ್ಯಕೀಯ ವೆಚ್ಚ ಮರುಪಾವತಿ, ಇತ್ಯಾದಿಗಳನ್ನು ಸಮರ್ಥವಾಗಿ ನೀಡುವಲ್ಲಿ ಜಿಲ್ಲಾ ಪಂಚಾಯತ್‍ಗಳು ಯಾವುದೇ ಬದ್ಧತೆಯನ್ನು ತೋರಿಸದೇ ಇರುವುದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು?

## ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಕರ ಉಪನ್ಯಾಸಕರ ಎಕ್ಸ್‌ಗ್ರೇಷಿಯಾ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ) –**

೪೨೪೧ (೪೯೦೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೦೧.೦೮.೨೦೦೮ರ ನಂತರ ನೇಮಕಾತಿಯಾಗಿರುವ ಪ್ರೌಢ ಶಾಲಾ ಹಾಗೂ ಪದವಿ ಪೂರ್ವ ಉಪನ್ಯಾಸಕರಿಗೆ ಕ್ರಮವಾಗಿ ರೂ.೪೦೦ ಹಾಗೂ ರೂ.೫೦೦ ಎಕ್ಸ್‌ಗ್ರೇಷಿಯಾ ಮಂಜೂರು ಮಾಡುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು;

(ಆ) ೦೧.೦೮.೨೦೦೮ರ ನಂತರ ನೇಮಕಾತಿಯಾಗಿ ನ್ಯಾಯಾಲಯಗಳಿಗೆ ಹೋಗಿ ಈ ಎಕ್ಸ್‌ಗ್ರೇಷಿಯಾ ಪಡೆಯುತ್ತಿರುವ ಶಿಕ್ಷಕರ ಪಟ್ಟಿ ನೀಡಿ; (ಈ ನಿಟ್ಟಿನಲ್ಲಿ ಕೆಳಹಂತದ ನ್ಯಾಯಾಲಯಗಳಲ್ಲಿ ಹಾಗೂ ಸುಪ್ರೀಂ ಕೋರ್ಟ್ ನ್ಯಾಯಾಲಯಗಳಲ್ಲಿ ಆಗಿರುವ ತೀರ್ಪುಗಳ ಪ್ರತಿಗಳನ್ನು ಒದಗಿಸುವುದು)

(ಇ) ನ್ಯಾಯಾಲಯಕ್ಕೆ ಹೋಗದೇ ಇರುವ ಶಿಕ್ಷಕರಿಗೂ ಈ ಎಕ್ಸ್‌ಗ್ರೇಷಿಯಾ ಮಂಜೂರು ಮಾಡುವ ಕುರಿತು ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ಸಂಪೂರ್ಣ ವಿವರ ಒದಗಿಸುವುದು)

## ಅಲ್ಪಸಂಖ್ಯಾತರ ಯೋಜನೆಗಳ ವಿವರಗಳ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) –**

೪೨೪೨ (೪೬೨೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಕಳೆದ ೪ ವರ್ಷಗಳಲ್ಲಿ ಆರಂಭಿಸಿರುವ ಯೋಜನೆಗಳು ಯಾವುವು;

(ಆ) ಪ್ರತಿ ಯೋಜನೆಗಳಿಗೆ ಮೀಸಲಿಟ್ಟ ಅನುದಾನವೆಷ್ಟು;

(ಇ) ಈ ಯೋಜನೆಗಳು ಕಳೆದ ೪ ವರ್ಷಗಳಲ್ಲಿ ಎಷ್ಟರ ಮಟ್ಟಿಗೆ ಜನರಿಗೆ ತಲುಪಿದೆ? (ಜಿಲ್ಲಾವಾರು ವಿವರ ನೀಡುವುದು)

## ಕುಡಿಯುವ ನೀರಿನ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೪೩ (೪೭೯೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿಯ ಕಾಡೇನಹಳ್ಳಿ ಗ್ರಾಮಕ್ಕೆ ಶುದ್ಧ ಕುಡಿಯುವ ನೀರು ಘಟಕ ಯೋಜನೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಕಾಡೇನಹಳ್ಳಿ ಗ್ರಾಮದಲ್ಲಿ ಸುಮಾರು ಒಂದು ಸಾವಿರ ಜನರು ವಾಸಿಸುತ್ತಿದ್ದು, ಇಲ್ಲಿ ಕುಡಿಯುವ ನೀರಿನ ಅಭಾವವು ತೀವ್ರವಾಗಿರುವುದರಿಂದ ಶುದ್ಧ ಕುಡಿಯುವ ನೀರು ಘಟಕವನ್ನು ನಿರ್ಮಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

(ಇ) ಹಾಗಿದ್ದಲ್ಲಿ, ಶುದ್ಧ ಕುಡಿಯುವ ನೀರು ಘಟಕವನ್ನು ಯಾವಾಗ ನಿರ್ಮಿಸಲಾಗುವುದು;

(ಈ) ಜಕ್ಕನಹಳ್ಳಿ ಗ್ರಾಮ ಪಂಚಾಯತ್ ಅಡಿಯಲ್ಲಿ ಎಷ್ಟು ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸಲಾಗಿದೆ? (ಗ್ರಾಮವಾರು ವಿವರ ನೀಡುವುದು)

## ಮದ್ದೂರು ತಾ:ಕೊಪ್ಪ ಹೋಬಳಿ ಬಿದರಕೋಟೆ ಗ್ರಾಮ ಪಂಚಾಯ್ತಿಯಲ್ಲಿ ಅಂತರ್‌ಜಾಲ ವ್ಯವಸ್ಥೆ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

ಳ೨ಳಳ (ಳಲ೨೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಒಂದು ವರ್ಷದಿಂದ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕೊಪ್ಪ ಹೋಬಳಿ ಬಿದರಕೋಟೆ ಗ್ರಾಮ ಪಂಚಾಯ್ತಿಯಲ್ಲಿ ಅಂತರ್ ಜಾಲ ವ್ಯವಸ್ಥೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಅಂತರ್ ಜಾಲ ವ್ಯವಸ್ಥೆ ಇಲ್ಲದೇ ಇರುವುದರಿಂದ ಖಾತೆ ಮಾಡಿಕೊಡಲು, ಇ–ಸ್ವತ್ತು ಮಾಡಿಕೊಡಲು ಮತ್ತು ಶೌಚಾಲಯ ನಿರ್ಮಾಣಕ್ಕೆ ಹಣ ಮಂಜೂರು ಮಾಡಲು ಆಗದೇ ಇರುವುದರಿಂದ ಸಾರ್ವಜನಿಕರಿಗೆ ತುಂಬ ತೊಂದರೆಯಾಗುತ್ತಿದ್ದರೂ ಸಹ ಪರ್ಯಾಯ ವ್ಯವಸ್ಥೆ ಮಾಡದಿರಲು ಕಾರಣಗಳೇನು;

(ಇ) ಅಂತರ್ ಜಾಲ ವ್ಯವಸ್ಥೆ ಸರಿ ಇಲ್ಲದಿರುವ ಕುರಿತು ಪಂಚಾಯ್ತಿ ವತಿಯಿಂದ ದೂರು ಸಲ್ಲಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಸದರಿ ಪಂಚಾಯ್ತಿ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು;

(ಈ) ಅಂತರ್ ಜಾಲ ವ್ಯವಸ್ಥೆ ಇಲ್ಲದಿದ್ದಲ್ಲಿ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಬೇರೆ ಪಂಚಾಯ್ತಿಯಲ್ಲಿ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗಲು ಅನುವು ಮಾಡಿಕೊಡುವ ಕುರಿತು ಸರ್ಕಾರ ಆದೇಶ ಹೊರಡಿಸಿದೆಯೇ; ಈ ಆದೇಶವನ್ನು ಪಾಲಿಸದ ಪಿ.ಡಿ.ಓ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

## ಮದ್ದೂರು ತಾ:ಕೊಪ್ಪ ಹೋ:ಗೊಲ್ಲರದೊಡ್ಡಿ ಗ್ರಾಮದಲ್ಲಿ ವಿವಿಧ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಕುರಿತು

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

ಳ೨ಳ೫ (ಳಲ೨೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕೊಪ್ಪ ಹೋಬಳಿ, ಗೊಲ್ಲರದೊಡ್ಡಿ ಗ್ರಾಮದಲ್ಲಿ ವಿವಿಧ ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು ಯೋಜನೆಯ ಕಾಮಗಾರಿ ಪ್ರಾರಂಭಗೊಂಡಿದ್ದು ಯಾವಾಗ; ಕಾಮಗಾರಿ ಮುಕ್ತಾಯಗೊಂಡಿದ್ದು ಯಾವಾಗ;

(ಆ) ಯೋಜನೆಯ ಉದ್ದೇಶ ಈಡೇರಿದೆಯೇ; ಕಾಮಗಾರಿ ಮುಕ್ತಯಗೊಂಡಿದ್ದರೂ ಸಹ ನೀರು ಸರಬರಾಜು ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾರಣಗಳೇನು;

(ಇ) ಈ ಯೋಜನೆಗೆ ವೆಚ್ಚ ಮಾಡಿರುವ ಹಣ ಎಷ್ಟು; (ವಿವರ ನೀಡುವುದು)

(ಈ) ನೀರು ಸರಬರಾಜು ಆಗದೇ ಇರಲು ಕಾರಣಕರ್ತರು ಯಾರು; ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು)

## ವೋಲ್ವೋ ಬಸ್ ನಿರ್ವಹಣೆ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೪೬ (೪೮೨೮) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೪ ವರ್ಷಗಳಲ್ಲಿ ಸಾರಿಗೆ ಇಲಾಖೆಯಡಿಯಲ್ಲಿ ಎಷ್ಟು ವೋಲ್ವೋ ಬಸ್‌ಗಳನ್ನು ಖರೀದಿಸಲಾಗಿದೆ;

(ಆ) ಬಿ.ಎಂ.ಟಿ.ಸಿ ಮತ್ತು ಕೆ.ಎಸ್.ಆರ್.ಟಿ.ಸಿ.ಯಡಿಯಲ್ಲಿ ಎಷ್ಟು ವೋಲ್ವೋ ಬಸ್‌ಗಳು ಕಾರ್ಯ ನಿರ್ವಹಿಸುತ್ತಿರುತ್ತವೆ;

(ಇ) ಕಾರ್ಯ ನಿರ್ವಹಿಸದಿರುವ ವೋಲ್ವೋ ಬಸ್‌ಗಳ ಸಂಖ್ಯೆ ಎಷ್ಟು; ಸದರಿ ಬಸ್‌ಗಳು ಕಾರ್ಯನಿರ್ವಹಿಸದಿರಲು ಕಾರಣವೇನು;

(ಈ) ವೋಲ್ವೋ ಬಸ್‌ಗಳ ನಿರ್ವಹಣೆ ಹಾಗೂ ವಾರ್ಷಿಕ ನಿರ್ವಹಣೆಯನ್ನು ಯಾರು ಮಾಡುತ್ತಿರುವರು; ನಿರ್ವಹಣೆ ಮಾಡಲು ಅನುಸರಿಸುವ ಮಾನದಂಡಗಳೇನು; ಸದರಿ ಬಸ್‌ಗಳನ್ನು ನಿರ್ವಹಣೆ ಮಾಡುತ್ತಿದ್ದಲ್ಲಿ ಏಕೆ ದುರಸ್ಥಿ ಮಾಡಿರುವುದಿಲ್ಲ; (ವಿವರ ನೀಡುವುದು)

(ಉ) ಸದರಿ ಬಸ್‌ಗಳನ್ನು ಸಾರ್ವಜನಿಕರ ಉಪಯೋಗಕ್ಕೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

## ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ, ಸರ್ಕಾರಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಸೌಲಭ್ಯ ವಿಸ್ತರಿಸುವ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೪೨೪೭ (೪೭೯೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಹಾಗೂ ಸಿಬ್ಬಂದಿಗೆ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಸಿಗುತ್ತಿರುವ ಯಾವ ಯಾವ ಸೌಲಭ್ಯಗಳನ್ನು ಇಲ್ಲಿಯವರೆಗೆ ವಿಸ್ತರಿಸಲಾಗಿದೆ; ಹಾಗೂ ಯಾವ ಯಾವ ಸೌಲಭ್ಯಗಳನ್ನು ವಿಸ್ತರಿಸಲಾಗಿಲ್ಲ;

(ಆ) ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸದಿರಲು ಕಾರಣಗಳೇನು;

(ಇ) ಸರ್ಕಾರಿ ನೌಕರರಿಗೆ ಸಿಗುವ ಎಲ್ಲ ಸೌಲಭ್ಯಗಳನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ವಿಸ್ತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

## ರಾಜ್ಯದ ಭಾಷಾ ಸೂತ್ರದ ಬದಲಾವಣೆ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೪೨೪೮ (೪೯೧೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಈಗ ತ್ರಿಭಾಷಾ ಸೂತ್ರವನ್ನು ದ್ವಿಭಾಷಾ ಸೂತ್ರಕ್ಕೆ ಪರಿವರ್ತಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆಯೇ;

(ಆ) ಹಾಗಿದ್ದಲ್ಲಿ, ಈ ಕುರಿತು ಪ್ರಕ್ರಿಯೆ ಯಾವ ಹಂತದಲ್ಲಿದೆ;

(ಇ) ಕೇಂದ್ರಿಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಕಲಿಸುವಂತೆ ಯಾವ ದಿನಾಂಕದಂದು ಆದೇಶ ಹೊರಡಿಸಲಾಗಿದೆ;

(ಈ) ಈ ಆದೇಶವನ್ನು ಕೇಂದ್ರಿಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲ ಶಾಲೆಗಳು ಪಾಲಿಸುತ್ತಿವೆಯೇ;

(ಉ) ಹಾಗಿದ್ದಲ್ಲಿ, ಎಷ್ಟನೇ ಭಾಷೆಯೆಂದು ಕೇಂದ್ರಿಯ ಪಠ್ಯಕ್ರಮದ ಶಾಲೆಗಳು ಕಲಿಸುತ್ತವೆ;

(ಊ) ಕನ್ನಡ ಭಾಷೆ ಕಡ್ಡಾಯವಾಗಿ ಕಲಿಸದ ಕೇಂದ್ರಿಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

## ೧೯೯೪–೯೫ರವರೆಗೆ ಪ್ರಾರಂಭಿಸಿದ ಶಿಕ್ಷಣ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೪೨೪೯ (೪೯೧೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೧೯೯೪–೯೫ರವರೆಗೆ ಪ್ರಾರಂಭಿಸಿದ ಎಷ್ಟು ಶಿಕ್ಷಣ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ; (ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇಲ್ಲಿಯವರೆಗೆ ವೇತನಾನುದಾನಕ್ಕೆ ಒಳಪಡಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಅನುದಾನಕ್ಕೆ ಒಳಪಟ್ಟ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿನ ಸಿಬ್ಬಂದಿಯ ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ೧೯೯೪–೯೫ರವರೆಗೆ ಪ್ರಾರಂಭಿಸಿದ ಎಷ್ಟು ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೊಳಪಡಿಸುವುದು ಬಾಕಿ ಇದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಈ ಪ್ರಸ್ತಾವನೆಗಳು ಯಾವ ಯಾವ ಹಂತದಲ್ಲಿ ಹಾಗೂ ಯಾವ ಯಾವ ಕಾರ್ಯಾಲಯಗಳಲ್ಲಿವೆ;

(ಉ) ಜಿಲ್ಲಾ ಮಟ್ಟದಲ್ಲಿ ತ್ರಿಸದಸ್ಯ ಸಮಿತಿಯ ಸಂಪೂರ್ಣ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದರೂ ತಿರಸ್ಕರಿಸಲು ಅಥವಾ ತಡೆಹಿಡಿಯಲು ಕಾರಣಗಳೇನು;

(ಊ) ತ್ರಿಸದಸ್ಯ ಸಮಿತಿಯು ಕಳಿಸಿದ ಪ್ರಸ್ತಾವನೆಗಳು ತಿರಸ್ಕರಿಸಲ್ಪಟ್ಟರೆ ತಪ್ಪು ಪ್ರಸ್ತಾವನೆ ಕಳಿಸಿದ ಮುಖ್ಯಕಾರ್ಯದರ್ಶಿಗಳು ಹಾಗೂ ಜಿಲ್ಲಾ ಉಪ ನಿರ್ದೇಶಕರುಗಳು ಉತ್ತರದಾಯಿಗಳಾಗುವುದಿಲ್ಲವೆ;

(ಋ) ಹಾಗಿದ್ದಲ್ಲಿ, ಈ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳದಿರಲು ಕಾರಣಗಳೇನು?

## ಕಾಲೇಜು ಗ್ರಂಥಪಾಲಕರ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೪೨೫೦ (೪೯೧೪) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾಲೇಜು ಶಿಕ್ಷಣ ಇಲಾಖೆಯಡಿ ಬರುವ ಕಾಲೇಜು ಗ್ರಂಥಪಾಲಕರನ್ನು ಶಿಕ್ಷಕರೆಂದು ಪರಿಗಣಿಸಿ ಯಾವಾಗ ಆದೇಶ ಹೊರಡಿಸಲಾಗಿದೆ;

(ಆ) ಈ ಆದೇಶ ಹೊರಡಿಸಿದ ನಂತರ ಕಾಲೇಜು ಶಿಕ್ಷಕರಿಗೆ ಸಿಗುತ್ತಿರುವ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸದಿರಲು ಕಾರಣಗಳೇನು;

(ಇ) ಯು.ಜಿ.ಸಿ. ವೇತನ ಪಡೆಯುತ್ತಿರುವ ಇವರು ನೆಟ್–ಸೆಟ್ ಹಾಗೂ ಪಿ.ಹೆಚ್.ಡಿ.ಗಳನ್ನು ಪಡೆದಿದ್ದರೂ ಕಾಲೇಜು ಶಿಕ್ಷಕರಿಗೆ ಸಿಗುತ್ತಿರುವ ಸೌಲಭ್ಯಗಳನ್ನು ನೀಡದಿರಲು ಕಾರಣಗಳೇನು;

(ಈ) ಎನ್.ಆರ್.ಶೆಟ್ಟಿ ವರದಿಯ ಪ್ರಕಾರ ಕಾಲೇಜು ಗ್ರಂಥಪಾಲಕರನ್ನು ವಿಶ್ವವಿದ್ಯಾಲಯ ಕಾಯ್ದೆಯಡಿ ಶಿಕ್ಷಕರೆಂದು ಪರಿಗಣಿಸಲಾಗಿದೆಯೇ; ಪರಿಗಣಿಸಿದ್ದಲ್ಲಿ, ಗ್ರಂಥಪಾಲಕ ವ್ಯಾಖ್ಯೆಯನ್ನು ತಿದ್ದುಪಡಿ ಮಾಡದಿರಲು ಕಾರಣಗಳೇನು;

(ಉ) ಪ್ರಸ್ತುತ ಗ್ರಂಥಾಲಯ ವಿಜ್ಞಾನ ವಿಷಯವನ್ನು ಕಡ್ಡಾಯವಾಗಿ ಬೋಧಿಸಲಾಗುತ್ತಿದೆಯೇ;

(ಊ) ಹಾಗಿದ್ದಲ್ಲಿ, ಗ್ರಂಥಪಾಲಕರು ಗ್ರಂಥಾಲಯ ವಿಜ್ಞಾನ ವಿಷಯವನ್ನು ಬೋಧಿಸಲು ಆದೇಶ ಹೊರಡಿಸದಿರಲು ಕಾರಣಗಳೇನು;

(ಋ) ಕಾಲೇಜು ಗ್ರಂಥಪಾಲಕರನ್ನು ಶಿಕ್ಷಕರೆಂದು ಪರಿಗಣಿಸಿ ಅವರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ಯಾವ ಯಾವ ರಾಜ್ಯಗಳಲ್ಲಿ ಈಗಾಗಲೇ ನೀಡಲಾಗುತ್ತಿದೆ;

(ಎ) ಗ್ರಂಥಪಾಲಕರನ್ನು ಬೇರೆ ಬೇರೆ ರಾಜ್ಯಗಳಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಎಂದು ಪದನಾಮ ಬದಲಿಸಿದಂತೆ ನಮ್ಮ ರಾಜ್ಯದಲ್ಲಿ ಪದನಾಮ ಬದಲಿಸಿ ಆದೇಶ ಹೊರಡಿಸಲಾಗಿದೆಯೇ;

(ಏ) ಹೊರಡಿಸದಿದ್ದಲ್ಲಿ, ಯಾವ ದಿನಾಂಕದೊಳಗೆ ಆದೇಶ ಹೊರಡಿಸಲಾಗುವುದು?

## ಗ್ರಾಮೀಣ ಕುಡಿಯುವ ನೀರು

**ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೫೧ (೪೮೭೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕರ್ತವ್ಯಗಳೇನು; ಸದರಿ ಇಲಾಖೆಗೆ ೨೦೧೬–೧೭ ನೇ ಸಾಲಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು; (ವಿವರವಾದ ಮಾಹಿತಿ ನೀಡುವುದು)

(ಆ) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ನೈರ್ಮಲ್ಯೀಕರಣಕ್ಕೆ ಸಂಬಂಧಿಸಿದಂತೆ ತಾಲ್ಲೂಕುವಾರು ಕೈಗೊಂಡ ಕಾಮಗಾರಿಗಳ ವಿವರಗಳನ್ನು ನೀಡುವುದು ಹಾಗೂ ಅದಕ್ಕೆ ಸಂಬಂಧಿಸಿದ ಖರ್ಚು ವೆಚ್ಚಗಳ ಕುರಿತು ವಿವರವಾದ ಮಾಹಿತಿ ನೀಡುವುದು?

## ಮಾನ್ವಿ ತಾಲ್ಲೂಕಿನ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೪೨೫೨ (೪೮೬೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾನ್ವಿ ತಾಲ್ಲೂಕಿನಲ್ಲಿ ಕೈಗೆತ್ತಿಕೊಂಡಿರುವ (ರಾಜೀವಗಾಂಧಿ ಟೆಕ್ನಾಲಜಿ ಮಿಷನ್) ಕಲ್ಲೂರು ಹಾಗೂ ಇತರೆ ಗ್ರಾಮಗಳು ಹಾಗೂ ಕುರ್ಡಿ ಹಾಗೂ ಇತರೆ ಗ್ರಾಮಗಳು ಈ ಎರಡು ಯೋಜನೆಗಳು ವಿಳಂಬವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಈ ಎರಡು ಯೋಜನೆಗಳನ್ನು ಕಾಲಮಿತಿ ಅವಧಿಯಲ್ಲಿ ಪೂರೈಸಲು ಸರಕಾರ ತೆಗೆದುಕೊಂಡ ಕ್ರಮಗಳೇನು;

(ಆ) ಮಾನ್ವಿ ತಾಲ್ಲೂಕಿನ ಪೋತ್ನಾಳ ಹಾಗೂ ಇತರೆ ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರಾತಿ ಮಾಡಲು ಸರಕಾರ ತೆಗೆದುಕೊಂಡ ಕ್ರಮಗಳೇನು?

## ರಾಯಚೂರು ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳನ್ನು ಪ್ರಾರಂಭಿಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

ಳ೨೫೩ (ಳ೮೭೫) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ರಾಯಚೂರು ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು; ಮತ್ತು ಭೂ ಬ್ಯಾಂಕ್ (Land Bank) ಮಾಡುವ ಪ್ರಸ್ತಾವನೆಗೆ ಸರಕಾರ ತೆಗೆದುಕೊಂಡಿರುವ ಕ್ರಮವೇನು?

## ರಾಯಚೂರು ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

ಳ೨೫ಳ (ಳ೮೭೨) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ರಾಯಚೂರು ನಗರದಲ್ಲಿ ವಿಮಾನ ನಿಲ್ದಾಣ (Airport) ನಿರ್ಮಾಣ ಮಾಡಲು ಸರಕಾರ ತೆಗೆದುಕೊಂಡ ಕ್ರಮಗಳೇನು?

## ಬಸ್ ನಿಲ್ದಾಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೪೨೫೫ (೪೮೭೧) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿರುವ ವಿವಿಧ ಬಸ್ ನಿಲ್ದಾಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳೆನು;

(ಆ) ಮಾನ್ವಿ ಪಟ್ಟಣದಲ್ಲಿ ಬಸ್ ಡಿಪೋ ನಿರ್ಮಾಣ ಮಾಡಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ರಾಯಚೂರು ಜಿಲ್ಲೆಯಲ್ಲಿ ಇನ್ನೂ ಆನೇಕ ಗ್ರಾಮಗಳಿಗೆ ಬಸ್ ಸಂಚಾರ ಇಲ್ಲದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇನ್ನು ಎಷ್ಟು ಗ್ರಾಮಗಳಿಗೆ ಬಸ್ ಸಂಚಾರ ಕಲ್ಪಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು?

## ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೪೨೫೬ (೪೮೭೩) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ರಾಯಚೂರು ನಗರ ಹಾಗೂ ಮಾನ್ವಿ ಪಟ್ಟಣಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು?

## ವಾಯು ಮಾಲಿನ್ಯ ತಪಾಸಣೆ ಕೇಂದ್ರಗಳ ಅವ್ಯವಹಾರಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೪೨೫೭ (೪೯೨೫) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾಧ್ಯಮಗಳಲ್ಲಿ ಪ್ರಸಾರವಾದ ವಾಯು ಮಾಲಿನ್ಯ ತಪಾಸಣೆ ಕೇಂದ್ರಗಳ ಕರ್ಮಕಾಂಡವು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಆ) ಈ ಹಗರಣದಲ್ಲಿ ಶಾಮೀಲಾಗಿರುವ ಭ್ರಷ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ಹೆಸರು, ವಿಳಾಸದೊಂದಿಗೆ ವಿವರ ನೀಡುವುದು;

(ಇ) ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಕಂಪನಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಹಾಗಿದ್ದಲ್ಲಿ, ಅಂತಹ ಕಂಪನಿಗಳ ವಿವರ ನೀಡುವುದು;

(ಈ) ಸರ್ಕಾರವು ಈ ಭ್ರಷ್ಟಾಚಾರವನ್ನು ಕೂಡಲೇ ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳೇನು; ಸರ್ಕಾರವು ಇದನ್ನು ಯಾವ ಕಾಲಮಿತಿಯೊಳಗೆ ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು?

## ಅನುದಾನಿತ ಪ್ರೌಢ ಶಾಲೆಗಳು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೪೨೫೮ (೪೯೨೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಇರುವ ಸರ್ಕಾರಿ ಅನುದಾನಿತ ಪ್ರೌಢ ಶಾಲೆಗಳು ಎಷ್ಟು; ತಾಲ್ಲೂಕುವಾರು ಹೆಸರಿನೊಂದಿಗೆ ಮಾಹಿತಿ ಒದಗಿಸುವುದು;

(ಆ) ಸದರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಎಷ್ಟು; ಇದರಲ್ಲಿ ಹೆಚ್ಚುವರಿ ಆಗಿರುವ ಶಿಕ್ಷಕರು ಎಷ್ಟು; (ವಿವರವಾಗಿ ತಾಲ್ಲೂಕುವಾರು ಹೆಸರು, ವಿಷಯ ಹಾಗೂ ಶಾಲೆಯ ಹೆಸರಿನೊಂದಿಗೆ ಮಾಹಿತಿ ನೀಡುವುದು)

(ಇ) ಗುಬ್ಬಿ ತಾಲ್ಲೂಕಿನ ಎಸ್ ಕೊಡಗೀನ ಹಳ್ಳಿ ಗ್ರಾಮ ಶಾಲೆಯು ತಾಲ್ಲೂಕಿಗೆ ಉತ್ತಮ ಶಾಲೆ ಎಂದು ಹೆಸರು ಪಡೆದಿದೆಯೇ;

(ಈ) ಹಾಗಿದ್ದರೆ, ಈ ಶಾಲೆಯ ಕಳೆದ ೧೦ ವರ್ಷಗಳ ಫಲಿತಾಂಶವೇನು;

(ಉ) ಈ ಶಾಲೆಯಲ್ಲಿ ಹಾಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳು ಎಷ್ಟು;

(ಊ) ಈ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಹೆಚ್ಚುವರಿ ಶಿಕ್ಷಕರಿಂದ ತುಂಬಲಾಗುವುದು?

## ಎನ್.ಆರ್.ಡಿ.ಡಬ್ಲ್ಯೂ.ಪಿ ಯೋಜನೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೪೨೫ (೪೮೯೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣಾಭಿವೃದ್ಧಿ ಇಲಾಖೆಯು N.R.D.W.P ಯೋಜನೆಯಡಿ ೨೦೧೧ರಲ್ಲಿ ಎಷ್ಟು ಜನ B.R.C/C.R.C.ಗಳನ್ನು ಯಾವ ರೀತಿ ನೇಮಕಾತಿ ಮಾಡಿಕೊಳ್ಳಲಾಗಿದೆ; (ಜಿಲ್ಲಾವಾರು, ತಾಲ್ಲೂಕುವಾರು ಹೆಸರಿನೊಂದಿಗೆ ಮಾಹಿತಿ ನೀಡುವುದು)

(ಆ) ಈ B.R.C/C.R.C.ಗಳನ್ನು ಯೋಜನೆ ಮುಗಿಯುವರೆಗೆ ಯಥಾಸ್ಥಿತಿಯಂತೆ ಮುಂದುವರೆಸಲು ಮಾನ್ಯ ಉಚ್ಚ ನ್ಯಾಯಾಲಯದಿಂದ ಆದೇಶ ಆಗಿರುವುದು ನಿಜವೇ;

(ಇ) ಈ ಸಂಬಂಧ ವ್ಯವಹಾರವು ಯಾವ ಕಡತದಲ್ಲಿ ನಡೆದಿದೆ; (ಕಡತ ಸಂಖ್ಯೆ ಒದಗಿಸುವುದು)

(ಈ) ಸದರಿ ಕಡತದ ಕಂಡಿಕೆ: ೪೫ ಮತ್ತು ೭೪, ೭೫, ೭೬ರಲ್ಲಿ ಏನು ಆದೇಶ ಮಾಡಿದ್ದಾರೆ; ಈ ಕಂಡಿಕೆಗಳ ಟಿಪ್ಪಣಿ ಹಾಳೆಗಳ ಯಥಾವತ್ ಪ್ರತಿ ನೀಡುವುದು;

(ಉ) ಸರ್ಕಾರದ ನಿರ್ಣಯಗಳನ್ನು ಸರ್ಕಾರಿ ಆದೇಶದ ಮೂಲಕ ಜಾರಿಗೆ ತರಲು ಇರುವ ತೊಂದರೆ ಏನು;

(ಊ) ತಾಂತ್ರಿಕ ತೊಂದರೆ ಇದ್ದರೆ, ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿದೆಯೇ;

(ಋ) ಕಂಡಿಕೆ ೪೫ ಮತ್ತು ೭೪,೭೫,೭೬ ರಂತೆ ಸರ್ಕಾರಿ ಆದೇಶ ಯಾವಾಗ ಹೊರಡಿಸಲಾಗುವುದು? (ವಿವರವಾದ ಮಾಹಿತಿ ಒದಗಿಸುವುದು)

## ವಾಣಿಜ್ಯ ವಾಹನಗಳ ಸ್ಪೀಡ್ ಗವರ್ನರ್ (ವೇಗ ನಿಯಂತ್ರಕ) ಅಳವಡಿಸುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೪೨೬೦ (೪೯೨೪) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಸುಲಿಗೆ ದಂಧೆಯಾಗಿ ವಾಣಿಜ್ಯ ವಾಹನಗಳ ಸ್ಪೀಡ್ ಗವರ್ನರ್ (ವೇಗ ನಿಯಂತ್ರಕ) ಅಳವಡಿಕೆಯಲ್ಲಿ ಎಡವಿರುವುದು ನಿಜವೇ; (ವಿವರ ನೀಡುವುದು)

(ಆ) ಕೇಂದ್ರ ಸರ್ಕಾರವು ಸ್ಪಷ್ಟ ನೀತಿಯೊಂದಿಗೆ ಸ್ಪೀಡ್ ಗವರ್ನರ್ ಮಾರಾಟಕ್ಕೆ ಸೂಚಿಸಿದ ೧೯ ಕಂಪನಿಗಳ ಪೈಕಿ ಕೇವಲ ೨ ಕಂಪನಿಗಳಿಗಷ್ಟೆ ಮಾರಾಟ ಹಕ್ಕು ನೀಡುವುದರ ಔಚಿತ್ಯವೇನು; ಹಾಗಿದ್ದಲ್ಲಿ, ೧೯ ಕಂಪನಿಗಳ ಹೆಸರು ವಿಳಾಸದೊಂದಿಗೆ ಮಾಹಿತಿ ನೀಡುವುದು;

(ಇ) ವಾಹನ ಮಾಲೀಕರ ಮನವಿಗೆ ಸ್ಪಂದಿಸಿ ಸರ್ಕಾರವು ನವಂಬರ್ ೭ ರಂದೇ ಸಮಸ್ಯೆಯನ್ನು ಬಗೆಹರಿಸುವುದಾಗಿ ಭರವಸೆ ನೀಡಿದ್ದರೂ, ವಿವಾದಾತ್ಮಕ ನಿಯುಮವನ್ನು ಸರ್ಕಾರ ಹಿಂಪಡೆಯದಿರಲು ಕಾರಣವೇನು; (ಸಂಪೂರ್ಣ ವಿವರ ನೀಡುವುದು)

(ಈ) ಸ್ಪೀಡ್ ಗವರ್ನರ್ ಅಳವಡಿಕೆಯಲ್ಲಿ ಕೇಂದ್ರ ಸರ್ಕಾರದ ಸ್ಪಷ್ಟ ನೀತಿಯನ್ನು ಗಾಳಿಗೆ ತೂರಿ ವಾಣಿಜ್ಯ ವಾಹನಗಳ ಮಾಲೀಕರಿಂದ ಕೋಟಿಗಟ್ಟಲೆ ಹಣವನ್ನು ಲೂಟಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಕೇಂದ್ರ ಸರ್ಕಾರದ ಸ್ಪಷ್ಟ ಸೂಚನೆಯನ್ನು ನಿರ್ಲಕ್ಷಿಸಿ, ರೂ.೩,೫೦೦ ಗಳ ಸಾಧನವನ್ನು ರೂ.೧೩೫೦೦ಕ್ಕೆ ಕೇವಲ ೨ ಕಂಪನಿಗಳ ಮುಖಾಂತರ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅಂತಹವರುಗಳ ಮೇಲೆ ಕೈಗೊಂಡಿರುವ ಕ್ರಮಗಳೇನು; ತಪ್ಪಿತಸ್ಥ ಅಧಿಕಾರಿಗಳ ಹೆಸರು, ವಿಳಾಸ ಸಹಿತ ವಿವರ ನೀಡುವುದು?

## ಶಾದಿಮಹಲ್ ನಿರ್ಮಾಣ ಕುರಿತು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೬೧ (೪೮೧೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಶಾದಿಮಹಲ್ ನಿರ್ಮಾಣ ಮಾಡುವಂತೆ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಎಷ್ಟು ಮಂಜೂರಾತಿ ಆಗಿವೆ;

(ಆ) ಟಿ. ನರಸೀಪುರ, ನಂಜನಗೂಡು ಮುಂತಾದ ಸ್ಥಳಗಳಲ್ಲಿ ಶಾದಿಮಹಲ್‌ಗಳಿಲ್ಲದೆ ಮುಸ್ಲಿಂ ಬಾಂಧವರಿಗೆ ಅನಾನುಕೂಲವಾಗುತ್ತಿರುವುದರಿಂದ ಕೂಡಲೇ ಈ ಸ್ಥಳಗಳಲ್ಲಿ ಶಾದಿಮಹಲ್ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದೇ;

(ಇ) ಅನುದಾನ ಬಿಡುಗಡೆ ಮಾಡಿ, ಕಾಮಗಾರಿಗಳನ್ನು ಕೈಗೆತ್ತಿಕೊಂಡು ಶಾದಿಮಹಲ್ ನಿರ್ಮಿಸಲು ಕೂಡಲೇ ಕ್ರಮ ಜರುಗಿಸಲಾಗುವುದೇ?

## ಶಾಸಕರಿಗೆ ಹೊರ ರಾಜ್ಯಗಳಿಗೆ ಪ್ರಯಾಣಿಸಲು ಕೆ.ಎಸ್.ಆರ್.ಟಿ.ಸಿ. ಪಾಸ್‌ಗಳಲ್ಲಿ ಅವಕಾಶ ನೀಡುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೬೨ (೪೮೧೨) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಶಾಸಕರುಗಳಿಗೆ ಕೆ.ಎಸ್.ಆರ್.ಟಿ.ಸಿ ಬಸ್ಸುಗಳಲ್ಲಿ ಸಂಚರಿಸಲು ಬಸ್ ಪಾಸ್‌ಗಳನ್ನು ನೀಡುತ್ತಿದ್ದು, ಜಿಲ್ಲೆಗಳ ಗಡಿ ಪ್ರದೇಶಗಳಿಗೆ ಮತ್ತು ಅಕ್ಕಪಕ್ಕದ ರಾಜ್ಯಗಳಿಗೆ ಸೇರಿದ ಸ್ಥಳಗಳಿಗೆ ಕಾರ್ಯಾರ್ಥವಾಗಿ ಹೋಗಬೇಕಾಗುವುದರಿಂದ ಈ ಪಾಸ್‌ಗಳನ್ನು ಉಪಯೋಗಿಸಲು ಅವಕಾಶ ಮಾಡಿಕೊಡಲಾಗುವುದೇ;

ಆ) ಬೇರೆ ಬೇರೆ ರಾಜ್ಯಗಳಿಗೆ ಕೆ.ಎಸ್.ಆರ್.ಟಿ.ಸಿ ಬಸ್‌ಗಳು ಸಂಚರಿಸುತ್ತಿದ್ದು, ಶಾಸಕರಿಗೆ ನೀಡಿರುವ ಉಚಿತ ಪಾಸ್‌ಗಳಲ್ಲಿ ಆ ರಾಜ್ಯದ ಊರುಗಳಿಗೆ ಹೋಗಿಬರಲು ಅವಕಾಶ ನೀಡಲಾಗುವುದೇ;

ಇ) ಈ ಬಗ್ಗೆ ಸರ್ಕಾರದ ನಿಲುವೇನು?

## ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣದ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೬೩ (೪೮೩೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಮಹದೇವಪುರ ಗ್ರಾಮದ ಎಲ್ಲಾ ರಸ್ತೆಗಳು ಹಾಗೂ ಪಿರಿಯಾಪಟ್ಟಣ ತಾಲ್ಲೂಕಿನ ಬಹುತೇಕ ರಸ್ತೆಗಳು ದುಸ್ಥಿತಿಯಲ್ಲಿದ್ದು, ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದೇ;

(ಆ) ಈ ಎರಡು ತಾಲ್ಲೂಕುಗಳ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಬೇಕಾದ ಅಗತ್ಯ ಅನುದಾನವನ್ನು ಕೂಡಲೇ ಮಂಜೂರು ಮಾಡಿ ಈ ಕಾಮಗಾರಿಗಳನ್ನು ಕ್ಷಿಪ್ರಗತಿಯಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆಯೇ;

(ಇ) ಮೇಲ್ಕಂಡ ಗ್ರಾಮಗಳಲ್ಲಿ ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ವಾಸಿಸುತ್ತಿರುವುದರಿಂದ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆ?

## ಪಂಚಾಯತಿಗಳಿಗೆ ಹೆಚ್ಚು ಇಂಜಿನಿಯರುಗಳನ್ನು ನೇಮಕ ಮಾಡುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೬೪ (೪೮೧೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಂಚಾಯತ್ ರಾಜ್ ಇಲಾಖೆಯಲ್ಲಿ ೧೦–೧೫ ಪಂಚಾಯತಿಗಳಿಗೆ ಒಬ್ಬರಂತೆ ಇಂಜಿನಿಯರುಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಅನೇಕ ಕಾಮಗಾರಿಗಳು ವಿಳಂಬವಾಗುತ್ತಿದ್ದು, ಮೇಲ್ವಿಚಾರಣೆ ಮಾಡುವುದರಲ್ಲೂ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಇಲಾಖೆಗೆ ಹೆಚ್ಚು ಇಂಜಿನಿಯರುಗಳನ್ನು ನೇಮಿಸಿ ತ್ವರಿತಗತಿಯಲ್ಲಿ ಕೆಲಸ ಕಾರ್ಯಗಳಾಗುವಂತೆ ಮತ್ತು ಯೋಜನೆಗಳ ಅನುಷ್ಠಾನ ಸಮರ್ಪಕವಾಗಿ ಆಗುವಂತೆ ಕ್ರಮ ಕೈಗೊಳ್ಳಲಾಗಿದೆಯೇ; (ವಿವರ ಒದಗಿಸುವುದು)

(ಇ) ಪ್ರತಿ ಪಂಚಾಯತಿಗೆ ಪ್ರತ್ಯೇಕವಾಗಿ ಇಂಜಿನಿಯರುಗಳನ್ನು ನೇಮಕ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

## ಕಳೆದ ಮೂರು ವರ್ಷಗಳಲ್ಲಿ ಇಲಾಖೆಯಿಂದ ನಿರ್ಮಿಸಲಾದ ಶೌಚಾಲಯಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೪೨೬೫ (೪೯೦೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಎಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ; (ಜಿಲ್ಲಾವಾರು/ತಾಲ್ಲೂಕುವಾರು ವಿವರ ನೀಡುವುದು)

(ಆ) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಸದಸ್ಯರುಗಳು ಕಡ್ಡಾಯವಾಗಿ ಶೌಚಾಲಯಗಳನ್ನು ಹೊಂದಿರಬೇಕೆಂಬ ನಿಯಮವಿದೆಯೇ;

(ಇ) ಇದ್ದರೆ, ಈ ನಿಯಮವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗಿದೆಯೇ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಬರ್ಹಿದೆಸೆಯನ್ನು ಮುಕ್ತಗೊಳಿಸುವ ಯೋಜನೆ ಸರ್ಕಾರ ಹೊಂದಿದೆಯೇ; ಇದ್ದರೆ ಇದನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು;

(ಉ) ಕಳೆದ ೩ ವರ್ಷಗಳಲ್ಲಿ ಈ ಯೋಜನೆಗಾಗಿ ಖರ್ಚು ಮಾಡಲಾದ ಹಣಕಾಸಿನ ವಿವರವನ್ನು ನೀಡುವುದು? (ಜಿಲ್ಲಾವಾರು/ತಾಲ್ಲೂಕುವಾರು ವಿವರ ನೀಡುವುದು)

## ರಾಜ್ಯದಲ್ಲಿ ಉಪ ಕುಲಪತಿಗಳು ನೇಮಕವಾಗದೇ ಇರುವ ವಿಶ್ವವಿದ್ಯಾಲಯ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೩೨೬೬ (೩೮೧೮) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಉಪ ಕುಲಪತಿಗಳು ನೇಮಕವಾಗದೇ ಇರುವ ವಿಶ್ವವಿದ್ಯಾಲಯಗಳೆಷ್ಟು; (ವಿವರ ನೀಡುವುದು)

(ಆ) ಈ ವಿಶ್ವವಿದ್ಯಾಲಯಗಳಲ್ಲಿ ಎಂದಿನಿಂದ ಉಪ ಕುಲಪತಿಗಳ ಹುದ್ದೆ ತೆರವಾಗಿರುತ್ತವೆ;

(ಇ) ಅನೇಕ ತಿಂಗಳುಗಳ ಕಾಲ ಹಂಗಾಮಿ ವ್ಯವಸ್ಥೆಯಲ್ಲಿ ವಿಶ್ವವಿದ್ಯಾಲಯಗಳು ಆಡಳಿತ ನಡೆಸುತ್ತಿರುವುದರಿಂದ ಶೈಕ್ಷಣಿಕ ಆಡಳಿತದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈ ಕುರಿತಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

# ರಾಜ್ಯದಲ್ಲಿ ಸರ್ಕಾರಿ/ ಖಾಸಗಿ/ಅನುದಾನಿತ ಪ್ರಾಥಮಿಕ ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಮಾಹಿತಿ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೩೨೬೭ (೩೮೧೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ/ಖಾಸಗಿ/ಅನುದಾನಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿರುವ CBSE,ICSE ಹಾಗೂ International ಶಾಲೆಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಈ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಕಲಿಯುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಈ) ಈ ಎಲ್ಲಾ ಮಾಹಿತಿಗಳನ್ನು ಶಾಲಾ–ಕಾಲೇಜುಗಳಿಂದ ಅಂತರ್ ಜಾಲದ ಮೂಲಕ ಪಡೆದು ದಾಖಲಿಸುವ ಪ್ರಕ್ರಿಯೆ ರಾಜ್ಯದಲ್ಲಿದೆಯೇ; (ವಿವರ ನೀಡುವುದು)

(ಉ) ಉಲ್ಲೇಖಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಮಾಹಿತಿಗಳು ಸರ್ಕಾರದಲ್ಲಿ ಲಭ್ಯವಿದೆಯೇ; ಇಲ್ಲದಿದ್ದಲ್ಲಿ, ಈ ಕುರಿತಾದ ಸರ್ಕಾರದ ಆಲೋಚನೆಗಳೇನು;

(ಊ) ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವ ಸಿಬ್ಬಂದಿಗಳು ಹೊಂದಿರಬೇಕಾದ ಅರ್ಹತೆಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲಾಗಿದೆಯೇ?

## ರಾಜ್ಯದಲ್ಲಿ ಕಳೆದ ೩ ವರ್ಷಗಳ ಅವಧಿಯಲ್ಲಿ ವಿವಿಧ ಗಣಿಗಾರಿಕೆ ಉದ್ಯಮಗಳಿಂದ ಅಭಿವೃದ್ಧಿ ಶುಲ್ಕದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೪೨೬೮ (೪೮೧೬) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗಣಿಗಾರಿಕಾ ಉದ್ಯಮಗಳಿಂದ ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸುತ್ತಿರುವುದು ನಿಜವೇ;

(ಆ) ಇದ್ದಲ್ಲಿ, ಕಳೆದ ೩ ವರ್ಷಗಳ ಅವಧಿಯಲ್ಲಿ ವಿವಿಧ ಗಣಿಗಾರಿಕೆ ಉದ್ಯಮಗಳಿಂದ ಸಂಗ್ರಹಿಸಿದ ಒಟ್ಟು ಹಣ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಈ ಹಣವನ್ನು ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುತ್ತಿದೆ ಮತ್ತು ಅದಕ್ಕೆ ಅಳವಡಿಸಿರುವ ಮಾನದಂಡಗಳೇನು;

(ಈ) ಕಳೆದ ೩ ವರ್ಷದ ಅವಧಿಯಲ್ಲಿ ಈ ಯೋಜನೆಯಡಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಿದ ಹಣದ ಮತ್ತು ಅಭಿವೃದ್ಧಿ ಕಾರ್ಯಗಳ ವಿವರ ನೀಡುವುದು?

## ರಾಣಿ ಚೆನ್ನಮ್ಮ ವಿಶ್ವ ವಿದ್ಯಾಲಯದ ಸ್ಥಾಪನೆಗಾಗಿ ಬೇಕಾದ ಭೂಸ್ವಾಧೀನತೆ ಪ್ರಕ್ರಿಯೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೪೨೭೯ (೪೮೧೭) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವನ್ನು ಯಾವ ವರ್ಷದಿಂದ ಆರಂಭಿಸಲಾಗಿದೆ;

(ಆ) ಈ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ;

(ಇ) ಈ ವಿಶ್ವವಿದ್ಯಾಲಯದ ವಿವಿಧ ಕಟ್ಟಡಗಳಿಗೆ ಹಲವಾರು ಕೋಟಿ ಹಣವನ್ನು ಹಂಚಿಕೆ ಮಾಡಲಾಗಿದ್ದರೂ ಅದು ಉಪಯೋಗವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನತೆಯಲ್ಲಿ ಸಮಸ್ಯೆಯಾಗಿರುವುದು ನಿಜವೇ;

(ಉ) ಹಾಗಿದ್ದಲ್ಲಿ, ಈ ವಿಶ್ವವಿದ್ಯಾಲಯಕ್ಕೆ ಬೇಕಾದ ಭೂಸ್ವಾಧೀನತೆಯನ್ನು ಪಡೆಯುವಲ್ಲಿ ಉಂಟಾಗಿರುವ ಸಮಸ್ಯೆಗಳೇನು;

(ಊ) ಭೂಸ್ವಾಧೀನತೆಯ ಈ ಪ್ರಕ್ರಿಯೆಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು?

## ಅತಿಥಿ ಶಿಕ್ಷಕರ ನೇಮಕಾತಿ

**ಶ್ರೀ ಘೋಟ್ನೇಕರ ಶ್ರೀಕಾಂತ್ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೭೦ (೪೮೦೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಕಾರವಾರ ಜಿಲ್ಲೆಯ (ಶಿರಸಿ/ಕಾರವಾರ ಶೈಕ್ಷಣಿಕ) ಶಿಕ್ಷಣ ಇಲಾಖೆಯಲ್ಲಿ ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವಲ್ಲಿ ಬಂದಿರುವ ಅನುದಾನ ಹಾಗೂ ವರ್ಷದ ಕೊನೆಯಲ್ಲಿ ಉಳಿದಿರುವ ಅನುದಾನದ ವಿವರ ಹಾಗೂ ಈ ಉಳಿಕೆ ಅನುದಾನದಲ್ಲಿ ಸರ್ಕಾರಕ್ಕೆ ಹಿಂತಿರುಗಿಸಿದ ಅನುದಾನವೆಷ್ಟು? (ಚಲನ್ ಪ್ರತಿಯ ಸಮೇತ ತಾಲ್ಲೂಕುವಾರು/ ಜಿಲ್ಲಾವಾರು ವಿವರ ನೀಡುವುದು)

## ಪ್ರಾದೇಶಿಕ ಸಾರಿಗೆ ಕಚೇರಿ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೨೭೧ (೪೮೩೭) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಜೆ.ಸಿ.ಟಿ ಹಾಗೂ ಆರ್.ಟಿ.ಓ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನದಲ್ಲಿದೆಯೇ; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವಾಗ ಭರ್ತಿ ಮಾಡಲಾಗುವುದು;

(ಆ) ಮಂಗಳೂರು ಸಾರಿಗೆ ಕಛೇರಿಯನ್ನು ನಗರದ ಹೊರ ವಲಯಕ್ಕೆ ಸ್ಥಳಾಂತರಿಸುವ ಪ್ರಸ್ತಾವನೆಯು ಇಲಾಖೆಯ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ;

(ಇ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಸುರತ್ಕಲ್ ಬಂಟ್ವಾಳದಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ ಸ್ಥಾಪನೆ ಮಾಡುವ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ ಹಾಗೂ ಇದನ್ನು ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು)

## ವಿದ್ಯಾಸಿರಿ ಯೋಜನೆ ಕುರಿತು

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೨೭೨ (೪೮೩೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಎಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ;

(ಆ) ಸರ್ಕಾರಿ ಶಾಲೆಗಳಲ್ಲಿ ಮತ್ತು ಅನುದಾನಿತ ಶಾಲೆಗಳಲ್ಲಿ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಎಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ; (ವಿವರ ಒದಗಿಸುವುದು)

(ಇ) ವಿದ್ಯಾಸಿರಿ ಯೋಜನೆಯನ್ನು ಯಾವ ಯಾವ ಸಮುದಾಯದ ಮಕ್ಕಳಿಗೆ ನೀಡಲಾಗುತ್ತಿದೆ;

(ಈ) ರಾಜ್ಯದಲ್ಲಿ ಪ್ರಸ್ತುತ ಈ ಯೋಜನೆಯನ್ನು ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಉ) ಎಲ್ಲಾ ಸಮುದಾಯದವರಿಗೂ ವಿದ್ಯಾಸಿರಿ ಯೋಜನೆಯನ್ನು ವಿಸ್ತರಿಸಲು ಸರ್ಕಾರದ ಕ್ರಮವೇನು;

(ಊ) ರಾಜ್ಯದಲ್ಲಿ ೧೦ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳ ಸಂಖ್ಯೆ ಎಷ್ಟು; ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು; (ವಿವರ ನೀಡುವುದು)

(ಎ) ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿರುವ ಒಟ್ಟು ಶಿಕ್ಷಕರ ಸಂಖ್ಯೆ ಎಷ್ಟು; ಈ ಪೈಕಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? (ವಿವರ ಒದಗಿಸುವುದು)

## ಮರಳು ಗಣಿಗಾರಿಕೆ ಸಮಸ್ಯೆ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೨೭೩ (೪೮೪೯) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಮರಳು ತೆಗೆಯಲು ಪರವಾನಿಗೆಗಳನ್ನು ನೀಡುವಾಗ ಅನುಸರಿಸುತ್ತಿರುವ ಮಾನದಂಡಗಳೇನು;

(ಆ) ಕರಾವಳಿ ಭಾಗಕ್ಕೆ ಮರಳುಗಾರಿಕೆಯ ಪ್ರತ್ಯೇಕ ನೀತಿ ಜಾರಿಗೆ ತರುವುದಾಗಿ ಇಲಾಖೆ ಘೋಷಿಸಿದ್ದರೂ ಈವರೆವಿಗೂ ಇದನ್ನು ಅನುಷ್ಠಾನಗೊಳಿಸದಿರಲು ಕಾರಣವೇನು;

(ಇ) ಮರಳುಗಾರಿಕೆಯಲ್ಲಿ ಕಳ್ಳ ಸಾಗಾಣಿಕೆ ಮಾಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ೨೦೧೫–೧೬, ೨೦೧೬–೧೭ನೇ ಸಾಲಿನಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿದೆ; ಈ ಪ್ರಕರಣಗಳಿಂದ ಎಷ್ಟು ದಂಡವನ್ನು ವಸೂಲಿ ಮಾಡಲಾಗಿದೆ; (ವಿವರ ಒದಗಿಸುವುದು)

(ಈ) ಮರಳು ಅಭಾವದಿಂದ ಕಟ್ಟಡ ಕಾಮಗಾರಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮರಳು ದರ ದುಬಾರಿಯಾಗಿರುವುದರಿಂದ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಮಂಗಳೂರಿನ ಎಲೆಕ್ಟ್ರಾನಿಕ್ ಡ್ರೈವಿಂಗ್ ಸ್ಕೂಲ್ ಯೋಜನೆ ಮತ್ತು ಟ್ರಕ್ ಟರ್ಮಿನಲ್ ಸ್ಥಾಪನೆ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೨೭೪ (೪೮೪೧) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರಿನ ಎಲೆಕ್ಟ್ರಾನಿಕ್ ಡ್ರೈವಿಂಗ್ ಸ್ಕೂಲ್ ಯೋಜನೆಯನ್ನು ಇನ್ನೂ ಕಾರ್ಯಗತಗೊಳಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವಾಗ ಈ ಯೋಜನೆಯನ್ನು ಸ್ಥಾಪನೆ ಮಾಡಲಾಗುವುದು; (ವಿವರ ನೀಡುವುದು)

(ಆ) ಮಂಗಳೂರಿನಲ್ಲಿ ಟ್ರಕ್ ಟರ್ಮಿನಲ್ ಸ್ಥಾಪನೆ ಮಾಡುವ ಪ್ರಸ್ತಾವನೆಯು ಇಲಾಖೆಯ ಮುಂದಿದೆಯೇ; ಇದ್ದರೆ ಎಲ್ಲಿ ಹಾಗೂ ಯಾವಾಗ ಪ್ರಾರಂಭಿಸಲಾಗುವುದು; ಈ ಯೋಜನೆಯ ಅನುಷ್ಠಾನದ ವಿಳಂಬಕ್ಕೆ ಕಾರಣಗಳೇನು?

## ಮಂಗಳೂರು ರೈಲ್ವೆ ನಿಲ್ದಾಣದ ಮೂಲಭೂತ ಸೌಲಭ್ಯ ಅಭಿವೃದ್ಧಿ ಕುರಿತು.

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೨೭೫ (೪೮೪೦) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ರೈಲ್ವೆ ನಿಲ್ದಾಣವನ್ನು ಅಂತರಾಷ್ಟ್ರೀಯ ಮಟ್ಟದ ರೈಲ್ವೆ ನಿಲ್ದಾಣವನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ ಆಯವ್ಯಯದಲ್ಲಿ ಘೋಷಣೆ ಮಾಡಿದ್ದರೂ ಸಹ ಇನ್ನೂ ಕಾರ್ಯಗತಗೊಳಿಸದಿರಲು ಕಾರಣವೇನು;

(ಆ) ಮಂಗಳೂರು ರೈಲ್ವೆ ನಿಲ್ದಾಣದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಇಲಾಖೆಯ ಗಮನದಲ್ಲಿದೆಯೇ; ರೈಲ್ವೆ ನಿಲ್ದಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಮಂಗಳೂರು ರೈಲ್ವೆ ನಿಲ್ದಾಣವನ್ನು ರೈಲ್ವೆ ವಿಭಾಗವನ್ನಾಗಿ ಘೋಷಣೆ ಮಾಡಬೇಕೆಂಬ ಬೇಡಿಕೆ ಯಾವ ಹಂತದಲ್ಲಿದೆ; (ವಿವರ ನೀಡುವುದು)

(ಈ) ಮಹಾಕಾಳಿ–ಕುಡುಪು ಅಂಡರ್ ಬ್ರಿಡ್ಜ್/ಓವರ್ ಬ್ರಿಡ್ಜ್ ರಚಿಸಬೇಕೆಂಬ ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಇದನ್ನು ಕಾರ್ಯಗತಗೊಳಿಸದಿರಲು ಕಾರಣವೇನು; (ವಿವರ ನೀಡುವುದು)

(ಉ) ರಾಜ್ಯದಲ್ಲಿ ರೈಲ್ವೆ ಇಲಾಖೆಯು ಅನುಷ್ಠಾನಗೊಳಿಸಿರುವ ಯೋಜನೆಗಳಾವುವು; (ವಿವರ ಒದಗಿಸುವುದು)

(ಊ) ೨೦೧೬–೧೭, ೨೦೧೭–೧೮ನೇ ಸಾಲಿನಲ್ಲಿ ರೈಲ್ವೆ ಇಲಾಖೆಯು ಕೈಗೊಂಡ ಯೋಜನೆಗಳಾವುವು? (ಪೂರ್ಣ ವಿವರ ನೀಡುವುದು)

## ಮಂಗಳೂರು ವಿಮಾನ ನಿಲ್ದಾಣದ ವಿಸ್ತರಣೆಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೨೭೬ (೩೮೮೦) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ವಿಮಾನ ನಿಲ್ದಾಣದ ವಿಸ್ತರಣೆ ಕಾಮಗಾರಿ ಯಾವ ಹಂತದಲ್ಲಿದೆ; ವಿಮಾನ ನಿಲ್ದಾಣದ ವಿಸ್ತರಣೆಗೆ ಇರುವ ಅಡ್ಡಿಗಳೇನು; (ವಿವರ ಒದಗಿಸುವುದು)

(ಆ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎಷ್ಟು ಮೀಟರ್ ರನ್‌ವೇ ಬೇಕಾಗುವುದು; (ವಿವರ ಒದಗಿಸುವುದು)

(ಇ) ರನ್‌ವೇ ಉದ್ದ ಕಡಿಮೆಯಿರುವ ಕಾರಣಕ್ಕಾಗಿ ಅಂತರರಾಷ್ಟ್ರೀಯ ಮಟ್ಟದ ವಿಮಾನಗಳು ಇಳಿಯಲು ಸಾಧ್ಯವಾಗುವುದಿಲ್ಲ ಎಂಬುದು ಸರಿಯೇ; (ವಿವರ ಒದಗಿಸುವುದು)

(ಈ) ಮಂಗಳೂರು ವಿಮಾಣ ನಿಲ್ದಾಣದಲ್ಲಿ ಏರೋಬ್ರಿಡ್ಜ್‌ಗಳ ಸಂಖ್ಯೆ ಎಷ್ಟು; ಇವುಗಳನ್ನು ಹೆಚ್ಚಿಸಲು ಬೇಡಿಕೆ ಇದ್ದರೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು? (ವಿವರ ಒದಗಿಸುವುದು)

## ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಅನುಮೋದನೆ ನೀಡಿ ಮುಂದುವರಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೭೭ (೪೮೫೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರತಿ ಗ್ರಾಮ ಪಂಚಾಯತ್‌ಗಳಿಗೆ ಮಂಜೂರಾದ ಮಾದರಿ ಹುದ್ದೆ ಮತ್ತು ಮಾದರಿ ವೇತನ ಶ್ರೇಣಿಗಳೇನು; ಸೇವಾ ವಹಿ ನಿರ್ವಹಿಸಲಾಗುತ್ತಿದೆಯೇ; ಸೇವಾ ಜೇಷ್ಠತೆ ಹೊಂದಿದ ಸಿಬ್ಬಂದಿಗಳಿಗೆ ಹಾಗೂ ಹೊಸದಾಗಿ ನೇಮಕವಾದವರಿಗೆ ಒಂದೇ ವೇತನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರಾಜ್ಯದ ವಿವಿಧ ಗ್ರಾಮ ಪಂಚಾಯತ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಸಿಬ್ಬಂದಿಗಳೆಷ್ಟು; ಅನುಮೋದನೆಗೆ ಬಾಕಿಯಿರುವ ಪ್ರಕರಣಗಳೆಷ್ಟು; (ಹುದ್ದೆವಾರು–ಜಿಲ್ಲಾವಾರು ವಿವರ ನೀಡುವುದು)

(ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಆದೇಶ ೦೪.೦೧.೨೦೦೮ ಮತ್ತು ೧೦.೦೪.೨೦೧೪ರಂತೆ ಸಿಬ್ಬಂದಿಗಳಿಗೆ ರಾಜ್ಯ ಕಾರ್ಮಿಕ ವಿಮಾ ಸೌಲಭ್ಯ ನೀಡಲಾಗುತ್ತದೆಯೇ; ಇಲ್ಲವಾದಲ್ಲಿ, ಆದೇಶ ಹೊರಡಿಸಿರುವ ಉದ್ದೇಶವೇನು;

(ಈ) ರಾಜ್ಯದ ಗ್ರಾಮ ಪಂಚಾಯತ್‌ಗಳಲ್ಲಿ ಹೊಸದಾಗಿ ಸೃಷ್ಟಿಸಿರುವ ಡಾಟಾ ಎಂಟ್ರಿ ಆಪರೇಟರ್ ಹುದ್ದೆ ನೇರ ನೇಮಕಾತಿ ಮಾಡುವುದರಿಂದ ಹಲವಾರು ವರ್ಷಗಳಿಂದ ಅನುಮೋದನೆ ಇಲ್ಲದೆ, ಕರ್ತವ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಹಾಲಿ ಹಲವಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್ ಸಿಬ್ಬಂದಿಗಳಿಗೆ ಅನುಮೋದನೆ ನೀಡಿ, ಹುದ್ದೆ ಖಾಯಂ ಮಾಡುವ ಕುರಿತು ಸರ್ಕಾರದ ನಿಲುವೇನು; ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಿದೆ?

## ಗ್ರಾಮ ಪಂಚಾಯತ್‌ಗಳಿಗೆ ಯೋಜನೆ ಸಿಬ್ಬಂದಿ ಮತ್ತು ಹಣಕಾಸುಗಳನ್ನು ವರ್ಗಾಯಿಸುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೭೮ (೪೮೫೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆಯಲ್ಲಿರುವಂತೆ, ಜವಾಬ್ದಾರಿ ನಕ್ಷೆಗಳು ನಿಯಮಗಳಾಗಿ ಕಾಯಿದೆಯ ಭಾಗವಾಗಿ ಜಾರಿಯಾಗುತ್ತದೆಯೇ; ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು;

(ಆ) ತಿದ್ದುಪಡಿ ಕಾಯಿದೆಯಲ್ಲಿರುವಂತೆ "೩ಎಫ್" ಕಾರ್ಯಕ್ರಮ ಹಣಕಾಸು ಮತ್ತು ಸಿಬ್ಬಂದಿಗಳನ್ನು ಹಂಚಿಕೆ ಮಾಡಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು;

(ಇ) ತಿದ್ದುಪಡಿ ಕಾಯಿದೆಯಂತೆ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿ ಆಯ್ಕೆಯ ಅಧಿಕಾರ ಗ್ರಾಮ ಸಭೆಗಳಿಗಿದ್ದರೂ, ವಸತಿ, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಗಂಗಾ ಕಲ್ಯಾಣ ಸೇರಿದಂತೆ ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆ ಶಾಸಕರ ಮೂಲಕವೇ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಈ ಕುರಿತು ಸರ್ಕಾರದ ನಿಲುವೇನು;

(ಈ) ಗ್ರಾಮ ಪಂಚಾಯತಿಗಳು ಸ್ವಂತ ಸರ್ಕಾರದಂತೆ ಕೆಲಸ ನಿರ್ವಹಿಸಲು ೨೯ ಇಲಾಖೆಗಳನ್ನು ಗ್ರಾಮ ಪಂಚಾಯತ್ ಅಧೀನದಲ್ಲಿ ತರುವುದು, ಅನುದಾನ ಹೆಚ್ಚಳ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆ ಮೇಲ್ದರ್ಜೆಗೆ ಏರಿಸುವುದು ಮತ್ತು ಹೆಚ್ಚುವರಿ ಸಿಬ್ಬಂದಿ ನೀಡುವುದರ ಕುರಿತು ಸರ್ಕಾರದ ನಿಲುವೇನು; ಈ ಕುರಿತು ಸರ್ಕಾರ ಕ್ರಮವೇನು? (ಸಂಪೂರ್ಣ ವಿವರ ನೀಡುವುದು)

## ಗ್ರಾಮ ಪಂಚಾಯತ್‌ಗಳಲ್ಲಿ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೭೯ (೪೮೫೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತ್‌ಗಳಿಂದ ಅನುಷ್ಠಾನಗೊಳ್ಳುತ್ತಿರುವ, ಉಸ್ತುವಾರಿ ಮಾಡುತ್ತಿರುವ ಕಾರ್ಯಕ್ರಮ, ಯೋಜನೆಗಳಾವುವು; ಇತರ ಪ್ರಕಾರ್ಯಗಳಾವುವು; (ಸಂಪೂರ್ಣ ವಿವರ ನೀಡುವುದು) ಅವುಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಕ್ರಮಗಳು ಮತ್ತು ಅನ್ಯ ಇಲಾಖೆಯ ಕಾರ್ಯಕ್ರಮಗಳಾವುವು;

(ಆ) ಗ್ರಾಮ ಪಂಚಾಯತ್‌ಗಳಿಗೆ ಮಂಜೂರಾದ ಖಾಯಂ ಹುದ್ದೆಗಳಾವುವು; ಸದರಿ ಹುದ್ದೆಗಳಿಗೆ ನೀಡುತ್ತಿರುವ ವೇತನ ಮತ್ತು ಇತರೆ ಸೌಲಭ್ಯಗಳೇನು;

(ಇ) ಗ್ರಾಮ ಪಂಚಾಯತ್‌ನ ಇಷ್ಟೊಂದು ಯೋಜನೆ ಕಾರ್ಯಕ್ರಮಗಳ ಅನುಷ್ಠಾನದ ಜವಾಬ್ದಾರಿಯನ್ನು ಕಡಿಮೆ ಸಿಬ್ಬಂದಿಯಿಂದ ಸಮರ್ಪಕವಾಗಿ ಅನುಷ್ಠಾನ ಸಾಧ್ಯವೇ; ಇಷ್ಟೊಂದು ಕಡಿಮೆ ಸಿಬ್ಬಂದಿಗೆ ಕರ್ತವ್ಯ ನಿರ್ವಹಿಸಲಾಗದ ಒತ್ತಡ ಸೃಷ್ಟಿಯಾಗಿರುವುದು ನಿಜವೇ;

(ಈ) ಇಲಾಖೆಯ ಕಾರ್ಯಕ್ರಮ ಸಮರ್ಪಕವಾಗಿ ಅನುಷ್ಠಾನಗೊಳಿಸಲು, ಗ್ರಾಮ ಪಂಚಾಯತ್‌ಗಳ ಸಿಬ್ಬಂದಿ ಸಂಖ್ಯೆಗಳನ್ನು ಹೆಚ್ಚು ಮಾಡಲು ಪ್ರತೀ ಗ್ರಾಮ ಪಂಚಾಯತ್‌ಗಳಿಗೆ ಲೆಕ್ಕಸಹಾಯಕರನ್ನು ನೀಡಲು, ತಾಲ್ಲೂಕು ಮಟ್ಟದಲ್ಲಿ ವಿವಿಧ ಯೋಜನೆಗಳಿಗೆ ಹೆಚ್ಚುವರಿ ಸಹಾಯಕ ನಿರ್ದೇಶಕರ ಹುದ್ದೆ ಸೃಜಿಸಲು, ಗ್ರಾಮೀಣಾಭಿವೃದ್ಧಿ, ಆರ್.ಡಿ.ಓ ಹುದ್ದೆ ಸೃಜನೆಯ ಅವಶ್ಯಕತೆ ಸರ್ಕಾರ ಗಮನಿಸಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು;

(ಉ) ಅನೇಕ ಆರ್ಥಿಕ ಮತ್ತು ಆಡಳಿತಾತ್ಮಕ ಜವಾಬ್ದಾರಿಯನ್ನು ನಿರ್ವಹಿಸುವ ಗ್ರಾಮ ಪಂಚಾಯತ್‌ಗಳಲ್ಲಿನ ಪಿ.ಡಿ.ಓ ಹುದ್ದೆಯನ್ನು ಗ್ರೂಪ್ ಬಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಕಳೆದ ಎರಡು ವರ್ಷದಿಂದ ಬಾಕಿಯಿರಲು ಕಾರಣವೇನು; ಸರ್ಕಾರ ಈ ಬಗ್ಗೆ ಯಾವ ರೀತಿ ಕ್ರಮ ಕೈಗೊಳ್ಳಲಿದೆ;

(ಊ) ಅಗತ್ಯ ಹೆಚ್ಚುವರಿ ಹುದ್ದೆ ಸೃಜನೆ, ಖಾಲಿ ಹುದ್ದೆಗಳ ಭರ್ತಿ, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ನಲ್ಲಿ ಅನ್ಯ ಇಲಾಖೆ ಅಧಿಕಾರಿಗಳ ಪ್ರಭಾರ ನಿಲ್ಲಿಸಿ ನೇರ ನೇಮಕಾತಿಯಲ್ಲಿ ಭರ್ತಿ ಮಾಡುವುದು, ಸೇರಿದಂತೆ ಇಲಾಖೆಯಲ್ಲಿನ ಕಾರ್ಯಕ್ರಮಗಳ ಅನುಷ್ಠಾನವನ್ನು ವ್ಯವಸ್ಥಿತವಾಗಿ ನಿರ್ವಹಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

## ಗ್ರಾಮ ಪಂಚಾಯತ್‌ಗಳ ಎಸ್ಕ್ರೋ ಖಾತೆಗಳನ್ನು ರದ್ದುಪಡಿಸಿ ನೇರವಾಗಿ ಅನುದಾನ ಬಿಡುಗಡೆ ಮಾಡುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೦ (೪೯೨೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತ್‌ಗಳ ವಿದ್ಯುತ್ ಬಿಲ್ಲುಗಳನ್ನು ಮನ್ನಾ ಮಾಡಲಾಗಿದೆಯೇ; ಒಟ್ಟು ಎಷ್ಟು ಮೊತ್ತವನ್ನು ಮನ್ನಾ ಮಾಡಲಾಗಿದೆ; ಈ ಕುರಿತು ಆದೇಶವನ್ನು ಯಾವಾಗ ಹೊರಡಿಸಲಾಗಿದೆ; (ಆದೇಶದ ಪ್ರತಿ ಒದಗಿಸುವುದು)

(ಆ) ಬಜೆಟ್‌ನಲ್ಲಿ ಘೋಷಿಸಿದಂತೆ ಗ್ರಾಮ ಪಂಚಾಯತ್‌ಗಳಿಂದ ಎಸ್ಕಾಂಗಳಿಗೆ ಪಾವತಿಸಬೇಕಾದ ಬಾಕಿ ಮನ್ನಾ ಮಾಡಿದ ನಂತರದಲ್ಲಿ, ಗ್ರಾಮ ಪಂಚಾಯತ್‌ಗಳು ಎಸ್ಕಾಂಗಳಿಗೆ ಪಾವತಿಸಲು ಬಾಕಿ ಉಳಿಸಿಕೊಂಡಿರುವ ವಿದ್ಯುತ್ ಬಿಲ್ಲಿನ ಮೊತ್ತವೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ಒದಗಿಸುವುದು)

(ಇ) ಇಲ್ಲಿಯವರೆಗೆ ೧೪ ಮತ್ತು ೧೫ನೇ ಹಣಕಾಸು ಯೋಜನೆಯ ಒಟ್ಟು ಎಷ್ಟು ಅನುದಾನವನ್ನು ವಿದ್ಯುತ್ ಬಿಲ್ಲು ಪಾವತಿಗೆ ಉಪಯೋಗಿಸಿಕೊಳ್ಳಲಾಗಿದೆ;

(ಈ) ವಿದ್ಯುತ್ ಬಿಲ್ಲುಗಳ ಪಾವತಿಯ ನಂತರವು ಎಸ್ಕ್ರೋ ಖಾತೆಗಳಲ್ಲಿ ಶಾಸನಬದ್ಧ/ಹಣಕಾಸು ಯೋಜನೆ ಅನುದಾನ ಬಳಕೆಗೆ ಲಭ್ಯವಿಲ್ಲದೇ ಉಳಿದಿರುವುದು ನಿಜವೇ;

(ಉ) ಗ್ರಾಮ ಪಂಚಾಯತ್‌ಗಳ ಎಸ್ಕ್ರೋ ಖಾತೆಗಳಲ್ಲಿ ಉಳಿದಿರುವ ಅನುದಾನವೆಷ್ಟು; (ತಾಲ್ಲೂಕುವಾರು, ಜಿಲ್ಲಾವಾರು ವಿವರ ನೀಡುವುದು)

(ಊ) ಎಸ್ಕ್ರೋ ಖಾತೆಗಳನ್ನು ರದ್ದುಗೊಳಿಸಿ ನೇರವಾಗಿ ಗ್ರಾಮ ಪಂಚಾಯತ್ ಖಾತೆಗೆ ಅನುದಾನ ಬಿಡುಗಡೆ ಮಾಡಲು, ಸರ್ಕಾರದ ನಿಲುವೇನು; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ಸಂಪೂರ್ಣ ವಿವರ ಒದಗಿಸುವುದು)

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಸಿಬ್ಬಂದಿಗಳ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೧ (೯೦೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೦೯–೨೦೧೧ನೇ ಸಾಲಿನಿಂದ ಇಲ್ಲಿಯವರೆಗೆ ಎಷ್ಟು ಜನ ಗ್ರೇಡ್–೧ ಕಾರ್ಯದರ್ಶಿ, ಪಿ.ಡಿ.ಓ, ಸಹಾಯಕ ನಿರ್ದೇಶಕರು, ಇ.ಓ., ಸಹಾಯಕ ಯೋಜನಾಧಿಕಾರಿ, ಸಹಾಯಕ ಉಪ ಕಾರ್ಯದರ್ಶಿ, ಉಪ ಕಾರ್ಯದರ್ಶಿ ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ; ಸದರಿ ನೌಕರರು ಯಾವಾಗ ಅರ್ಹತಾ ಇಲಾಖಾ ಪರೀಕ್ಷೆಯನ್ನು ಯಾವ ದಿನಾಂಕದಂದು ಮುಗಿಸಿರುತ್ತಾರೆ; (ಪ್ರತಿ ನೌಕರ/ಅಧಿಕಾರಿಯ ಹೆಸರು–ಹುದ್ದೆಯ ವಿವರ–ಇಲಾಖಾ/ಅರ್ಹತಾ ಪರೀಕ್ಷೆಯನ್ನು ಉತ್ತೀರ್ಣಗೊಂಡ ದಿನಾಂಕ–ವಿದ್ಯಾರ್ಹತೆ ಮಾಹಿತಿ ಒದಗಿಸುವುದು)

(ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇಲ್ಲಿಯವರೆಗೆ ಎಷ್ಟು ಅನ್ಯ ಇಲಾಖೆಯ ಸಿಬ್ಬಂದಿಗಳು ವಿಲೀನ ಹೊಂದಿರುತ್ತಾರೆ; (ಸಂಪೂರ್ಣ ವಿವರ ನೀಡುವುದು) (ವಿಲೀನಗೊಂಡ ನೌಕರರ ಹೆಸರು, ವಿಲೀನಗೊಂಡ ಹುದ್ದೆ–ಪ್ರಸಕ್ತ ಹುದ್ದೆಯ ವಿವರದೊಂದಿಗೆ ಇಲಾಖೆಯ ಆದೇಶ ಪ್ರತಿಯ ವಿವರ ಒದಗಿಸುವುದು)

(ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಸ್ತರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅನ್ಯ ಇಲಾಖೆಯವರು ಎಷ್ಟು ಜನ; ಯಾವ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಮೂಲ ಹುದ್ದೆ ಯಾವುದು;

(ಈ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಎಲ್ಲಾ ಸ್ತರಗಳ ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮೂಲ ಇಲಾಖೆಯವರಿಗೆ ಬಡ್ತಿ ಮೂಲಕ ನೀಡುವ ಕುರಿತು ಸರಕಾರದ ನಿಲುವೇನು; ಈ ಕುರಿತು ಸರಕಾರ ಯಾವ ಕ್ರಮ ಕೈಗೊಳ್ಳಲಿದೆ?

## ಎಸ್. ನಿಜಲಿಂಗಪ್ಪ ಶುಗರ್ ಇನ್‌ಸ್ಟಿಟ್ಯೂಟ್ ಸಮಗ್ರ ಅಭಿವೃದ್ಧಿ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೨ (೪೯೦೯) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ದಿ: ಎಸ್. ನಿಜಲಿಂಗಪ್ಪನವರ ಹೆಸರಿನಲ್ಲಿ ಸ್ಥಾಪಿಸಿರುವ ಎಸ್. ನಿಜಲಿಂಗಪ್ಪ ಶುಗರ್ ಇನ್‌ಸ್ಟಿಟ್ಯೂಟ್ ಮಹಾರಾಷ್ಟ್ರದ ಪುಣೆಯ ವಸಂದಾದ ಶುಗರ್ ಇನ್‌ಸ್ಟಿಟ್ಯೂಟ್ ಮಾದರಿಯಲ್ಲಿ ಅಭಿವೃದ್ಧಿಯಾಗದೇ ಇರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ;

(ಆ) ರಾಜ್ಯದಲ್ಲಿ ಸಕ್ಕರೆ ಉದ್ಯಮವು ವೇಗವಾಗಿ ಬೆಳೆಯುತ್ತಿರುವ ಹಿನ್ನಲೆಯಲ್ಲಿ ಬೆಳಗಾವಿಯ ಎಸ್.ನಿಜಲಿಂಗಪ್ಪ ಶುಗರ್ ಇನ್‌ಸ್ಟಿಟ್ಯೂಟ್‌ನ್ನು ಮಹಾರಾಷ್ಟ್ರದ ಪುಣೆಯ ವಸಂದಾದ ಶುಗರ್ ಇನ್‌ಸ್ಟಿಟ್ಯೂಟ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ಸನ್ ೨೦೧೬–೧೭ರಲ್ಲಿ ಎಸ್. ನಿಜಲಿಂಗಪ್ಪ ಶುಗರ್ ಇನ್‌ಸ್ಟಿಟ್ಯೂಟ್‌ನ ಸಮಗ್ರ ಅಭಿವೃದ್ಧಿಗೆ ಸರ್ಕಾರ ನೀಡಿದ ವಾರ್ಷಿಕ ಅನುದಾನವೆಷ್ಟು; ಸನ್. ೨೦೧೭–೧೮ರಲ್ಲಿ ಸದರಿ ಸಂಸ್ಥೆಯ ಅಭಿವೃದ್ಧಿಗೆ ಸರ್ಕಾರ ನಿಗಧಿಪಡಿಸಿರುವ ಅನುದಾನವೆಷ್ಟು; ಈಗಾಗಲೇ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ;

(ಈ) ಬೆಳಗಾವಿ ಎಸ್. ನಿಜಲಿಂಗಪ್ಪ ಶುಗರ್ ಇನ್‌ಸ್ಟಿಟ್ಯೂಟ್‌ನ್ನು ಹೆಚ್ಚಿನ ಅನುದಾನ ನೀಡಿ ಮಾದರಿ ಸಕ್ಕರೆ ಸಂಸ್ಥೆಯಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮವಹಿಸುವುದೇ; ಏನೇನು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು? (ವಿವರ ಒದಗಿಸುವುದು)

## ನರೇಗಾ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೩ (೪೯೦೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತಿಗಳಲ್ಲಿ ನರೇಗಾ ಯೋಜನೆಯ ಬಡವರ ಕೂಲಿ ಹಣದಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯ ಎಷ್ಟು ಗ್ರಾಮ ಪಂಚಾಯತಿಗಳಲ್ಲಿ ಅವ್ಯವಹಾರ ನಡೆದಿದೆ; ಎಷ್ಟು ಮೊತ್ತದ ನರೇಗಾ ಅನುದಾನ ದುರುಪಯೋಗವಾಗಿದೆ; (ವಿವರ ನೀಡುವುದು)

(ಇ) ನರೇಗಾ ಯೋಜನೆಯ ಅನುದಾನ ದುರುಪಯೋಗ ತಡೆಯಲು ಸರ್ಕಾರ ತೆಗೆದುಕೊಂಡ ಕಟ್ಟುನಿಟ್ಟಿನ ಕ್ರಮಗಳೇನು;

(ಈ) ನಕಲಿ ದಾಖಲೆ ಸೃಷ್ಟಿಸಿ, ಸರ್ಕಾರದ ನಿಯಮಾವಳಿಗಳ ವಿರುದ್ಧವಾಗಿ ಲಕ್ಷಾಂತರ ರೂಪಾಯಿ ನರೇಗಾ ಹಣ ದುರುಪಯೋಗ ಮಾಡಿದ ಅಧಿಕಾರಿಗಳ, ಆಡಳಿತ ವರ್ಗ, ಸಿಬ್ಬಂದಿಯ ವಿರುದ್ಧ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ; ಯಾವ ಯಾವ ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)

## ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವನ್ನು ಉನ್ನತೀಕರಿಸುವ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೪ (೪೯೦೮) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವನ್ನು ಅಂತರ್‌ರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯವಾಗಿ ಆಧುನಿಕವಾಗಿ ಉನ್ನತೀಕರಿಸಲು ಸರ್ಕಾರ ಚಿಂತಿಸುತ್ತಿದೆಯೇ;

(ಆ) ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಸ್ಪರ್ಧಿಸಿ ಯಶಸ್ವಿಯಾಗಲು ಅನುಕೂಲವಾಗುವಂತೆ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವನ್ನು ಅಂತರ್‌ರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯವಾಗಿ ಉನ್ನತೀಕರಿಸಲು ಸರ್ಕಾರವು ಏನೇನು ಕ್ರಮಗಳನ್ನು ಕೈಗೊಂಡಿದೆ;

(ಇ) ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಸ್ವಾಯತ್ತ (ಅಟೋನಾಮಸ್) ಕಾಲೇಜುಗಳು ಎಷ್ಟು; ಅವು ಯಾವುವು;

(ಈ) ಸ್ವಾಯತ್ತ ಕಾಲೇಜುಗಳಲ್ಲಿ ಯಾವ ಯಾವ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸುಗಳಿವೆ; ಪಿ.ಹೆಚ್.ಡಿ ಪದವಿಗೆ ಇರುವ ವಿಭಾಗಗಳು ಎಷ್ಟು;

(ಉ) ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಯಾವ ಯಾವ ಕಾಲೇಜುಗಳಿಗೆ ಯು.ಜಿ.ಸಿ. ಅನುದಾನ ನೀಡಲಾಗುತ್ತಿದೆ; ಈಗಾಗಲೇ ಯಾವ ಯಾವ ಕಾಲೇಜುಗಳಿಗೆ ಅನುದಾನ ಬಿಡುಗಡೆಯಾಗಿರುತ್ತದೆ; ಎಷ್ಟು ಅನುದಾನ ಬಿಡುಗಡೆಯಾಗಿರುತ್ತದೆ; ಅದರಲ್ಲಿ ಯಾವ ಯಾವ ಕಾಲೇಜುಗಳು ಎಷ್ಟೆಷ್ಟು ಅನುದಾನ ಬಳಕೆ ಮಾಡಿಕೊಂಡಿವೆ? (ವಿವರ ಒದಗಿಸುವುದು)

## ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿ ಕೊರತೆಯಿರುವ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೫ (೪೯೧೧) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಬೋಧಕರ ಹಾಗೂ ಬೋಧಕೇತರ ಸಿಬ್ಬಂದಿಗಳ ಕೊರತೆ ಹಾಗೂ ಆಡಳಿತ ನಿರ್ವಹಣೆಯು ಕೊರತೆಯಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಅಲ್ಲಿನ ಬೋಧಕರ/ಶಿಕ್ಷಕರ ಕೊರತೆಯಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದರೂ ಬೋಧಕರನ್ನು ನೇಮಕಾತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ವಿವಿಧ ವಿಭಾಗಗಳಿಗೆ ಬೋಧಕರ ಹಾಗೂ ಬೋಧಕೇತರ ಸಿಬ್ಬಂದಿಗಳ ಸಹಿತ ಮಂಜೂರಾದ ಒಟ್ಟು ಹುದ್ದೆಗಳೆಷ್ಟು; ವಿಷಯವಾರು/ವರ್ಗಾವಾರು, ವಿಭಾಗದ ಮುಖ್ಯಸ್ಥರನ್ನೊಳಗೊಂಡಂತೆ ವಿವರ ನೀಡುವುದು;

(ಈ) ಹಾಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಸಿಬ್ಬಂದಿಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; ವಿಷಯವಾರು/ವರ್ಗಾವಾರು, ವಿಭಾಗದ ಮುಖ್ಯಸ್ಥರನ್ನೊಳಗೊಂಡಂತೆ ವಿವರ ನೀಡುವುದು; ಇದರಲ್ಲಿ ಗೌರವ ಧನಕ್ಕೆ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳೆಷ್ಟು; (ವಿವರ ನೀಡುವುದು)

(ಉ) ಸದರಿ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು; (ವಿವರ ನೀಡುವುದು)

(ಊ) ಸದರಿ ವಿಶ್ವವಿದ್ಯಾಲಯಕ್ಕೆ ಮೂಲಸೌಲಭ್ಯ ಅಭಿವೃದ್ಧಿಗೆ ಸರ್ಕಾರವು ವಾರ್ಷಿಕ ಎಷ್ಟು ಅನುದಾನ ನೀಡಲಾಗುತ್ತಿದೆ; ಕಳೆದ ೩ ವರ್ಷಗಳಲ್ಲಿ ಬಿಡುಗಡೆಯಾದ ಒಟ್ಟು ಅನುದಾನವೆಷ್ಟು? (ವಿವರ ಒದಗಿಸುವುದು)

## ಲ್ಯಾಪ್‌ಟಾಪ್ ಹಗರಣದ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೬ (೪೯೧೦) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉನ್ನತ ಶಿಕ್ಷಣ ಇಲಾಖೆಯಲ್ಲಿ ಕೋಟ್ಯಾಂತರ ರೂಪಾಯಿ ಲ್ಯಾಪ್‌ಟಾಪ್ ಹಗರಣ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರದ ಕೋಟ್ಯಾಂತರ ರೂಪಾಯಿ ಹಣ ಪೋಲಾಗದಂತೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ಸನ್ ೨೦೧೬–೧೭ರಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಲ್ಯಾಪ್‌ಟಾಪ್ ವಿತರಿಸಲಾಯಿತು; ಇದಕ್ಕೆ ಮಂಜೂರಾದ ಅನುದಾನವೆಷ್ಟು; ಪ್ರತಿ ಲ್ಯಾಪ್‌ಟಾಪ್‌ನ ಬೆಲೆ ಏನು; (ವಿವರ ನೀಡುವುದು)

(ಈ) ಸನ್ ೨೦೧೭–೧೮ರಲ್ಲಿ ರಾಜ್ಯದಲ್ಲಿ ಎಷ್ಟು ಲ್ಯಾಪ್‌ಟಾಪ್ ವಿತರಿಸಲು ನಿರ್ಧರಿಸಲಾಗಿದೆ; ಯಾರು ಯಾರಿಗೆ ವಿತರಿಸಲಾಗುವುದು; ಅದಕ್ಕೆ ತಗಲುವ ಒಟ್ಟು ವೆಚ್ಚವೆಷ್ಟು; ಲ್ಯಾಪ್‌ಟಾಪ್ ಖರೀದಿ ಮತ್ತು ವಿತರಣೆಯ ಪ್ರಕ್ರಿಯೆಯ ಪೂರ್ಣ ಮಾಹಿತಿ ಒದಗಿಸುವುದು;

(ಉ) ಲ್ಯಾಪ್‌ಟಾಪ್ ಖರೀದಿಯಲ್ಲಿ ಸರ್ಕಾರಕ್ಕೆ ನಷ್ಟ/ ಮೋಸವಾಗುತ್ತಿದೆಯೆಂದು ಹಿರಿಯ ಐ.ಎ.ಎಸ್ ಅಧಿಕಾರಿಯೊಬ್ಬರು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುವುದು ನಿಜವೇ; ಪತ್ರದ ಒಕ್ಕಣೆ ಏನು? (ಸಂಪೂರ್ಣ ವಿವರ ಒದಗಿಸುವುದು)

## ತುಮಕೂರು–ನೆಲಮಂಗಲ ನಗರ ಸಾರಿಗೆ ವ್ಯವಸ್ಥೆ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೭ (೪೭೮೫) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ನಗರದಿಂದ ನೆಲಮಂಗಲಕ್ಕೆ ನಗರ ಸಾರಿಗೆ ಬಸ್ ಸಂಚಾರ ಮಾಡುತ್ತಿದೆಯೇ;

(ಆ) ಎಷ್ಟು ಬಸ್ಸುಗಳು ಪ್ರತಿ ನಿತ್ಯ ಎಷ್ಟು ಟ್ರಿಪ್‌ಗಳ ಸಂಚಾರದ ವ್ಯವಸ್ಥೆ ಮಾಡಲಾಗಿದೆ; (ವಿವರ ನೀಡುವುದು)

(ಇ) ತುಮಕೂರು ನಗರದಿಂದ ದಾಬಸ್‌ಪೇಟೆಗೆ ಹಾಲಿ ಸಂಚರಿಸುತ್ತಿರುವ ನಗರ ಸಾರಿಗೆ ಬಸ್‌ಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಈ) ದಾಬಸ್‌ಪೇಟೆಯಿಂದ ನೆಲಮಂಗಲಕ್ಕೆ ಜನ ಸಂದಣಿ ಹೆಚ್ಚಾಗಿರುವುದರಿಂದ ತುಮಕೂರು ನಗರದಿಂದ ದಾಬಸ್‌ಪೇಟೆಗೆ ಹಾಲಿ ಸಂಚರಿಸುತ್ತಿರುವ ನಗರ ಸಾರಿಗೆ ಬಸ್‌ಗಳನ್ನು ನೆಲಮಂಗಲಕ್ಕೆ ವಿಸ್ತರಣೆ ಮಾಡಲು

ಕ್ರಮ ಕೈಗೊಳ್ಳಲಾಗಿದೆಯೇ; ಇಲ್ಲದಿದ್ದಲ್ಲಿ, ವಿಸ್ತರಣೆ ಮಾಡಲು ಸರ್ಕಾರ ಕೂಡಲೇ ಕ್ರಮ ವಹಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದೇ? (ವಿವರ ನೀಡುವುದು)

## ತುಮಕೂರು ಜಿಲ್ಲೆಯಲ್ಲಿನ ಗಣಿಗಾರಿಕೆ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೮ (೪೭೮೬) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಅದಿರು ತೆಗೆಯುತ್ತಿರುವ ಗಣಿಗಾರಿಕೆಗಳೆಷ್ಟು; ಜಲ್ಲಿ ಕ್ರಷರ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಗಣಿಗಾರಿಕೆ ಮತ್ತು ಕ್ರಷರ್‌ಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು; (ವಿವರ ನೀಡುವುದು)

(ಇ) ಗಣಿಗಾರಿಕೆ ಕಂಪನಿಗಳಿಂದ ಮತ್ತು ಜಲ್ಲಿ ಕ್ರಷರ್ ಮಾಲೀಕರಿಂದ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಎಷ್ಟು ಮೊತ್ತವನ್ನು ಬಾಕಿ ಉಳಿಸಿಕೊಳ್ಳಲಾಗಿದೆ; ಈ ಮೊತ್ತವನ್ನು ವಸೂಲು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಈ) ತುಮಕೂರು ಜಿಲ್ಲೆಯಲ್ಲಿ ಎಷ್ಟು ಮರಳು ಬ್ಲಾಕ್‌ಗಳನ್ನು ಗುರುತಿಸಲಾಗಿದೆ; ಈ ಮರಳು ಬ್ಲಾಕ್‌ಗಳನ್ನು ಸಾರ್ವಜನಿಕವಾಗಿ ಹರಾಜು ಮಾಡಲು ಕ್ರಮ ವಹಿಸಲಾಗಿದೆಯೇ; (ವಿವರ ನೀಡುವುದು)

(ಉ) ತುಮಕೂರು ಜಿಲ್ಲೆಯಲ್ಲಿ ಪರವಾನಗಿ ಪಡೆದು ನಡೆಸುತ್ತಿರುವ ಜಲ್ಲಿಪುಡಿ ಕ್ರಷರ್‌ಗಳ (ಡಸ್ಟ್ ಪೌಡರ್) ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

## ತುಮಕೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ ಕೆರೆಗಳ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೮೯ (೪೮೬೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕಳೆದ ೨ ವರ್ಷದಲ್ಲಿ ಕೆರೆ ಪುನರುಜ್ಜೀವನ ಯೋಜನೆಯಡಿ ಸರ್ಕಾರದಿಂದ ಬಂದ ಅನುದಾನವೆಷ್ಟು; (ವಿವರ ಒದಗಿಸುವುದು)

(ಇ) ಬಂದ ಅನುದಾನದಲ್ಲಿ ಯಾವ ಯಾವ ಕೆರೆಗಳನ್ನು ದುರಸ್ಥಿ ಮಾಡಲಾಗಿದೆ, ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು;

(ಈ) ದುರಸ್ಥಿಗಾಗಿ ತೆಗೆದುಕೊಂಡಿರುವ ಕೆರೆಗಳ ಕಾಮಗಾರಿಗಳನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲಾಗಿದೆಯೇ; (ವಿವರ ಒದಗಿಸುವುದು)

(ಉ) ೨೦೧೭–೧೮ನೇ ಸಾಲಿನ ಅಂತ್ಯಕ್ಕೆ ಈ ಯೋಜನೆಯಲ್ಲಿ ಸರ್ಕಾರದಿಂದ ಬಂದ ಅನುದಾನವೆಷ್ಟು ಹಾಗೂ ಈ ಅನುದಾನದಲ್ಲಿ ಯಾವ ಯಾವ ಕೆರೆಗಳನ್ನು ದುರುಸ್ಥಿಪಡಿಸಲು ಯೋಜನೆ ರೂಪಿಸಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

## ಕೆ.ಐ.ಎ.ಡಿ.ಬಿ ವತಿಯಿಂದ ತುಮಕೂರಿನ ಕೆರೆಗೆ ನೀರು ತುಂಬಿಸುವ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೯೦ (೪೭೮೪) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) ವತಿಯಿಂದ ತುಮಕೂರು ನಗರದ ದೇವರಾಯಪಟ್ಟಣ ಕೆರೆಗೆ ಹೇಮಾವತಿ ನಾಲಾ ನೀರನ್ನು ಕೊಳವೆ ಮಾರ್ಗದ ಮೂಲಕ ತುಂಬಿಸಲಾಗುತ್ತಿದೆಯೇ;

(ಆ) ಹಾಗಿದ್ದಲ್ಲಿ, ಈ ಕಾಮಗಾರಿಯು ಯಾವ ಹಂತದಲ್ಲಿದೆ; (ವಿವರ ನೀಡುವುದು)

(ಇ) ಈ ನೀರು ತುಂಬಿಸುವ ಕಾಮಗಾರಿಗಾಗಿ ಅಂದಾಜುಪಡಿಸಿರುವ ಯೋಜನಾ ವೆಚ್ಚವೆಷ್ಟು; ಹಾಗೂ ಈಗಾಗಲೇ ಎಷ್ಟು ಹಣವನ್ನು ಖರ್ಚು ಮಾಡಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಈ) ದೇವರಾಯಪಟ್ಟಣ ಕೆರೆಗೆ ಎಷ್ಟು ಪ್ರಮಾಣದಲ್ಲಿ ನೀರನ್ನು ತುಂಬಿಸಲಾಗುವುದು;

(ಉ)ಈ ಕೆರೆಯ ನೀರನ್ನು ಯಾವ ಯಾವ ಉದ್ದೇಶಕ್ಕೆ ಯಾರು ಯಾರು ಬಳಸಿಕೊಳ್ಳಲು ಅನುವು ಮಾಡಿಕೊಡಲಾಗುವುದು? (ವಿವರ ನೀಡುವುದು)

## ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಯೋಜನಾ ಸಮಿತಿಗಳ ರಚನೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೯೧ (೪೭೮೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಎಷ್ಟು ಗ್ರಾಮ ಪಂಚಾಯತಿಗಳಲ್ಲಿ ಸ್ಥಾಯಿ ಸಮಿತಿಗಳನ್ನು ರಚಿಸಲಾಗಿದೆ; (ವಿವರಗಳನ್ನು ನೀಡುವುದು)

(ಆ) ಎಷ್ಟು ಗ್ರಾಮ ಪಂಚಾಯತಿಗಳಲ್ಲಿ ವಸತಿ ವಿವರಗಳನ್ನು ಗುರುತಿಸಲಾಗಿದೆ ಹಾಗೂ ವಸತಿ ಸಭೆಗಳನ್ನು ಆಯೋಜಿಸಲಾಗಿದೆ; (ವಿವರಗಳನ್ನು ನೀಡುವುದು)

(ಇ) ಎಷ್ಟು ತಾಲ್ಲೂಕು ಪಂಚಾಯತಿಗಳಲ್ಲಿ ತಾಲ್ಲೂಕು ಅಭಿವೃದ್ಧಿ ಹಾಗೂ ಯೋಜನಾ ಸಮಿತಿಗಳನ್ನು ರಚಿಸಲಾಗಿದೆ; (ವಿವರಗಳನ್ನು ನೀಡುವುದು)

(ಈ) ಎಷ್ಟು ಜಿಲ್ಲಾ ಪಂಚಾಯುತಿಗಳಲ್ಲಿ ಅಭಿವೃದ್ಧಿ ಹಾಗೂ ಯೋಜನಾ ಸಮಿತಿಗಳನ್ನು ರಚಿಸಲಾಗಿದೆ; ರಚಿಸಲಾಗದಿದ್ದಲ್ಲಿ, ರಚನೆಯಾಗದಿರುವುದಕ್ಕೆ ಕಾರಣವೇನು; (ವಿವರಗಳನ್ನು ನೀಡುವುದು)

(ಉ) ಅಭಿವೃದ್ಧಿ ಹಾಗೂ ಯೋಜನಾ ಸಮಿತಿಗಳ ಅನುಪಸ್ಥಿತಿಯಲ್ಲಿ, ಜಿಲ್ಲಾ ಅಭಿವೃದ್ಧಿ ಯೋಜನೆಗಳನ್ನು ಹೇಗೆ ಯೋಜಿಸಲಾಗುತ್ತಿದೆ;

(ಊ) ತಿದ್ದುಪಡಿ ಕಾಯ್ದೆ ೩೯ ಹೆಚ್ ರ ಪ್ರಕಾರ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಹಾಗೂ ಜಿಲ್ಲಾ ಪಂಚಾಯತಿಗಳು ೬ ತಿಂಗಳಿಗೊಮ್ಮೆ ಯೋಜನೆಗಳ ಪ್ರಗತಿಯ ಬಗ್ಗೆ ವರದಿಯೊಂದನ್ನು ತಯಾರಿಸಲು ಕ್ರಮಕೈಗೊಳ್ಳಬೇಕಾಗಿದೆಯಲ್ಲವೆ;

(ಋ) ಎಷ್ಟು ಜಿಲ್ಲೆಗಳಲ್ಲಿ ಇಂತಹ ವರದಿಗಳನ್ನು ತಯಾರಿಸಲಾಗುತ್ತದೆ? (ವಿವರಗಳನ್ನು ಒದಗಿಸುವುದು)

## ಶಿಕ್ಷಕರ ನೇಮಕಾತಿಗೆ ಅರ್ಹತೆ ಬಗ್ಗೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೯೨ (೪೯೨೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಶಾಲೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವಾಗ ಶಿಕ್ಷಕರಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಹಾಗೂ ಮಾನದಂಡಗಳೇನು;

(ಆ) ಖಾಸಗಿ ಶಾಲೆಗಳಲ್ಲೂ ಸಹ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳವಾಗ ಇದೇ ರೀತಿಯ ವಿದ್ಯಾರ್ಹತೆ ಹಾಗೂ ಮಾನದಂಡಗಳನ್ನು ಅನುಸರಿಸಬೇಕೆಂದು ಸರ್ಕಾರ ಆದೇಶ ಹೊರಡಿಸಿದೆಯೇ;

(ಇ) ಹಾಗಿದ್ದಲ್ಲಿ, ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರನ್ನು ನೇಮಕ ಮಾಡಿಕೊಂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಅಂತಹ ಪ್ರಕರಣಗಳಲ್ಲಿ ಕೈಗೊಂಡಿರುವ ಕ್ರಮಗಳೇನು;

(ಈ) ಬಹಳಷ್ಟು ಖಾಸಗಿ ಸಂಸ್ಥೆಗಳಲ್ಲಿ ನಕಲಿ/ಬೇನಾಮಿ ಪ್ರಮಾಣಪತ್ರಗಳನ್ನು ನೀಡಿ ನೇಮಕಾತಿ ಹೊಂದಿರುವ ಬಗ್ಗೆ ದೂರುಗಳು ಬಂದಿವೆಯೇ; ಈ ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

(ಉ) ನಕಲಿ ಪ್ರಮಾಣಪತ್ರಗಳನುಸಾರ ಶಿಕ್ಷಕರ ನೇಮಕಾತಿ ಮಾಡಿಕೊಂಡಿರುವ ಸಂಸ್ಥೆಗಳ ವಿರುದ್ಧ ಕೈಗೊಂಡ ಕ್ರಮಗಳೇನು?

## ಮಿನಿ ಬಸ್ ಒದಗಿಸುವ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೪೨೯೩ (೪೮೯೦) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ವಿಭಾಗ (ಕೆ.ಎಸ್.ಆರ್.ಟಿ.ಸಿ) ದಲ್ಲಿ ಒಟ್ಟು ಎಷ್ಟು ಬಸ್‌ಗಳು ಕಾರ್ಯನಿರ್ವಹಿಸುತ್ತಿವೆ;

(ಆ) ಕೆಲವು ಬಸ್‌ಗಳು ಈ ವಿಭಾಗದಲ್ಲಿ ಕಾರ್ಯನಿರ್ವಹಿಸಲು ಅನುಪಯುಕ್ತವಾಗಿ ಅವಧಿ ಮೀರಿದ್ದರೂ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ವಿಭಾಗಕ್ಕೆ ನೂತನ ಬಸ್‌ಗಳನ್ನು ಒದಗಿಸುವ ಯೋಜನೆ ಸರ್ಕಾರಕ್ಕಿದೆಯೇ;

(ಈ) ಸರ್ಕಾರದ ಆದೇಶದಂತೆ ೯ ಲಕ್ಷ ಕಿ.ಮೀ ಗೂ ಅಧಿಕ ಸಂಚರಿಸಿದ ಬಸ್‌ಗಳನ್ನು ನಿಷೇಧಿಸುವ ಕ್ರಮ ಜಾರಿಯಲ್ಲಿಲ್ಲವೇ;

(ಉ) ಗುಡ್ಡಗಾಡು ಪ್ರದೇಶ, ಮಲೆನಾಡು ಪ್ರದೇಶಗಳಿಗೆ ಮಿನಿ ಬಸ್ ಒದಗಿಸುವ ಸರ್ಕಾರದ ಯೋಜನೆ ನೆನೆಗುದಿಗೆ ಬಿದ್ದಿರಲು ಕಾರಣವೇನು; ಯಾವಾಗ ಅನುಷ್ಠಾನ ಮಾಡಲಾಗುವುದು?

## ಚಿಕ್ಕಮಗಳೂರು ವಕ್ಫ್ ಬೋರ್ಡ್‌ಗೆ ಸೇರಿದ ಮಸೀದಿಗಳ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೪೨೯೪ (೪೮೫೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಕ್ಫ್ ಬೋರ್ಡ್‌ಗೆ ಸೇರಿದ ಮಸೀದಿಗಳು ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಇವುಗಳಲ್ಲಿ ಕೆಲವು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಅವುಗಳನ್ನು ದುರಸ್ಥಿಪಡಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಮಸೀದಿಗಳನ್ನು ದುರಸ್ಥಿಪಡಿಸಲು ಕಳೆದ ೫ ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿದ ಅನುದಾನವೆಷ್ಟು; ಇದರಲ್ಲಿ ವೆಚ್ಚವಾದ ಅನುದಾನವೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಗ್ರಾಮ ಪಂಚಾಯತಿಗಳ ಸ್ವಂತ ಕಟ್ಟಡಗಳ ಬಗ್ಗೆ

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೯೫ (೪೮೮೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಎಷ್ಟು ಗ್ರಾಮ ಪಂಚಾಯತಿಗಳು ಸ್ವಂತ ಕಟ್ಟಡಗಳು ಹೊಂದಿವೆ; (ಪೂರ್ಣ ವಿವರ ನೀಡುವುದು)

(ಆ) ಸ್ವಂತ ಕಟ್ಟಡಗಳು ಹೊಂದಿಲ್ಲದ ಗ್ರಾಮ ಪಂಚಾಯತಿಗಳು ಎಷ್ಟು; (ಪೂರ್ಣ ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಸ್ವಂತ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಕಳೆದ ಮೂರು ವರ್ಷಗಳಲ್ಲಿ ಸ್ವಂತ ಕಟ್ಟಡಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ?

## ನಿರುದ್ಯೋಗಿ ಯುವಕರಿಗೆ ವಾಹನ ಸಾಲ ನೀಡುವ ಬಗ್ಗೆ

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೯೬ (೪೮೮೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ನಿರುದ್ಯೋಗ ಯುವಕರಿಗೆ ವಾಹನ ಸಾಲ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

(ಆ) ಹಾಗಿದ್ದಲ್ಲಿ, ೨೦೧೭–೧೮ನೇ ಸಾಲಿನಲ್ಲಿ ಇಲಾಖಾ ವತಿಯಿಂದ ಎಷ್ಟು ಫಲಾನುಭವಿಗಳಿಗೆ ವಾಹನ ಸೌಲಭ್ಯ ನೀಡಲಾಗಿದೆ;

(ಇ) ೨೦೧೭–೧೮ನೇ ಸಾಲಿನಲ್ಲಿ ಸದರಿ ಉದ್ದೇಶಕ್ಕಾಗಿ ಮೀಸಲಿಟ್ಟ ಅನುದಾನ ಎಷ್ಟು?

## ಉಡುಪಿ ಜಿಲ್ಲೆಯ ಮರ ಸಿಗಿಯುವ ಮತ್ತು ಮರ ನುಣುಪು ಮಾಡುವ ಘಟಕಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೯೭ (೪೮೪೭) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕಾ ಇಲಾಖೆಯಿಂದ ಮರಸಿಗಿಯುವ ಮತ್ತು ಮರವನ್ನು ನುಣುಪು ಮಾಡುವ ಘಟಕಕ್ಕೆ ಅನುಮತಿಯನ್ನು ನೀಡಲಾಗಿದೆಯೇ; (ಘಟಕಗಳ ಸಂಖ್ಯೆ, ಘಟಕದ ವಿವರ ತಾಲ್ಲೂಕುವಾರು ನೀಡುವುದು)

(ಆ) ಈ ಘಟಕಗಳ ಬಳಕೆ ಮಾಡುವ ವಸ್ತುಗಳ ಸತ್ಯಾಸತ್ಯತೆ ಬಗ್ಗೆ ಪರಿಶೀಲಿಸಿ ನಿಯಂತ್ರಿಸಲು ಇಲಾಖೆಯಿಂದ ನಿಯಂತ್ರಣಾ ವ್ಯವಸ್ಥೆ ಕಲ್ಪಿಸಲಾಗಿದೆಯೇ;

(ಇ) ಈ ಘಟಕಗಳ ಉತ್ಪನ್ನಗಳ ಮಾರಾಟಕ್ಕೆ ಇರುವ ಪರವಾನಗೆಯನ್ನು ಸಣ್ಣ ಕೈಗಾರಿಕಾ ಇಲಾಖೆಯಿಂದ ನೀಡಲಾಗುತ್ತದೆಯೇ; ಇಲ್ಲವಾದ್ದಲ್ಲಿ, ಪರವಾನಗೆ ನೀಡುವ ಪರ್ಯಾಯ ವ್ಯವಸ್ಥೆ ಯಾವುದು?

## ಪಂಚಾಯಿತಿ ರಸ್ತೆ ಗಡಿ ಅಂಚಿನಲ್ಲಿ ಕಟ್ಟಡ ನಿರ್ಮಾಣ ನಿಯಂತ್ರಿಸುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೯೮ (೪೮೪೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತಿಗಳು ಕಟ್ಟಡ ಪರವಾನಿಗೆ ನೀಡುವಾಗ ಕೆಲವು ಷರತ್ತುಗಳೊಂದಿಗೆ ರಸ್ತೆಯ ಅಂಚಿನಲ್ಲಿ ಕಟ್ಟಬಾರದೆನ್ನುವ ಷರತ್ತನ್ನು ವಿಧಿಸಿದರೂ ರಸ್ತೆಯ ಮಾರ್ಜಿನ್‌ನಲ್ಲಿ ಕಟ್ಟಡವನ್ನು ಕಟ್ಟುತ್ತಿರುವಾಗ ರಸ್ತೆಯ ರಕ್ಷಣೆ ಮತ್ತು ನಿರ್ವಹಣೆ ಜವಾಬ್ದಾರಿಯಿರುವ ಜಿಲ್ಲಾ ಪಂಚಾಯಿತಿಯ ಇಂಜಿನಿಯರ್‌ಗಳು ನಿರ್ಲಿಪ್ತರಾಗಿರುವುದರಿಂದ ರಸ್ತೆಯ ಅಂಚಿನಲ್ಲಿ ಕಟ್ಟಡಗಳು ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಪರವಾನಗೆಯನ್ನು ಮೀರಿ ರಸ್ತೆಯ ಗಡಿ ಅಂಚಿನಲ್ಲಿ ಕಟ್ಟಡವನ್ನು ಕಟ್ಟುವಾಗ ರಸ್ತೆಯ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದ ಇಂಜಿನಿಯರ್‌ರವನ್ನು ಹೊಣೆಗಾರರನ್ನಾಗಿ ಮಾಡಲಾಗುವುದೇ; ಇಲ್ಲವಾದ್ದಲ್ಲಿ, ಕಾರಣವೇನು;

(ಇ) ರಸ್ತೆಯ ಅಂಚಿನಲ್ಲಿ ಕಟ್ಟಡ ನಿರ್ಮಿಸುವುದನ್ನು ನಿಯಂತ್ರಿಸದ ಇಂಜಿನಿಯರ್‌ರವರ ಕ್ರಮವನ್ನು ಕರ್ತವ್ಯ ಚ್ಯುತಿ ಎಂದು ಪರಿಗಣಿಸಲಾಗುವುದೇ; ಈ ಬಗ್ಗೆ ಇಲಾಖೆಯು ಕೈಗೊಂಡ ಕ್ರಮವೇನು; ಈ ಕುರಿತು ಕಳೆದ ೩ ವರ್ಷದಲ್ಲಿ ದಾಖಲಾದ ಪ್ರಕರಣಗಳೆಷ್ಟು? (ವರ್ಷವಾರು, ತಾಲ್ಲೂಕುವಾರು ವಿವರ ನೀಡುವುದು)

## ನಮೂನೆ ೯,೧೧ ಎ/೧೧ ಬಿ, ವಿತರಣೆ ಹಾಗೂ ಏಕವಿನ್ಯಾಸ ನಕ್ಷೆ ಅನುಮೋದನೆ ಸಮಸ್ಯೆ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨೯ (೪೮೪೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ವಸತಿ ಯೋಜನೆಯಡಿ ಒಪ್ಪಿಗೆ ಪತ್ರದ ಆಧಾರದಲ್ಲಿ ಮನೆಯನ್ನು ನಿರ್ಮಿಸಿದವರಿಗೆ ನಮೂನೆ ೯ ಮತ್ತು ೧೧ ಎ/ ೧೧ ಬಿ ಯನ್ನು ವಿತರಿಸಲು ಅವಕಾಶವನ್ನು ಕಲ್ಪಸಲಾಗಿದೆಯೇ; ಹೌದಾದಲ್ಲಿ, ಮಾರ್ಗ ಸೂಚಿಯನ್ನು ಒದಗಿಸುವುದು;

(ಆ) ಏಕ ವಿನ್ಯಾಸ ನಕ್ಷೆಯ ಅನುಮೋದನೆಗೆ ಇರುವ ಸರ್ಕಾರದ ಮಾರ್ಗ ಸೂಚಿ ಯಾವುದು; (ಪ್ರತಿ ಒದಗಿಸುವುದು) ತಾಂತ್ರಿಕವಾಗಿ ಪರಿಣಿತಿಯನ್ನು ಹೊಂದದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಂತ್ರಿಕ ಅಭಿಪ್ರಾಯ ಪಡೆಯದೇ ನಕ್ಷಗೆ ಬೇಕಾಬಿಟ್ಟಿ ಅನುಮೋದನೆಯನ್ನು ನೀಡುವುದನ್ನು ಸರ್ಕಾರ ಗಮನಿಸಿದೆಯೇ; ಈ ಬಗ್ಗೆ ಸರ್ಕಾರದ ಕ್ರಮವೇನು;

(ಇ) ೧ ಎಕರೆಗಿಂತ ಕಡಿಮೆಯಿರುವ ಭೂ ಪರಿವರ್ತಿತ ಜಮೀನು ಬಹು ವಿನ್ಯಾಸ ನಕ್ಷೆಯನ್ನು ಅನುಮೋದಿಸುವ ಪ್ರಾಧಿಕಾರ ಯಾವುದು; ಈ ಬಗ್ಗೆ ಅನುಸರಿಸಬೇಕಾದ ಇಲಾಖಾ ಮಾರ್ಗ ಸೂಚಿಗಳು ಯಾವುವು? (ಪ್ರತಿ ಒದಗಿಸುವುದು)

(ಈ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ರಾಜ್ಯ ಹೆದ್ದಾರಿ ಲೋಕೋಪಯೋಗಿ ರಸ್ತೆಗಳ ಭೂ–ಗಡಿ ಮತ್ತು ರಸ್ತೆಯ ಮಾರ್ಜಿನ್‌ಗೆ ಸಂಬಂಧಿಸಿದಂತೆ ಏಕ ವಿನ್ಯಾಸ ನಕ್ಷೆಯ ಮಾನದಂಡಗಳೇನು?

## ಗಣಿ ಇಲಾಖೆಯ ಕಛೇರಿ ಸಿಬ್ಬಂದಿ ಮತ್ತು ಸಂಗ್ರಹವಾಗುವ ಆದಾಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೦೦ (೪೮೪೬) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವಿವಿಧ ಹಂತದ ಕಛೇರಿಗಳು ಯಾವುವು; ಈ ಕಛೇರಿಗಳಿಗೆ ಮಂಜೂರಾತಿಯಾದ ಹುದ್ದೆಗಳೆಷ್ಟು; ತೆರವಾಗಿರುವ ಹುದ್ದೆಗಳೆಷ್ಟು; ಈ ಹುದ್ದೆಗಳ ಭರ್ತಿಗೆ ಸರ್ಕಾರದ ಕ್ರಮವೇನು;

(ಆ) ಉಡುಪಿ ಜಿಲ್ಲೆಯಲ್ಲಿ ಇಲಾಖೆಯಿಂದ ಮಂಜೂರಾತಿಯಾದ ವಿವಿಧ ಪರವಾನಿಗೆಗಳ ಸಂಖ್ಯೆ ಎಷ್ಟು; ಅವು ಯಾವುವು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಕಳೆದ ೩ ವರ್ಷದಲ್ಲಿ ಉಡುಪಿ ಜಿಲ್ಲೆಯಲ್ಲಿ ದಂಡನೆಯ ಮೂಲಕ ವಸೂಲಿ ಮಾಡಿದ ಆದಾಯವೆಷ್ಟು; (ವರ್ಷವಾರು, ತಾಲ್ಲೂಕುವಾರು ವಿವರ ನೀಡುವುದು)

(ಈ) ಕೋಟ್ಯಾಂತರ ರೂಪಾಯಿ ಮೌಲ್ಯದ ಖನಿಜ ಸಂಪತ್ತು ಸಿಬ್ಬಂದಿಯ ಕೊರತೆಯಿಂದ ಲೂಟಿಯಾಗುತ್ತಿರುವುದನ್ನು ನಿಯಂತ್ರಿಸಲು ಅಸಾಧ್ಯವಾಗಿರುವುದು ಸರ್ಕಾರ ಗಮನಿಸಿದೆಯೇ; ತಾಲ್ಲೂಕಿಗೊಂದರಂತೆ ಇಲಾಖೆಯ ಕಛೇರಿಯನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರ ಹೊಂದಿದೆಯೇ; ಇಲ್ಲವಾದಲ್ಲಿ, ಕಾರಣವೇನು?

## ಮೋಡ ಬಿತ್ತನೆ ಕಾರ್ಯಕ್ರಮದ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

**ಹಾಗೂ**

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೦೧ (೪೮೦೭+೪೮೦೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೋಡ ಬಿತ್ತನೆ ಮಾಡುವ ಪ್ರಕ್ರಿಯೆಗೆ ಅನುಸರಿಸುವ ಕ್ರಮಗಳೇನು; ಇದಕ್ಕಾಗಿ ಯಾವ ಸ್ಥಳಗಳನ್ನು ಗುರುತಿಸಲಾಗಿದೆ; ಎಷ್ಟು ವಿಮಾನಗಳನ್ನು ಈ ಕಾರ್ಯಕ್ಕೆ ಬಳಸಲಾಗುತ್ತಿದೆ; ಮೋಡ ಬಿತ್ತನೆ ಕಾರ್ಯಕ್ಕಾಗಿ ಎಷ್ಟು ಹಣವನ್ನು ಮೀಸಲಿಡಲಾಗಿದೆ, ಈವರೆಗೆ ಖರ್ಚಾಗಿರುವ ಹಣ ಎಷ್ಟು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಮೋಡ ಬಿತ್ತನೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

(ಇ) ಈ ಜಿಲ್ಲೆಗಳಲ್ಲಿ ಎಲ್ಲೆಲ್ಲಿ, ಯಾವಾಗ ಮೋಡ ಬಿತ್ತನೆ ಕಾರ್ಯ ಮಾಡಲಾಗಿದೆ; ಈ ಕಾರ್ಯಕ್ಕೆ ಈವರೆಗೆ ಖರ್ಚಾಗಿರುವ ಹಣ ಎಷ್ಟು; ಈ ಕಾರ್ಯದಿಂದ ಎಷ್ಟು ಪ್ರಮಾಣದ ಮಳೆಯಾಗಿದೆ; (ಸಂಪೂರ್ಣ ವಿವರ ನೀಡುವುದು)

(ಈ) ಮೋಡ ಬಿತ್ತನೆ ಕಾರ್ಯದ ಮೇಲುಸ್ತುವಾರಿಯನ್ನು ಯಾರು ನೋಡಿಕೊಳ್ಳುತ್ತಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು)

(ಉ) ಈ ಹಿಂದೆ ಮಾಡಲಾದ ಮೋಡ ಬಿತ್ತನೆಯ ಯೋಜನೆಯನ್ನು ಯಾವ ಕಂಪನಿಗೆ ವಹಿಸಲಾಗಿತ್ತು;

(ಊ) ಮೋಡ ಬಿತ್ತನೆಯಿಂದಾದ ಪರಿಣಾಮಗಳೇನು?

## BRTS ಕಾಮಗಾರಿಗಾಗಿ ಜಾಗ ತೆರವುಗೊಳಿಸುವ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೦೨ (೪೭೭೭) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಹುಬ್ಬಳ್ಳಿ–ಧಾರವಾಡದ ಮಧ್ಯ ಪ್ರಾರಂಭವಾದ ಬಿ.ಆರ್.ಟಿ.ಎಸ್. ಕಾಮಗಾರಿಯ ಜಾಗದಲ್ಲಿರುವ ಮಂದಿರ, ಮಸೀದಿ ಹಾಗೂ ಚರ್ಚ್‌ಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; (ಸಂಪೂರ್ಣ ವಿವರ ನೀಡುವುದು)

ಆ) ಇದುವರೆಗೆ ಎಷ್ಟು ಮಂದಿರ, ಮಸೀದಿ ಹಾಗೂ ಚರ್ಚ್‌ಗಳನ್ನು ತೆರವುಗೊಳಿಸಲಾಗಿದೆ; ತೆರವಿಗೆ ಬಾಕಿಯಿರುವ ಮಂದಿರ, ಮಸೀದಿ ಹಾಗೂ ಚರ್ಚ್‌ಗಳ ಸಂಖ್ಯೆ ಎಷ್ಟು; ಇದಕ್ಕೆ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)

## ಶುದ್ಧ ಕುಡಿಯುವ ನೀರಿನ ಘಟಕಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೦೩ (೪೮೯೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಿಂದ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ; (ತಾಲ್ಲೂಕುವಾರು, ಗ್ರಾಮಗಳವಾರು ಸಂಪೂರ್ಣ ವಿವರ ನೀಡುವುದು)

(ಆ) ಎಷ್ಟು ಘಟಕಗಳು ಪ್ರಾರಂಭವಾದಾಗಿನಿಂದ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿವೆ; (ತಾಲ್ಲೂಕುವಾರು, ಗ್ರಾಮಗಳವಾರು ಸಂಪೂರ್ಣ ವಿವರ ನೀಡುವುದು)

(ಇ) ಎಷ್ಟು ಘಟಕಗಳ ಕಾರ್ಯ ಸ್ಥಗಿತವಾಗಿದೆ; (ತಾಲ್ಲೂಕುವಾರು, ಗ್ರಾಮಗಳವಾರು ಸಂಪೂರ್ಣ ವಿವರ ನೀಡುವುದು)

(ಈ) ಈ ಜಿಲ್ಲೆಗಳ ವ್ಯಾಪ್ತಿಯಿಂದ ಹೊಸದಾಗಿ ಎಷ್ಟು ಘಟಕಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಸ್ವೀಕೃತವಾಗಿದೆ; (ಗ್ರಾಮ, ತಾಲ್ಲೂಕುವಾರು ವಿವರ ನೀಡುವುದು)

(ಉ) ಹೊಸ ಘಟಕಗಳ ಪ್ರಾರಂಭಕ್ಕೆ ಹಾಕಿಕೊಳ್ಳಾಲಾಗಿರುವ ಕಾಲಮಿತಿ ಏನು?

## ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ನೀಡುವ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೦೪ (೪೭೯೫) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದ ವತಿಯಿಂದ ಸಬ್ಸಿಡಿ ರೂಪದಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ;(ತಾಲ್ಲೂಕುವಾರು, ವರ್ಷಾವಾರು ವಿವರ ನೀಡುವುದು)

ಆ) ಈ ಜಿಲ್ಲೆಗಳ ತಾಲ್ಲೂಕುವಾರು ಮತ್ತು ಕೈಗಾರಿಕಾವಾರು ಬಿಡುಗಡೆ ಮಾಡಿರುವ ಸಬ್ಸಿಡಿ ಹಣ ಮೊತ್ತವೆಷ್ಟು;(ಪೂರ್ಣ ವಿವರ ನೀಡುವುದು)

ಇ) ಈ ಸಬ್ಸಿಡಿ ಹಣ ದುರುಪಯೋಗ ಪಡಿಸಿಕೊಂಡಿರುವ ಪ್ರಕರಣಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು? (ಪ್ರಕರಣವಾರು ಸಂಪೂರ್ಣ ಮಾಹಿತಿ ನೀಡುವುದು)

## ಹುಬ್ಬಳ್ಳಿ–ಧಾರವಾಡದ BRTS ಕಾಮಗಾರಿ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೦೫ (೪೭೯೮) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ–ಧಾರವಾಡದ ಮಧ್ಯ ಪ್ರಾರಂಭವಾದ ಬಿ.ಆರ್.ಟಿ.ಎಸ್. ಕಾಮಗಾರಿಯಿಂದಾಗಿ, ಹುಬ್ಬಳ್ಳಿ–ಧಾರವಾಡದಲ್ಲಿ ಪರಿಸರ ಮಾಲಿನ್ಯವಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ತುಂಬಾ ಕೆಟ್ಟ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ನಿಧಾನಗತಿ ಕಾಮಗಾರಿಯಿಂದ ಅಪಘಾತಗಳಾಗಿ ಅಮಾಯಕರ ಪ್ರಾಣಹಾನಿಯಾಗುತ್ತಿದ್ದು, ಈ ಕುರಿತು ಜಿಲ್ಲಾಡಳಿತ ಈವರೆಗೆ ಕೈಗೊಂಡಿರುವ ಕ್ರಮಗಳೇನು;(ಸಂಪೂರ್ಣ ವಿವರ ನೀಡುವುದು)

(ಇ) ಬಿ.ಆರ್.ಟಿ.ಎಸ್. ಕಾಮಗಾರಿ ಪೂರ್ಣಗೊಳಿಸಲು ನಿಗದಿ ಪಡಿಸಿರುವ ಕಾಲಾವಧಿ ಎಷ್ಟು; ಕಾಮಗಾರಿ ವಿಳಂಬವಾಗಲು ಕಾರಣವೇನು?

## ಜಿಲ್ಲಾ ಪಂಚಾಯತಿ / ತಾಲ್ಲೂಕು ಪಂಚಾಯತಿಯಲ್ಲಿ ಖಾಲಿ ಹುದ್ದೆಗಳ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೦೬ (೪೮೧೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಶೇ. ೮೦% ರಿಂದ ೯೦% ರಷ್ಟು ಹುದ್ದೆಗಳು ಖಾಲಿ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಪ್ರಸ್ತುತ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಮಂಜೂರಾದ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; (ಜಿಲ್ಲಾ ಪಂಚಾಯತ್‌ವಾರು/ತಾಲ್ಲೂಕು ಪಂಚಾಯತ್‌ವಾರು ಮಾಹಿತಿ ನೀಡುವುದು)

(ಇ) ಇತರೆ ಇಲಾಖೆಯಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳೆಷ್ಟು; ಆರ್.ಡಿ.ಪಿ. ಆರ್ ಇಲಾಖೆಯಿಂದ ಇತರೆ ಇಲಾಖೆಗೆ ನಿಯೋಜನೆ ಮೇಲೆ ಹೋದ ಅಧಿಕಾರಿಗಳೆಷ್ಟು; ಇವರನ್ನು ಮಾತೃ ಇಲಾಖೆಗೆ ಹಿಂದಿರುಗಿಸಿಕೊಳ್ಳಲು ಕೈಗೊಂಡಿರುವ ಕ್ರಮಗಳೇನು;(ಜಿಲ್ಲಾ ಪಂಚಾಯತ್‌ವಾರು/ತಾಲ್ಲೂಕು ಪಂಚಾಯತ್‌ವಾರು ಮಾಹಿತಿ ನೀಡುವುದು)

(ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

## ಗಿರಿಭತ್ಯೆ ಯೋಜನೆ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೦೭ (೪೮೨೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶದಲ್ಲಿರುವ ಶಾಲಾ ಶಿಕ್ಷಕರಿಗೆ "ಗಿರಿ ಭತ್ಯೆ" ನೀಡುವ ವಿಚಾರವಾಗಿ ಸರ್ಕಾರ ಈವರೆಗೂ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

# MGNREG ಯೋಜನೆಯಡಿ ತಡೆಗೋಡೆ ನಿರ್ಮಾಣದ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೦೮ (೪೮೩೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶವಿದ್ದು, ಪ್ರವಾಹ ಹಾಗೂ ಅತಿಯಾದ ಮಳೆಯಿಂದ ಹಲವಾರು ಮನೆಗಳಿಗೆ ಹಾನಿಯಾಗುತ್ತಿದ್ದು, ಎಂ.ಜಿ.ಎನ್.ಆರ್.ಇ.ಜಿ ಯೋಜನೆಯಡಿಯಲ್ಲಿ ಮನೆಗಳಿಗೆ ತಡೆಗೊಡೆ ನಿರ್ಮಾಣ ಮಾಡಲು ಸರ್ಕಾರ ಈವರೆಗೂ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

# ರಾಜ್ಯದಲ್ಲಿ ಗಣಿಗಾರಿಕೆಗಳ ಬಗ್ಗೆ

**ಶ್ರೀ ಬಿ.ಜೆ ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೦೯ (೪೮೦೩) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಬ್ಬಿಣ ಮತ್ತು ಅದಿರು ಗಣಿಗಾರಿಕೆ, ಮರಳು ಗಣಿಗಾರಿಕೆ ಕಲ್ಲು ಗಣಿಗಾರಿಕೆ ಮತ್ತು ಇತರೆ ಗಣಿಗಾರಿಕೆಗಳು ನಡೆಯುತ್ತಿರುವುದು ನಿಜವೇ;

(ಆ) ಹಾಗಿದ್ದರೆ, ೨೦೧೩–೧೪ ರಿಂದ ೨೦೧೭–೧೮ರವರೆಗೆ ಸರ್ಕಾರಕ್ಕೆ ಕಬ್ಬಿಣ ಮತ್ತು ಅದಿರು ಗಣಿಗಾರಿಕೆ, ಮರಳು ಗಣಿಗಾರಿಕೆ, ಕಲ್ಲು ಗಣಿಗಾರಿಕೆ

ಮತ್ತು ಇತರೆ ಗಣಿಗಾರಿಕೆಗಳಿಗೆ ಅನುಮತಿ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಸರ್ಕಾರ ಅನುಮತಿ ನೀಡಿದ ಸಂಖ್ಯೆ ಎಷ್ಟು; ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಪ್ರಸ್ತುತ ರಾಜ್ಯದಲ್ಲಿ ನಡೆಯುತ್ತಿರುವ ಗಣಿಗಾರಿಕೆಗಳು ಯಾವುವು; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಇದುವರೆವಿಗೆ ಎಷ್ಟು ಪ್ರಮಾಣದ ಗಣಿಗಾರಿಕೆಯ ಕಚ್ಚಾ ವಸ್ತುಗಳು ಯಾವ ಯಾವ ದೇಶಕ್ಕೆ ರಫ್ತಾಗಿದೆ, ಇದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬಂದ ಆದಾಯ ಎಷ್ಟು? (೨೦೧೩–೧೪ ರಿಂದ ೨೦೧೭–೧೮ರವರೆಗೆ ವರ್ಷಾವಾರು ವಿವರ ನೀಡುವುದು)

## ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ

**ಶ್ರೀ ಬಿ.ಜೆ ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೧೦ (೪೭೭೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಗೆ ಯೋಜನೆ ನಿರ್ಮಿಸಿರುವುದು ನಿಜವೇ;

(ಆ) ಹಾಗಿದ್ದರೆ, ಈ ಯೋಜನೆಯಡಿಯಲ್ಲಿ ೨೦೧೩–೧೪ ರಿಂದ ೨೦೧೭–೧೮ ರವರೆಗೆ ಪ್ರಾರಂಭ ಮಾಡಿರುವ ನೀರಿನ ಘಟಕಗಳ ಸಂಖ್ಯೆ ಎಷ್ಟು; ಪೂರ್ಣಗೊಂಡ ನೀರಿನ ಘಟಕಗಳ ಸಂಖ್ಯೆ ಎಷ್ಟು; ಬಾಕಿ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಈ ಯೋಜನೆಗೆ ಕೇಂದ್ರ ಸರ್ಕಾರ ನೀಡಿರುವ ಅನುದಾನ ಎಷ್ಟು; ರಾಜ್ಯ ಸರ್ಕಾರ ನೀಡಿರುವ ಅನುದಾನ ಎಷ್ಟು? (ವಿವರ ನೀಡುವುದು)

## ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಹಾಗೂ ಸಾಕ್ಸ್ ಮತ್ತು ಪಠ್ಯ ಪುಸ್ತಕಗಳ ವಿತರಣೆ ಬಗ್ಗೆ

**ಶ್ರೀ ಬಿ.ಜೆ ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೧೧ (೪೮೦೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಹಾಗೂ ಸಾಕ್ಸ್ ಮತ್ತು ಪಠ್ಯ ಪುಸ್ತಕಗಳು ಉಚಿತವಾಗಿ ವಿತರಣೆ ಮಾಡುತ್ತಿರುವುದು ನಿಜವೇ;

(ಆ) ಹಾಗಿದ್ದರೆ, ೨೦೧೩–೧೪ ರಿಂದ ೨೦೧೭–೧೮ರವರೆಗೆ ಎಷ್ಟು ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಹಾಗೂ ಸಾಕ್ಸ್ ಮತ್ತು ಪಠ್ಯ ಪುಸ್ತಕ ಉಚಿತವಾಗಿ ವಿತರಿಸಲಾಗಿದೆ; ಕಳಪೆ ಗುಣಮಟ್ಟದ ಸಮವಸ್ತ್ರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ನಡೆಸಿರುವ "ಪ್ರವಾಸಿ ಭಾರತೀಯ ದಿವಸ್" ಹಾಗೂ "ಮೇಕ್ ಇನ್ ಇಂಡಿಯಾ" ಸಮ್ಮೇಳನದ ಬಗ್ಗೆ

**ಶ್ರೀ ಬಿ.ಜೆ ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೧೨ (೪೮೦೨) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ "ಪ್ರವಾಸಿ ಭಾರತೀಯ ದಿವಸ್' ಹಾಗೂ "ಮೇಕ್ ಇನ್ ಇಂಡಿಯಾ" ಸಮ್ಮೇಳನಗಳು ಆಯೋಜನೆಗೊಂಡಿರುವುದು ನಿಜವೇ;

(ಆ) ಹಾಗಿದ್ದರೆ, ೨೦೧೩–೧೪ ರಿಂದ ೨೦೧೭–೧೮ರವರೆಗೆ ಈ ಸಮ್ಮೇಳನದಿಂದ ರಾಜ್ಯಕ್ಕೆ ಎಷ್ಟು ಕೋಟಿ ಹಣ ಬಂಡವಾಳ ಹೂಡಿಕೆಯಾಗಿದೆ; ಎಷ್ಟು ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕಾ ಘಟಕಗಳು ನೋಂದಣಿಯಾಗಿವೆ; ಇದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ಸಿಕ್ಕಿದೆ; (ಪೂರ್ಣ ವಿವರ ನೀಡುವುದು)

(ಇ) 'ಜವಳಿ ನೀತಿ'ಯಿಂದ ೨೦೧೩–೧೪ ರಿಂದ ೨೦೧೭–೧೮ರವರೆಗೆ ಎಷ್ಟು ಕೋಟಿ ಹಣ ಬಂಡವಾಳ ಹೂಡಿಕೆಯಾಗಿದೆ; ಎಷ್ಟು ಜನರಿಗೆ ಉದ್ಯೋಗವಕಾಶ ಸಿಕ್ಕಿದೆ; (ಪೂರ್ಣ ವಿವರ ನೀಡುವುದು)

(ಈ) ತುಮಕೂರು ಜಿಲ್ಲೆ, ವಸಂತ ನರಸಾಪುರದಲ್ಲಿ 'ಮೆಷಿನ್ ಟೂಲ್ ಕೈಗಾರಿಕಾ ಪಾರ್ಕ್' ಅಭಿವೃದ್ಧಿ ಪಡಿಸಲಾಗಿದೆಯೇ? (ಅಭಿವೃದ್ಧಿ ಪಡಿಸಿದ್ದರೆ, ಸಂಪೂರ್ಣ ವಿವರ ನೀಡುವುದು)

## ಸ್ವಚ್ಛ ಭಾರತ ಯೋಜನೆಯ ಬಗ್ಗೆ

**ಶ್ರೀ ಬಿ.ಜೆ ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೧೩ (೪೮೦೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸ್ವಚ್ಛ ಭಾರತ ಯೋಜನೆ ರಾಜ್ಯದಲ್ಲಿ ಜಾರಿಯಲ್ಲಿರುವುದು ನಿಜವೇ;

(ಆ) ಹಾಗಿದ್ದರೆ, ಸರ್ಕಾರ ಸಾರ್ವಜನಿಕರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲು ಕೈಗೊಂಡಿರುವ ಕಾರ್ಯ ಕ್ರಮಗಳೇನು; ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು; ಖರ್ಚು ಮಾಡಿದ ಹಾಗೂ ಬಾಕಿ ಹಣ ಎಷ್ಟು; (ವಿವರ ನೀಡುವುದು)

(ಇ) ಸರ್ಕಾರ ಇದುವರೆಗೆ ಎಷ್ಟು ಸ್ವಚ್ಛತಾ ಆಂದೋಲನಗಳನ್ನು ಹಮ್ಮಿಕೊಂಡಿದೆ? (ಸಂಪೂರ್ಣ ವಿವರ ನೀಡುವುದು)

# ಗುತ್ತಿಗೆ ಆಧಾರದಲ್ಲಿ ನೇಮಕಗೊಂಡ ಶಿಕ್ಷಕರ ಪಿಂಚಣಿ ಪುನರ್ ನಿಗದಿಗೊಳಿಸುತ್ತಿರುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೪೩೧೪ (೪೭೭೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾಯಂಗೊಂಡ ಗುತ್ತಿಗೆ ಆಧಾರದ ಶಿಕ್ಷಕರು–ಉಪನ್ಯಾಸಕರು ನಿವೃತ್ತಿಯಾದಾಗ ಅವರ ಪಿಂಚಣಿಯನ್ನು ಪುನರ್‌ನಿಗದಿಗೊಳಿಸಲಾಗಿದೆಯೇ; (ವಿವರ ನೀಡುವುದು)

(ಆ) ಗುತ್ತಿಗೆ ಶಿಕ್ಷಕರು, ಉಪನ್ಯಾಸಕರು ನಿವೃತ್ತಿಯಾದಾಗ ಯಾವ ಸರ್ಕಾರಿ ಆದೇಶದ ಆಧಾರದ ಮೇಲೆ ವೇತನ ಪುನರ್‌ನಿಗದಿ ಮಾಡಲಾಗಿದೆ; ಈ ಆದೇಶದಿಂದ ಸದರಿ ನೌಕರರಿಗೆ ಆರ್ಥಿಕವಾಗಿ ಬಹಳ ತೊಂದರೆಯಾಗುವುದಿಲ್ಲವೆ; (ಆದೇಶದ ಪ್ರತಿ ನೀಡುವುದು)

(ಇ) ಸರ್ಕಾರವು ಗುತ್ತಿಗೆ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ಯಾವುದೇ ಆರ್ಥಿಕ ಸೌಲಭ್ಯಗಳನ್ನು ಕಡಿತಗೊಳಿಸುವುದಿಲ್ಲವೆಂದು ಭರವಸೆ ನೀಡಿದೆಯೇ;

(ಈ) ಗುತ್ತಿಗೆ ಶಿಕ್ಷಕರಿಗೆ ತೊಂದರೆಯಾಗಿರುವ ಡಿ.ಪಿ.ಎ.ಆರ್. ೧೨ ಎಸ್‌ಆರ್‌ಇ:೧೯೯೭ ಹಾಗೂ ಇಡಿ:೪೧೯:ಡಿಜಿಡಿ:೨೦೧೩, ದಿನಾಂಕ:೮–೬–೨೦೧೬ರ ಆದೇಶವನ್ನು ಹಿಂಪಡೆಯಲು ಸರ್ಕಾರ ಕ್ರಮಕೈಗೊಳ್ಳುವುದೇ? (ವಿವರ ನೀಡುವುದು)

## ಪರಿಷ್ಕೃತ ಎ.ಐ.ಸಿ.ಟಿ.ಇ ವೇತನ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೪೩೧೫ (೪೭೭೪) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ವರ್ಗದವರಿಗೆ ಪರಿಷ್ಕೃತ ಎ.ಐ.ಸಿ.ಟಿ.ಇ. ವೇತನವನ್ನು ಯಾವ ದಿನಾಂಕದಿಂದ ನೀಡಲಾಗಿದೆ; (ವಿವರ ಒದಗಿಸುವುದು)

(ಆ) ಎಷ್ಟು ಮಂದಿಗೆ ಪರಿಷ್ಕೃತ ಎ.ಐ.ಸಿ.ಟಿ.ಇ ವೇತನ ನೀಡಲಾಗಿದೆ; (ವಿವರ ಒದಗಿಸುವುದು)

(ಇ) ಸದರಿಯವರಿಗೆ ಪರಿಷ್ಕೃತ ಎ.ಐ.ಸಿ.ಟಿ.ಇ ವೇತನದ ಸಂಬಂಧ ನೀಡಬೇಕಾಗಿರುವ ಬಾಕಿ ಮೊತ್ತವೆಷ್ಟು; (ವಿವರ ಒದಗಿಸುವುದು)

(ಈ) ಇದುವರೆವಿಗೂ ಬಾಕಿ ಮೊತ್ತವನ್ನು ಪಾವತಿಸದಿರಲು ಕಾರಣಗಳೇನು;

(ಉ) ಯಾವ ಕಾಲಮಿತಿಯಲ್ಲಿ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲಾಗುವುದು?

## ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳಿಗೆ ವೇತನಾನುದಾನ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೪೩೧೬ (೪೭೭೩) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೧೯೯೪ ರಿಂದ ೧೯೯೫ನೇ ಸಾಲಿನವರೆಗೆ ಪ್ರಾರಂಭವಾಗಿರುವ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಸದರಿ ಕಾಲೇಜುಗಳ ಬೋಧಕ/ಬೋಧಕೇತರರಿಗೆ ವೇತನಾನುದಾನ ನೀಡಲು ಸರ್ಕಾರ ಚಿಂತಿಸಿರುವುದೇ;

(ಇ) ಸರ್ಕಾರ ವೇತನಾನುದಾನ ನೀಡುವ ಸಂಬಂಧ ಇದುವರೆಗೆ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)

(ಈ) ಸದರಿ ಕಾಲೇಜುಗಳ ಸಿಬ್ಬಂದಿಗೆ ವೇತನಾನುದಾನ ನೀಡಲು ಅಗತ್ಯವಿರುವ ಅಂದಾಜು ಮೊತ್ತವೆಷ್ಟು ಹಾಗೂ ವೇತನಾನುದಾನ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

## ಪ್ರೊ: ವೈದ್ಯನಾಥನ್‌ರವರ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸದಿರುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೪೩೧೭ (೪೭೭೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದೈಹಿಕ ಶಿಕ್ಷಣ ಉನ್ನತೀಕರಣ ಸಂಬಂಧ ಪ್ರೊ:ವೈದ್ಯನಾಥನ್‌ರವರು ನೀಡಿರುವ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳೇನು; (ವಿವರ ಒದಗಿಸುವುದು)

(ಆ) ವರದಿಯ ಮುಖ್ಯಾಂಶಗಳನ್ನು ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆಯೇ; (ವಿವರ ಒದಗಿಸುವುದು)

(ಇ) ವರದಿಯ ಮುಖ್ಯ ಅಂಶಗಳನ್ನು ಅನುಷ್ಠಾನಗೊಳಿಸಲು ವಿಳಂಬವಾಗುತ್ತಿರಲು ಕಾರಣಗಳೇನು;

(ಈ) ವರದಿಯ ಶಿಫಾರಸ್ಸಿನಂತೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡದಿರಲು ಕಾರಣಗಳೇನು;

(ಉ) ಯಾವ ಕಾಲಮಿತಿಯಲ್ಲಿ ವರದಿಯ ಮುಖ್ಯ ಅಂಶಗಳನ್ನು ಜಾರಿಗೊಳಿಸಿ ಅನುಷ್ಠಾನಗೊಳಿಸಲಾಗುತ್ತದೆ?

## ಬಿ.ಎಡ್., ಪದವಿ ಹೊಂದದ ಉಪನ್ಯಾಸಕರ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೪೩೧೮ (೪೯೧೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈ ಹಿಂದೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಬಿ.ಎಡ್., ಪದವಿ ಹೊಂದದೆ ಇದ್ದಂತಹ ಉಪನ್ಯಾಸಕರುಗಳನ್ನು ಬಿ.ಎಡ್., ಪದವಿಯನ್ನು ಮಾಡಲು ವೇತನ ಸಹಿತ ನಿಯೋಜಿಸಲಾಗಿತ್ತೆ; (ವಿವರ ಒದಗಿಸುವುದು)

(ಆ) ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಬಿ.ಎಡ್., ಪದವಿ ಹೊಂದದ, ಅನುದಾನಕ್ಕೆ ಒಳಪಟ್ಟಿರುವ ಉಪನ್ಯಾಸಕರುಗಳು ಇದ್ದಾರೆಯೆ; ಇದ್ದಲ್ಲಿ, ಒಟ್ಟು ಎಷ್ಟು ಉಪನ್ಯಾಸಕರುಗಳು ಇದ್ದಾರೆ; (ವಿವರ ಒದಗಿಸುವುದು)

(ಇ) ಅನುದಾನಕ್ಕೆ ಒಳಪಟ್ಟಿರುವ ಉಪನ್ಯಾಸಕರುಗಳಿಗೂ ಸಹ ಸರ್ಕಾರಿ ಉಪನ್ಯಾಸಕರುಗಳಿಗೆ ನೀಡಿದ್ದ ಸೌಲಭ್ಯದ ರೀತಿ ಬಿ.ಎಡ್., ಪದವಿಗೆ ವೇತನ ಸಹಿತ ನಿಯೋಜಿಸಲು ಸರ್ಕಾರ ಮುಂದಾಗುವುದೇ?

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಿಕ್ಷಕರುಗಳಿಗೆ ಕನಿಷ್ಠ ವೇತನ ನಿಗಧಿಪಡಿಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೪೩೧೯ (೪೯೨೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಖಾಸಗಿ ಶಾಲೆಗಳ ಶಿಕ್ಷಕರಿಗೆ ಸರ್ಕಾರ ನಿಗಧಿಪಡಿಸಿರುವ ಕನಿಷ್ಠ ವೇತನವೆಷ್ಟು;

(ಆ) ಕಳೆದ ಮೂರು ವರ್ಷಗಳಿಂದ ಶಿಕ್ಷಕರ ಕನಿಷ್ಠ ವೇತನವನ್ನು ಹೆಚ್ಚಿಸಲಾಗಿದೆಯೇ;

(ಇ) ಶಿಕ್ಷಕರುಗಳ ಕನಿಷ್ಠ ವೇತನ ಹೆಚ್ಚಿಸಲು ಸರ್ಕಾರ ಮುಂದಾಗುವುದೇ;

(ಈ) ಶಿಕ್ಷಕರುಗಳಿಗೆ ಕನಿಷ್ಠ ೨೫ ಸಾವಿರ ವೇತನ ನಿಗಧಿ ಮಾಡುವಲ್ಲಿ ಸರ್ಕಾರದ ನಿಲುವೇನು?

## ಬಿ.ಎಡ್., ಪದವಿ ಮಾಡಲು ನಿಯೋಜನೆಗೊಂಡಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೪೩೨೦ (೪೯೨೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪದವಿ ಪೂರ್ವ ಶಿಕ್ಷಣ ಇಲಾಖೆಗೆ ೨೦೧೩ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಾಗಿ ನೇಮಕಗೊಂಡು

ಬಿ.ಎಡ್., ಪದವಿ ಮಾಡಲು ನಿಯೋಜನೆಗೊಂಡಿರುವ ಉಪನ್ಯಾಸಕರುಗಳಿಗೆ ಮಾಡಿರುವ ಡೈಸ್–ನಾನ್ ಷರತ್ತನ್ನು ಕುರಿತು ವಿವರ ನೀಡುವುದು;

(ಆ) ಸದರಿ ಷರತ್ತಿನಿಂದಾಗಿ, ಇದಕ್ಕೆ ಒಳಪಟ್ಟಿರುವ ಉಪನ್ಯಾಸಕರುಗಳು ಯಾವ ರೀತಿಯ ತೊಂದರೆ ಅನುಭವಿಸುತ್ತಿದ್ದಾರೆ; ಈ ಕುರಿತು ಸದರಿ ಉಪನ್ಯಾಸಕರುಗಳು ಈ ಸಂಬಂಧ ಕೋರಿಕೆಯ ಪತ್ರವನ್ನು ನೀಡಿದ್ದಾರೆಯೇ; (ವಿವರ ನೀಡುವುದು)

(ಇ) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಜೊತೆ ಸಮಾಲೋಚಿಸಿ ಸದರಿ ಡೈಸ್–ನಾನ್ ಷರತ್ತನ್ನು ಹಾಕಲಾಗಿತ್ತೆ; (ವಿವರ ಒದಗಿಸುವುದು)

(ಈ) ಸದರಿ ಡೈಸ್–ನಾನ್ ಷರತ್ತುನ್ನು ತೆಗೆದು ಹಾಕಲು ಶಿಕ್ಷಣ ಇಲಾಖೆಯೇ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುಲು ಸಾಧ್ಯವಿಲ್ಲವೇ; ಸದರಿ ಷರತ್ತನ್ನು ತೆಗೆದು ಹಾಕುವ ಬಗ್ಗೆ ಸರ್ಕಾರದ ನಿಲುವೇನು?

## ಸರ್ಕಾರಿ ಪ್ರಾಥಮಿಕ, ಪ್ರೌಢಶಿಕ್ಷಣ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿನ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ಪದೋನ್ನತಿ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೪೩೨೧ (೪೯೧೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿನ ಶಿಕ್ಷಕರುಗಳ ಹಾಗೂ ಉಪನ್ಯಾಸಕರ ಪದೋನ್ನತಿಯನ್ನು ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಮಾಣದಲ್ಲಿ ಮಾಡಲಾಗಿದೆ; (ಸಂಕ್ಷಿಪ್ತ ವಿವರವನ್ನು ಒದಗಿಸುವುದು)

(ಆ) ಸದರಿ ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿನ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ಪದೋನ್ನತಿ ಮಾಡಬೇಕಾದ ಪ್ರಕ್ರಿಯೆ ಎಷ್ಟು ಬಾಕಿ ಇರುತ್ತದೆ; (ವಿವರ ಒದಗಿಸುವುದು)

(ಇ) ಪ್ರತಿ ವರ್ಷ ಮಾಡಬೇಕಾಗಿರುವ ಸದರಿ ಪದೋನ್ನತಿಗಳನ್ನು ಆಯಾ ವರ್ಷವೇ ಮಾಡಲು ಸರ್ಕಾರ ಮುಂದಾಗುವುದೇ; ಅದಕ್ಕಾಗಿ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು;

(ಈ) ಕಾಲಕಾಲಕ್ಕೆ ಪದೋನ್ನತಿಯನ್ನು ನೀಡುವ ಸಲುವಾಗಿ ಪ್ರತಿ ವರ್ಷ ಒಂದು ಕಾಲಮಿತಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲು ಸರ್ಕಾರ ಮುಂದಾಗುವುದೇ?

## ಸಕ್ಕರೆ ಕಾರ್ಖಾನೆಗಳ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೩೨೨ (೪೮೮೦) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ಕಳೆದ ೧೦ ವರ್ಷಗಳಿಂದ ಉತ್ಪಾದನೆಯಾಗುತ್ತಿರುವ ಕಬ್ಬಿನ ಪ್ರಮಾಣವೆಷ್ಟು; ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಪ್ರತಿ ವರ್ಷ ಎಷ್ಟು ಮೆಟ್ರಿಕ್ ಟನ್ ಕಳೆದ ೧೦ ವರ್ಷಗಳಲ್ಲಿ ಬೆಳೆಯಲಾಗಿದೆ; ಪ್ರತಿ ವರ್ಷ ಎಷ್ಟು ಸಕ್ಕರೆಯನ್ನು ಉತ್ಪಾದನೆ ಮಾಡಲಾಗಿದೆ;

(ಆ) ರಾಜ್ಯದಲ್ಲಿ ರಾಜ್ಯ ಸರ್ಕಾರದ ಅನುಮತಿ ಪಡೆದು ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳೆಷ್ಟು; ಅನಧಿಕೃತ ಎಷ್ಟು; ಎಷ್ಟು ಸಕ್ಕರೆ ಕಾರ್ಖಾನೆಗಳು ಖಂಡಸಾರಿ ಉತ್ಪಾದನೆಗೆ ಅನುಮತಿ ನೀಡಲಾಗಿದೆ; ರಾಜ್ಯದ ಸಕ್ಕರೆ ಕಾರ್ಖಾನೆಗಳು ಯಾವ ಯಾವ ಇಲಾಖೆಯಡಿ ಮತ್ತು ಯಾವ ಯಾವ ಕಾಯ್ದೆಯಡಿಯಲ್ಲಿ ನಿಯಂತ್ರಣಕ್ಕೆ ಒಳಪಡುತ್ತದೆ;

(ಇ) ಹೊಸ ಸಕ್ಕರೆ ಕಾರ್ಖಾನೆಗಳನ್ನು ತೆರೆಯಲು ರಾಜ್ಯ ಸರ್ಕಾರ ವಿಧಿಸಿರುವ ಮಾನದಂಡಗಳೇನು; ಕಳೆದ ೪ ವರ್ಷಗಳಲ್ಲಿ ಎಷ್ಟು ಹೊಸ ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ನೀಡಲಾಗಿದೆ; ಅನುಮತಿಗಾಗಿ ಬಾಕಿ ಇರುವ ಅರ್ಜಿಗಳೆಷ್ಟು;

(ಈ) ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟಂತೆ ಕಳೆದ ೧೦ ವರ್ಷಗಳಲ್ಲಿ ಯಾವ ಯಾವ ನ್ಯಾಯಾಲಯದಲ್ಲಿ ಯಾವ ಯಾವ ಪ್ರಕರಣಗಳು ಯಾವ ಯಾವ ಕಾರಣಕ್ಕಾಗಿ ದಾಖಲಾಗಿರುತ್ತದೆ; ಬಾಕಿ ಇರುವ ಪ್ರಕರಣಗಳೆಷ್ಟು;

(ಉ) ರಾಜ್ಯದಲ್ಲಿ ಸಕ್ಕರೆ ದಾಸ್ತಾನಿಗೆ ಎಷ್ಟು ಗೋದಾಮುಗಳನ್ನು ನಿರ್ಮಿಸಲಾಗಿದೆ; ಪ್ರತಿವರ್ಷ ಎಷ್ಟು ಸಕ್ಕರೆಯನ್ನು ಗೋದಾಮುಗಳಲ್ಲಿ ಸಂರಕ್ಷಣೆ ಮಾಡಲಾಗುತ್ತಿದೆ; ಮತ್ತು ಎಷ್ಟು ಸಕ್ಕರೆಯನ್ನು ರಫ್ತು ಮಾಡಲಾಗುತ್ತಿದೆ; ಎಷ್ಟು ಸಕ್ಕರೆಯನ್ನು ನಮ್ಮ ರಾಜ್ಯದ ಮಾರುಕಟ್ಟೆಯ ಮೂಲಕ ಬಳಸಲಾಗುತ್ತಿದೆ; ಎಷ್ಟು ಸಕ್ಕರೆಯನ್ನು ಹೊರ ರಾಜ್ಯಕ್ಕೆ ಕಳುಹಿಸಲಾಗುತ್ತದೆ?

## ಕೈಗಾರಿಕಾ ಬೆಳವಣಿಗೆ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೩೨೩ (೪೮೭೮) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೪ ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ ಆರ್ಥಿಕ ಬೆಳವಣಿಗೆ ಎಷ್ಟಿರುತ್ತದೆ; ಕಳೆದ ೪ ವರ್ಷಗಳಲ್ಲಿ ರಾಜ್ಯದಲ್ಲಿ ಸ್ಥಾಪನೆಯಾಗಿರುವ ಬೃಹತ್ ಕೈಗಾರಿಕೆಗಳು ಎಷ್ಟು ಮತ್ತು ಅವುಗಳ ಹೂಡಿಕೆಯ ಪ್ರಮಾಣವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕಳೆದ ೪ ವರ್ಷದಲ್ಲಿ ಕರ್ನಾಟಕದಲ್ಲಿ ಜಿ.ಎಸ್.ಡಿ.ಪಿ ಬೆಳವಣಿಗೆ ಎಷ್ಟು; (ಶೇಕಡವಾರು ಮತ್ತು ವಾರ್ಷಿಕ ಮೊತ್ತ ಸಹಿತವಾಗಿ) ಈ ಬೆಳವಣಿಗೆಯು ದೇಶದ ಬೆಳವಣಿಗೆಯು ಪ್ರಮಾಣಕ್ಕೆ ಅನುಗುಣವಾಗಿದೆಯೇ ಮತ್ತು ಕಳೆದ ೪ ವರ್ಷದಲ್ಲಿ ರಾಜ್ಯದ ಜನರ ತಲಾವಾರು ಜೆ.ಡಿ.ಪಿ ಬೆಳವಣಿಗೆ ಎಷ್ಟು;

(ಇ) ಕಳೆದ ೪ ಆರ್ಥಿಕ ವರ್ಷಗಳಲ್ಲಿ ಕರ್ನಾಟಕದಲ್ಲಿ ಹೂಡಿರುವ ವಿದೇಶಿ ನೇರ ಹೂಡಿಕೆ ಎಷ್ಟು; (ಎಫ್.ಡಿ.ಐ) ಕಳೆದ ೪ ವರ್ಷಗಳಲ್ಲಿ ಬೃಹತ್ ಕೈಗಾರಿಕೆಗಳು ಹಾಗೂ ವಿದೇಶಿ ಬಂಡವಾಳ ನೇರ ಹೂಡಿಕೆಯ ಮೂಲಕ ಕರ್ನಾಟಕದಲ್ಲಿ ಎಷ್ಟು ಮಂದಿಗೆ ಉದ್ಯೋಗ ದೊರಕಿರುತ್ತದೆ; ಇವುಗಳಲ್ಲಿ ಕೃಷಿ, ಕೈಗಾರಿಕಾ ಹಾಗೂ ಸೇವಾ ಕ್ಷೇತ್ರದಲ್ಲಿ ದೊರೆತಿರುವ ಉದ್ಯೋಗ ಪ್ರಮಾಣವೆಷ್ಟು; ರಾಜ್ಯದ ಜೆ.ಡಿ.ಪಿ ದರದ ಕೃಷಿ ಕೈಗಾರಿಕಾ ಮತ್ತು ಸೇವಾ ಕ್ಷೇತ್ರದ ಶೇಕಡವಾರು ಬೆಳವಣಿಗೆ ಎಷ್ಟು;

(ಈ) ಕಳೆದ ೪ ವರ್ಷಗಳಲ್ಲಿ ಬೃಹತ್ ಕೈಗಾರಿಕೆಗಳ ಮೇಲೆ ಎಷ್ಟು ಬಂಡವಾಳ ಹೂಡಲಾಗಿದೆ; ಈ ಕೈಗಾರಿಕೆಗಳ ಮೇಲೆ ಸಾರ್ವಜನಿಕ ವಲಯದಿಂದ ಎಷ್ಟು ಸಾಲ ಪಡೆಯಲಾಗಿದೆ ಮತ್ತು ಸರ್ಕಾರಕ್ಕೆ ಎಷ್ಟು ಆದಾಯ ಬಂದಿರುತ್ತದೆ? (ವಿವರಗಳನ್ನು ನೀಡುವುದು)

## ಅಲ್ಪಸಂಖ್ಯಾತರ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೩೨೪ (೪೮೮೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಸರ್ಕಾರವು ಕಳೆದ ೪ ಆರ್ಥಿಕ ವರ್ಷಗಳಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ವಕ್ಫ್ ಇಲಾಖೆಗೆ ನೀಡಿರುವ ಆಯುವ್ಯಯುದ ಅನುದಾನವೆಷ್ಟು; ಇದರಲ್ಲಿ ಬಳಕೆಯಾಗಿರುವ ಹಣವೆಷ್ಟು; ಈ ವರ್ಷ ಆಯವ್ಯಯದಲ್ಲಿ ಎಷ್ಟು ಹಣ ನೀಡಲಾಗಿದೆ ಮತ್ತು ಇಲ್ಲಿಯುವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ;

(ಆ) ರಾಜ್ಯದ ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಅಲ್ಪ ಸಂಖ್ಯಾತರ ಇಲಾಖೆಯಿಂದ ರಾಜ್ಯ ಸರ್ಕಾರವು ನೀಡುತ್ತಿದೆ; ರಾಜ್ಯದಲ್ಲಿ ಕಳೆದ ೪ ವರ್ಷಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಈ ಯೋಜನೆಗಳ ಲಾಭ ದೊರೆತಿರುತ್ತದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಶ್ರೀ ಸಯ್ಯದ್ ಅಹಮ್ಮದ್ ಖಾನ್ ಸ್ಟಡಿ & ರಿಸರ್ಚ್ ಕೇಂದ್ರವನ್ನು ಯಾವಾಗ ಸ್ಥಾಪನೆ ಮಾಡಲಾಗಿದೆ; ಇದಕ್ಕೆ ನೀಡುತ್ತಿರುವ ವಾರ್ಷಿಕ ಅನುದಾನವೆಷ್ಟು; ಇಲ್ಲಿಯವರೆಗೆ ಎಷ್ಟು ಅನುದಾನ ನೀಡಲಾಗಿದೆ; ಈ ಕೇಂದ್ರದಲ್ಲಿ ಪೂರ್ಣ ಪ್ರಮಾಣದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇಮಿಸಲಾಗಿದೆಯೇ;

(ಈ) ಬಿದಾಯಿ ಯೋಜನೆಯನ್ನು ರಾಜ್ಯ ಸರ್ಕಾರ ಯಾವಾಗ ಜಾರಿಗೊಳಿಸಿತು; ಇಲ್ಲಿಯವರೆಗೆ ಈ ಯೋಜನೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಇದರ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ರಾಜ್ಯದಲ್ಲಿ ಎಷ್ಟು ಮೌಲಾನ್ ಅಜಾದ್ ಶಾಲೆಗಳನ್ನು ತೆರೆಯಲಾಗಿದೆ; ಇವುಗಳಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಊ) ೦೧.೦೪.೨೦೧೩ ರಿಂದ ರಾಜ್ಯ ಸರ್ಕಾರ ಇಲ್ಲಿಯವರೆಗೆ ಎಷ್ಟು ಅಲ್ಪ ಸಂಖ್ಯಾತರ ಕಾಲೋನಿ ಅಭಿವೃದ್ಧಿ ಮಾಡಿರುತ್ತದೆ; ಪ್ರತಿ ಕಾಲೋನಿ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ಎಷ್ಟು ಕನಿಷ್ಠ ಮತ್ತು ಗರಿಷ್ಠ ಹಣ ನೀಡಲಾಗುತ್ತಿದೆ; ಪ್ರಸಕ್ತ ಸಾಲಿನಲ್ಲಿ ಎಷ್ಟು ಪ್ರದೇಶಗಳನ್ನು ಈ ಯೋಜನೆಯಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಪಿ.ಡಿ.ಓ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೩೨೫ (೪೮೬೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಯಲ್ಲಿರುವ ತಾಲ್ಲೂಕುವಾರು ಗ್ರಾಮಪಂಚಾಯತಿಗಳೆಷ್ಟು; ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಇ–ಖಾತೆ ವ್ಯವಸ್ಥೆ ಜಾರಿಗೊಳಿಸಲಾಗಿದೆಯೇ; ಇಲ್ಲದೇ ಇದ್ದಲ್ಲಿ, ಯಾವ ಯಾವ ಗ್ರಾಮಪಂಚಾಯತಿಗಳಲ್ಲಿ ಬಾಕಿ ಇದೆ; ತುಮಕೂರು ಜಿಲ್ಲೆಯ ಎಲ್ಲಾ

ಗ್ರಾಮಪಂಚಾಯತಿಗಳ ಪಿ.ಡಿ.ಓ ಗಳನ್ನು ನೇಮಕ ಮಾಡಲಾಗಿದೆಯೇ; ಎಷ್ಟು ಪಿ.ಡಿ.ಓ ಗಳಿಗೆ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ; ಖಾಲಿ ಇರುವ ಪಿ.ಡಿ.ಓ ಹುದ್ದೆಗಳೆಷ್ಟು; ಇದರಲ್ಲಿ ನೇರ ನೇಮಕಾತಿ ಮೂಲಕ ಎಷ್ಟು ಪಿ.ಡಿ.ಓ ಗಳು ನೇಮಕವಾಗಿರುತ್ತಾರೆ; ಪದೋನ್ನತಿ ಮೂಲಕ ಎಷ್ಟು ಜನರನ್ನು ನೇಮಕ ಮಾಡಲಾಗಿದೆ;

(ಆ) ತುಮಕೂರು ಜಿಲ್ಲೆಯಲ್ಲಿ ಎಷ್ಟು ಪಿ.ಡಿ.ಓ ಗಳ ವಿರುದ್ಧ ಸಾರ್ವಜನಿಕ ದೂರುಗಳು ಜಿಲ್ಲಾ ಪಂಚಾಯತ್ ಸಿ.ಇ.ಓರವರಿಗೆ ಮತ್ತು ಸರ್ಕಾರಕ್ಕೆ ಬಂದಿರುತ್ತದೆ; ದೂರುಗಳು ಬಂದಿದ್ದಲ್ಲಿ, ಕ್ರಮ ಕೈಗೊಳ್ಳಲಾಗಿದೆಯೇ;

(ಇ) ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ ಈ ಎಲ್ಲಾ ತಾಲ್ಲೂಕು ಪಂಚಾಯುತಿಗಳಿಗೆ ಕಾರ್ಯನಿರ್ವಹಣಾಧಿಕಾರಿಗಳನ್ನು ನೇಮಿಸಲಾಗಿದೆಯೇ; ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೇರಿದವರೇ, ಇಲ್ಲದೇ ಇದ್ದಲ್ಲಿ, ಎಷ್ಟು ಮಂದಿಯನ್ನು ಎರವಲು ಸೇವೆಯ ಮೇಲೆ ಪಡೆಯಲಾಗಿದೆ;

(ಈ) ಗ್ರಾಮ ವಿಕಾಸ್ ಮತ್ತು ಜಿಲ್ಲಾ ಪಂಚಾಯತ್ ಅನುದಾನಗಳ ಯೋಜನೆಯಲ್ಲಿ ಖಾಸಗಿ ಶಾಲಾ ಸಂಸ್ಥೆಗಳಿಗೆ ಕುಡಿಯುವ ನೀರು ಮತ್ತು ಮೂಲ ಸೌಕರ್ಯಗಳಿಗೆ ಅನುದಾನ ನೀಡಲು ಅವಕಾಶವಿರುತ್ತದೆಯೇ; ಇಲ್ಲದೇ ಇದ್ದಲ್ಲಿ, ಅನುದಾನಗಳನ್ನು ನೀಡಲು ರಾಜ್ಯ ಸರ್ಕಾರ ನಿಯಮಾವಳಿಗಳನ್ನು ರಚಿಸುತ್ತದೆಯೇ?

## ವಿಶ್ವವಿದ್ಯಾಲಯಗಳ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) –**

೪೩೨೬ (೪೮೭೭) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದ ಎಷ್ಟು ವಿಶ್ವವಿದ್ಯಾಲಯಗಳಲ್ಲಿ ಹಗರಣಗಳ ಆರೋಪವಿರುತ್ತದೆ; ಎಷ್ಟು ವಿಶ್ವವಿದ್ಯಾಲಯಗಳ ಹಗರಣಗಳ ಕುರಿತು ೦೧.೦೪.೨೦೧೩ ರಿಂದ ಇಲ್ಲಿಯವರೆಗೆ ತನಿಖೆಗಾಗಿ ಸಮಿತಿಗಳನ್ನು ನೇಮಿಸಲಾಗಿದೆ; ಎಷ್ಟು ಸಮಿತಿಗಳು ಇಲ್ಲಿಯವರೆಗೆ ವರದಿಯನ್ನು ನೀಡಿರುತ್ತವೆ; (ಸಮಿತಿಗಳ ವರದಿಯನ್ನು ನೀಡುವುದು) ಇವುಗಳ ತನಿಖೆಗಾಗಿ ರಾಜ್ಯಪಾಲರು ನೇಮಿಸಿರುವ ಸಮಿತಿಗಳೆಷ್ಟು; ರಾಜ್ಯ ಸರ್ಕಾರ ನೇಮಿಸಿರುವ ಸಮಿತಿಗಳೆಷ್ಟು;

(ಆ) ರಾಜ್ಯದಲ್ಲಿರುವ ಯಾವ ಯಾವ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳು ಮತ್ತು ನಿಬಂಧಕರು (ಆಡಳಿತ ಮತ್ತು ಮೌಲ್ಯ ಮಾಪನ) ಇವರುಗಳ ಮೇಲೆ ಆರೋಪ ಬಂದಿರುತ್ತವೆ; ಎಷ್ಟು ಮಂದಿಯನ್ನು ತನಿಖೆಗೆ ಒಳಪಡಿಸಲಾಗಿರುತ್ತದೆ;

(ಇ) ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಕಳೆದ ೪ ವರ್ಷಗಳಲ್ಲಿ ಎಷ್ಟು ಕಾಲೇಜುಗಳನ್ನು ಬ್ಲ್ಯಾಕ್ ಲಿಸ್ಟ್ ಮಾಡಲಾಗಿದೆ; ಯಾವ ಕಾರಣಕ್ಕಾಗಿ ಮಾಡಲಾಗಿದೆ; (ವಿವರಗಳನ್ನು ನೀಡುವುದು)

(ಈ) ಬೆಂಗಳೂರು ವಿಶ್ವವಿದ್ಯಾಲಯದ ಆರ್.ಕೆ. ಸೋಮಶೇಖರ್ ವಿರುದ್ಧ ಅಂಕಪಟ್ಟಿಯ ಹಗರಣದ ಕುರಿತು ನೇಮಕವಾಗಿದ್ದ ನ್ಯಾಯಾಂಗ ತನಿಖೆಯ ವರದಿಯು ಸರ್ಕಾರಕ್ಕೆ ಬಂದಿರುತ್ತದೆಯೇ; ಬಂದಿದ್ದಲ್ಲಿ, ಈ ವರದಿಯ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿರುತ್ತದೆ;

(ಉ) ೦೧.೦೪.೨೦೧೩ ರಿಂದ ಇಲ್ಲಿಯವರೆಗೆ ವಿಶ್ವವಿದ್ಯಾಲಯಗಳ ಹಗರಣಗಳಿಗೆ ಸಂಬಂಧಪಟ್ಟಂತೆ ವಿಚಾರಣಾ ಸಮಿತಿಗಳಿಗೆ/ ಆಯೋಗಗಳಿಗೆ ಸರ್ಕಾರವು ಪಾವತಿ ಮಾಡಿರುವ ಹಣವೆಷ್ಟು; ಪಾವತಿಗೆ ಬಾಕಿ ಇರುವ ಹಣವೆಷ್ಟು? (ಸಮಿತಿಗಳ ಸಹಿತವಾಗಿ ವಿವರವಾದ ಮಾಹಿತಿ ನೀಡುವುದು)

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಬಸ್ ನಿಲ್ದಾಣ ಹಾಗೂ ಟಿ.ಟಿ.ಎಂ.ಸಿ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) –**

೪೩೨೭ (೪೮೮೭) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಬಸ್ ನಿಲ್ದಾಣ ಹಾಗೂ ಟಿ.ಟಿ.ಎಂ.ಸಿ.ಗಳ ಸಂಖ್ಯೆ ಎಷ್ಟು; (ಸಂಪೂರ್ಣವಾದ ಮಾಹಿತಿ ನೀಡುವುದು.)

(ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಖಾಸಗಿ ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು; (ಸಂಪೂರ್ಣವಾದ ಮಾಹಿತಿ ನೀಡುವುದು.)

(ಇ) ಕಲಾಸಿಪಾಳ್ಯ ಬಸ್ ನಿಲ್ದಾಣ ಬಿ.ಎಂ.ಟಿ.ಸಿ.ಯಿಂದ ನಿರ್ಮಾಣವಾಗುತ್ತಿದೆಯೇ; ಇದ್ದಲ್ಲಿ, ಗುತ್ತಿಗೆದಾರರಿಗೆ ನೀಡಿರುವ ಕಾರ್ಯಾದೇಶ ಮತ್ತು ಕರಾರು ಪತ್ರದ ದಾಖಲೆಗಳೊಂದಿಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು.

(ಈ) ಕಲಾಸಿಪಾಳ್ಯ ಬಸ್ ನಿಲ್ದಾಣದ ಸ್ವತ್ತಿನ ಮಾಲೀಕತ್ವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಯಾರಿಂದ ಯಾವಾಗ ವರ್ಗಾಯಿಸಲಾಗಿದೆ; (ಸಂಪೂರ್ಣ ಮಾಹಿತಿಯನ್ನು ದಾಖಲೆಗಳೊಂದಿಗೆ ನೀಡುವುದು.)

(ಉ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಟಿ.ಟಿ.ಎಂ.ಸಿ. ಹಾಗೂ ಬಸ್ ನಿಲ್ದಾಣಗಳ ಕಟ್ಟಡಗಳನ್ನು ಬಾಡಿಗೆ ಹಾಗೂ ಗುತ್ತಿಗೆಗೆ ನೀಡಲಾಗಿದೆಯೇ; (ಸಂಪೂರ್ಣ ಮಾಹಿತಿಯನ್ನು ನೀಡುವುದು.)

(ಊ) ಬೆಂಗಳೂರು ನಗರದ ಬಸ್ ನಿಲ್ದಾಣ/ ಟಿ.ಟಿ.ಎಂ.ಸಿ./ಬಸ್ ಸ್ಟಾಪ್ ಶೆಲ್ಟರ್ಸ್/ ಬಸ್ ಬೆಗಳ ಮತ್ತು ಬಸ್/ವಾಹನಗಳ ಮೇಲೆ ಜಾಹೀರಾತು ಪ್ರಕಟಣೆ ಯಾವ ಆಧಾರದ ಮೇಲೆ ಪ್ರದರ್ಶಿಸಲಾಗಿದೆ? (ಸಂಪೂರ್ಣ ಮಾಹಿತಿಯನ್ನು ನೀಡುವುದು.)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆಗಳ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) –**

೪೩೨೮ (೪೮೮೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆ (ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಜೂನಿಯರ್ ಕಾಲೇಜ್)ಗಳ ಸಂಖ್ಯೆ ಎಷ್ಟು; ಈ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ನೀಡುವುದು.

(ಆ) ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇದೆಯೆ; ಇದ್ದಲ್ಲಿ, ಎಷ್ಟು ಶಾಲೆಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪ್ರತ್ಯೇಕ ಶೌಚಾಲಯಗಳಿದೆ; (ಸಂಖ್ಯೆ ಸಮೇತ ಮಾಹಿತಿ ನೀಡುವುದು)

(ಇ) ಸರ್ಕಾರಿ ಶಾಲೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನೀಡಲಾಗಿದೆಯೇ; ನೀಡಿದ್ದಲ್ಲಿ, ಯಾವ ಆಧಾರದ ಮೇಲೆ ನೀಡಲಾಗಿದೆ; ಅಂತಹ ಎಲ್ಲಾ ಶಾಲೆಗಳ ಮಾಹಿತಿ ನೀಡುವುದು;

(ಈ) ಈ ಎಲ್ಲಾ ಶಾಲೆಗಳ ನಿರ್ವಹಣೆ ಮತ್ತು ಶುಚಿತ್ವಕ್ಕೆ ಸಂಬಂಧಿಸಿದಂತೆ, ಗುತ್ತಿಗೆ/ಹೊರಗುತ್ತಿಗೆ ನೀಡಲಾಗಿದೆಯೆ; (ಸಂಪೂರ್ಣವಾದ ಮಾಹಿತಿ ನೀಡುವುದು.)

(ಉ) ಈ ಎಲ್ಲಾ ಸರ್ಕಾರಿ ಶಾಲೆ (ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಜೂನಿಯರ್ ಕಾಲೇಜ್)ಗಳ ಮಂಜೂರಾದ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಯ ಹುದ್ದೆಗಳ ಸಂಖ್ಯೆ ಎಷ್ಟು; ಹಾಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳ ಮಾಹಿತಿ ನೀಡುವುದು?

## ಬೆಂಗಳೂರು ನಗರ ಜಿಲ್ಲೆಯಲ್ಲಿ KSSIDC ಮತ್ತು KIADB ಕೈಗಾರಿಕೆ ಪ್ರದೇಶಗಳ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) –**

ಳಖ.೨೯ (ಳಲಲಳ+ಳಲಲಜ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಜಿಲ್ಲೆಯ KSSIDC ಮತ್ತು KIADB ಮತ್ತು ಇತರೆ ಕೈಗಾರಿಕಾ ಪ್ರಾಧಿಕಾರ ಅಥವಾ ನಿಗಮದಿಂದ ರಚನೆಯಾಗಿ, ಸ್ಥಾಪಿಸಿರುವ ಕೈಗಾರಿಕಾ ಪ್ರದೇಶಗಳ ಸಂಖ್ಯೆ ಎಷ್ಟು; ಈ ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲಿ ನೀಡಿರುವ ಮೂಲಭೂತ ಸೌಕರ್ಯ ಹಾಗೂ ಇತರೆ ನಾಗರಿಕ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವುದು;

(ಆ) ಪ್ರತಿ ಕೈಗಾರಿಕಾ ಬಡಾವಣೆಗಳಲ್ಲಿ ಕೈಗಾರಿಕಾ ಪ್ರತ್ಯೇಕ ಘಟಕಗಳ ಸಂಖ್ಯೆ ಎಷ್ಟು; (ಸಂಪೂರ್ಣವಾದ ಮಾಹಿತಿ ನೀಡುವುದು.)

(ಇ) ಈ ಎಲ್ಲಾ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆಯೇ; ಇದ್ದಲ್ಲಿ, ಕೈಗಾರಿಕಾ ಪ್ರಾಧಿಕಾರ/ನಿಗಮದ ಅಧಿಕಾರ ವ್ಯಾಪ್ತಿಯ ಬಗ್ಗೆ ಮಾಹಿತಿ ನೀಡುವುದು;

(ಈ) ಪ್ರಾಧಿಕಾರ/ನಿಗಮದಿಂದ ಪ್ರತಿ ಕೈಗಾರಿಕಾ ಪ್ರದೇಶದಲ್ಲಿ ಇರುವ ಘಟಕಗಳಿಗೆ ವಿಧಿಸಲಾಗುತ್ತಿರುವ ಶುಲ್ಕದ ಸಂಪೂರ್ಣವಾದ ವಿವರ ನೀಡುವುದು?

## ಖಾಲಿ ಇರುವ ಡಿ.ಡಿ.ಪಿ.ಐ. ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೩೦ (೪೮೬೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೬ ತಿಂಗಳಿಗೂ ಮೇಲ್ಪಟ್ಟು ಬೀದರ್ ಜಿಲ್ಲೆಯ ಜಿಲ್ಲಾ ಉಪನಿರ್ದೇಶಕರ (ಡಿ.ಡಿ.ಪಿ.ಐ.) ಹುದ್ದೆಯು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಹುದ್ದೆ ಖಾಲಿ ಇದ್ದರೂ ಅದನ್ನು ಭರ್ತಿ ಮಾಡದೇ ಪ್ರಭಾರಿ ಅಧಿಕಾರಿಯಿಂದ ಕರ್ತವ್ಯ ನಿರ್ವಹಿಸುತ್ತಿರುವುದು ಸಮಂಜಸವೇ;

(ಇ) ಪ್ರಸ್ತುತ ಡಿ.ಡಿ.ಪಿ.ಐ. ಹುದ್ದೆಯ ಪ್ರಭಾರಿ ಇರುವ ಅಧಿಕಾರಿಯ ಆ ಹುದ್ದೆಯ ಜೊತೆಗೆ ಇನ್ನೂ ಎಷ್ಟು ಹುದ್ದೆಗಳಲ್ಲಿ ಪ್ರಭಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ;

(ಈ) ಇದರಿಂದಾಗಿ, ಆಡಳಿತದ ಮೇಲೆ ದುಷ್ಪರಿಣಾಮ ಬೀರಿ ಆಡಳಿತ ಯಂತ್ರ ಕುಸಿಯುವುದಿಲ್ಲವೇ; ಸ್ಪಷ್ಠ ಮಾಹಿತಿ ನೀಡುವುದು;

(ಉ) ಖಾಲಿ ಇರುವ ಡಿ.ಡಿ.ಪಿ.ಐ. ಹುದ್ದೆಯನ್ನು ತಕ್ಷಣ ಭರ್ತಿ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)

# ಸಿ.ಸಿ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೩೧ (೪೮೬೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕಂದಗೂಳ ಗ್ರಾಮದಲ್ಲಿ ಎಸ್‌ಸಿ/ಎಸ್.ಟಿ ಮತ್ತು ಅಲ್ಪಸಂಖ್ಯಾತರ ಜನರಿಗೆ ಓಡಾಡಲು ಪರಿಶಿಷ್ಟ ಪಂಗಡದ ಓಣಿಯಿಂದ ಇಸ್ಮಾಯಲ್ ಖಾದ್ರಿ ದರ್ಗಾದವರೆಗೆ ಹೋಗಲು ಸಿ.ಸಿ.ರಸ್ತೆ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು; (ಮಾಹಿತಿ ಒದಗಿಸುವುದು)

(ಆ) ಹಾಗಿದ್ದಲ್ಲಿ, ಈ ರಸ್ತೆ ಮಾಡುವುದರಿಂದ ಬಡ ಜನರಿಗೂ ಓಡಾಡಲು ಅನುಕೂಲವಾಗುವುದಿಲ್ಲವೆ; ಹಾಗಿದ್ದಲ್ಲಿ, ಈ ರಸ್ತೆಯು ಕಾಮಗಾರಿಯನ್ನು ಯಾವ ಅವಧಿಯೊಳಗೆ ಪ್ರಾರಂಭಿಸಲಾಗುವುದು; (ಮಾಹಿತಿ ಒದಗಿಸುವುದು)

(ಇ) ಹಾಗೇ ಈ ಗ್ರಾಮದಲ್ಲಿ ಇಲಾಖೆಯಿಂದ ಯಾವ ಯಾವ ಕಾಮಗಾರಿಗಳು ಮತ್ತು ಇನ್ನಿತರ ಅಭಿವೃದ್ಧಿ ಕಾರ್ಯಗಳು ಕೈಗೆತ್ತಿಕೊಳ್ಳಲಾಗಿದೆ; ಕೈಗೊಂಡಿದ್ದಲ್ಲಿ ಕಳೆದ ೦೨ ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು;

(ಈ) ಈ ಗ್ರಾಮದಿಂದ ವಲ್ಲೇಪುರ ಮತ್ತು ಜಂಬಗೆ ರಸ್ತೆಯ ಉಳಿದ ಹಂತವು ಯಾವಾಗ ಪ್ರಾರಂಭಿಸಲಾಗುವುದು: ಈ ರಸ್ತೆ ಮಾಡುವುದರಿಂದ ರೈತರು ಬೆಳೆದ ಧಾನ್ಯಗಳು ತರಲು ಅವಶ್ಯಕತೆ ಇರುವುದರಿಂದ ಈ ರಸ್ತೆಯ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳಲಾಗುವುದೇ? (ಮಾಹಿತಿ ನೀಡುವುದು)

## ಬೀದರ್ ಜಿಲ್ಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೩೨ (೪೮೬೫) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕದ ವ್ಯಾಪ್ತಿಗೆ ಬರುವ ಬೀದರ್ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಕ್ಕೆ ಮೂಲಭೂತ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಾಮಾನ್ಯ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು;

(ಆ) ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು; ಯಾವ ಯಾವ ಲೇಕ್ಕಶೀಷಿಕೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ; ಬಿಡುಗಡೆ ಮಾಡಿದ್ದಲ್ಲಿ, ಕ್ಷೇತ್ರಗಳವಾರು ಮಾಹಿತಿ ಒದಗಿಸುವುದು?

## ಗಣಕ ಯಂತ್ರ ಪೂರೈಕೆ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೩೩ (೪೮೬೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಬರುವ ಎಲ್ಲಾ ತಾಲ್ಲೂಕುಗಳಲ್ಲಿರುವ ಪ್ರಾಥಮಿಕ ಪ್ರೌಢ ಶಾಲೆಗಳಿಗೆ ಗಣಕಯಂತ್ರಗಳನ್ನು ಪೂರೈಸುವ ಹಾಗೂ ಶಿಕ್ಷಕರನ್ನು ನೇಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಇದ್ದಲ್ಲಿ, ಎಷ್ಟು ಪ್ರಾಥಮಿಕ, ಪ್ರೌಢ ಶಾಲೆಗಳಿಗೆ ಕಂಪ್ಯೂಟರ್ ಹಾಗೂ ಶಿಕ್ಷಕರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಬಾಕಿ ಉಳಿದಿರುವ ಪ್ರೌಢ ಶಾಲೆಗಳಿಗೆ ಕಂಪ್ಯೂಟರ್ ಹಾಗೂ ಶಿಕ್ಷಕರನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ಬದಲಾವಣೆಗಳಾದ ಪಠ್ಯ ಪುಸ್ತಕಗಳ ವಿಲೇವಾರಿ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೩೪ (೪೭೮೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ತಾಲ್ಲೂಕು ಕೇಂದ್ರದಲ್ಲಿನ ಪಠ್ಯ ಪುಸ್ತಕ ಮಳಿಗೆಯಲ್ಲಿ ಅನುಪಯುಕ್ತ ಹಾಗೂ ಇಲ್ಲಿಯವರೆಗೆ ಬದಲಾವಣೆಗಳಾದ ಪಠ್ಯ ಪುಸ್ತಕಗಳು ಎಷ್ಟು ಪ್ರಮಾಣದಲ್ಲಿರುತ್ತದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಇವು ಎಷ್ಟು ವರ್ಷಗಳಿಂದ ತಾಲ್ಲೂಕು ಕೇಂದ್ರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಅಥವಾ ಮಳಿಗೆಯಲ್ಲಿರುತ್ತವೆ;

(ಇ) ಅವುಗಳನ್ನು ಅಲ್ಲಿಯೆ ಇಟ್ಟಲ್ಲಿ ಗೆದ್ದಲು ಹಿಡಿದು ಹಾಳಾಗುವುದಿಲ್ಲವೇ; ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

(ಈ) ಅನುಪಯುಕ್ತ ಹಾಗೂ ಈವರೆಗೆ ಬದಲಾವಣೆಗಳಾದ ಪಠ್ಯ ಪುಸ್ತಕಗಳನ್ನು ವಿಲೇವಾರಿ ಮಾಡಲು ಯಾವ ಕ್ರಮ ವಹಿಸಲಾಗಿದೆ; ವಿಲೇವಾರಿ ಮಾಡದಿದ್ದಲ್ಲಿ ತಾಲ್ಲೂಕು ಕೇಂದ್ರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಅಥವಾ ಮಳಿಗೆಯಲ್ಲಿ ಪ್ರತಿ ವರ್ಷ ಪಠ್ಯ ಪುಸ್ತಕಗಳು ಸರಬರಾಜಾಗುವುದರಿಂದ ಸ್ಥಳದ ಅಭಾವ ಉಂಟಾಗುವುದಿಲ್ಲವೇ;

(ಉ) ಸದರಿ ಅನುಪಯುಕ್ತ ಹಾಗೂ ಈವರೆಗೆ ಬದಲಾವಣೆಗಳಾದ ಪಠ್ಯ ಪುಸ್ತಕಗಳನ್ನು ವಿಲೇವಾರಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

## ರಾಜ್ಯದ ಶಾಲೆಗಳಿಗೆ ಪಠ್ಯ ಪುಸ್ತಕ ಮತ್ತು ಸಮವಸ್ತ್ರಗಳು ಪೂರೈಕೆಯಾಗದಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೩೫ (೪೭೮೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೭–೧೮ನೇ ಸಾಲಿಗೆ ರಾಜ್ಯದ ಎಲ್ಲಾ ಶಾಲೆಗಳಿಗೆ ಮಾರಾಟ/ ಉಚಿತ ಪಠ್ಯ ಪುಸ್ತಕ ಹಾಗೂ ಸಮವಸ್ತ್ರಗಳು ಸಂಪೂರ್ಣ ಪ್ರಮಾಣದಲ್ಲಿ ಸರಬರಾಜಾಗಿದೆಯೇ;

(ಆ) ಸರಬರಾಜಾಗದಿದ್ದಲ್ಲಿ, ಮಾರಾಟ/ಉಚಿತ ಪಠ್ಯ ಪುಸ್ತಕಗಳು ಯಾವ ತರಗತಿಗಳ ಯಾವ ಯಾವ ಪಠ್ಯ ಪುಸ್ತಕಗಳು ಸರಬರಾಜಾಗಿರುವುದಿಲ್ಲ; ಅವುಗಳ ಮುದ್ರಣಕಾರರ ಮಾಹಿತಿ ಸಹಿತ ತಾಲ್ಲೂಕುವಾರು ವಿವರ ನೀಡುವುದು;

(ಇ) ಸಮವಸ್ತ್ರಗಳು ಸರಬರಾಜಾಗದೇ ಇರುವ ತಾಲ್ಲೂಕು/ಜಿಲ್ಲೆಗಳ ಮಾಹಿತಿ ನೀಡುವುದು;

(ಈ) ಶಾಲೆಗಳಿಗೆ ಮಾರಾಟ/ಉಚಿತ ಪಠ್ಯ ಪುಸ್ತಕ ಹಾಗೂ ಸಮವಸ್ತ್ರಗಳು ನೀಡದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು?

## ಸರ್ಕಾರಿ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೩೬ (೪೮೬೮) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ್ದು ಯಾವಾಗ; ಅಧಿಸೂಚನೆಯ ಪ್ರತಿಯನ್ನು ನೀಡುವುದು; ಈ ನೇಮಕಾತಿ ಪ್ರಕ್ರಿಯೆಯ ಪ್ರತಿ ಹಂತದ ವಿವರ ನೀಡುವುದು; ಎಷ್ಟು ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು; ಎಷ್ಟು ಜನರಿಗೆ ನೇಮಕಾತಿ ಮಾಡಿ ಆದೇಶ ಹೊರಡಿಸಲಾಗಿದೆ; ಬಾಕಿ ಉಳಿದವರ ಸಂಖ್ಯೆ ಎಷ್ಟು;

(ಆ) ಪ್ರಕ್ರಿಯೆಯಲ್ಲಿ ಉಂಟಾಗಿರುವ ಸಮಸ್ಯೆಗಳು ಯಾವುವು; ಪ್ರತಿ ಸಮಸ್ಯೆಗಳ ಪಟ್ಟಿ ಒದಗಿಸುವುದು;

(ಇ) ನೇಮಕಾತಿ ಪರಿಶೀಲನೆಗಾಗಿ ಉನ್ನತ ಶಿಕ್ಷಣ ಪರಿಷತ್ತಿನಿಂದ ಸಮಿತಿ ರಚನೆ ಮಾಡಲಾಗಿತ್ತೇ; (ಸಮಿತಿಯ ವರದಿಯ ಪ್ರತಿ ಒದಗಿಸುವುದು)

(ಈ) ಉಂಟಾಗಿರುವ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ಬಾಕಿ ಉಳಿದಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಸರ್ಕಾರ ಕೈಗೊಂಡ ಹಾಗೂ ಕೈಗೊಳ್ಳಬೇಕಿರುವ ಕ್ರಮಗಳೇನು?

## ಆರ್.ಟಿ.ಇ ಕಾಯ್ದೆ ಅನುಷ್ಠಾನದ ವಿವರ ಕುರಿತು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೩೭ (೪೮೯೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೪ ವರ್ಷದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕಾಗಿ ಸರ್ಕಾರ ಕಾಯ್ದಿರಿಸಿದ ಅನುದಾನ ಎಷ್ಟು; ಖರ್ಚಾದ ಅನುದಾನವೆಷ್ಟು; (ವರ್ಷಾವಾರು ವಿವರ ನೀಡುವುದು)

(ಆ) ಆರ್.ಟಿ.ಇ. ಕಾಯಿದೆ ಆನುಷ್ಠಾನಕ್ಕಾಗಿ ಯೋಜನೆ ಪ್ರಾರಂಭದಿಂದ ಇಲ್ಲಿಯವರೆಗೆ ಖರ್ಚಾದ ಅನುದಾನವೆಷ್ಟು; (ವರ್ಷಾವಾರು ವಿವರ ನೀಡುವುದು)

(ಇ) ಆರ್.ಟಿ.ಇ. ಕಾಯ್ದೆಯಡಿ ಕಳೆದ ವರ್ಷ ಮತ್ತು ಪ್ರಸಕ್ತ ಸಾಲಿನಲ್ಲಿ ಲಭ್ಯವಿದ್ದ ಸೀಟುಗಳೆಷ್ಟು; ಭರ್ತಿಯಾದ ಸೀಟುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) ಸೀಟು ಹಂಚಿಕೆಯ ಮಾನದಂಡಗಳೇನು; ಮಾರ್ಗಸೂಚಿಯನ್ನು ಒದಗಿಸುವುದು;

(ಈ) ಆರ್.ಟಿ.ಇ. ಸೀಟು ಹಂಚಿಕೆಯಲ್ಲಿನ ಗೊಂದಲಗಳನ್ನು ನಿವಾರಿಸಲು ಮತ್ತು ಕಾಯಿದೆ ಸಮರ್ಪಕ ಅನುಷ್ಠಾನಕ್ಕಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ಬಡ್ತಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೩೮ (೪೮೯೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದಿಂದ ಮುಂದಿನ ಹುದ್ದೆಗೆ ಬಡ್ತಿ ನೀಡುವಾಗ ಯಾವ ಯಾವ ಮಾನದಂಡವನ್ನು ಪರಿಗಣಿಸಲಾಗುತ್ತದೆ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ಪ್ರಕಟಪಡಿಸಲಾಗಿದೆಯೇ; ಹೌದಾದಲ್ಲಿ, ಯಾವ ದಿನಾಂಕದಂದು ಪ್ರಕಟಿಸಲಾಗಿದೆ; (ವಿವರ ನೀಡುವುದು)

(ಇ) ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ಕೆ.ಸಿ.ಎಸ್.ಆರ್ ನಿಯಮದಂತೆ ಪ್ರಕಟಗೊಂಡಿದೆಯೇ; ಹೌದಾದ್ದಲ್ಲಿ, ಯಾವ ಪ್ರಕರಣದಡಿ ಪಟ್ಟಿ ತಯಾರಿಸಲಾಗಿದೆ;

ಈ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಗ್ರಾಮ ಪಂಚಾಯತ್ ನೌಕರರಿಗೆ ಎಷ್ಟು ಬಾರಿ ಪದೋನ್ನತಿ ನೀಡಬಹುದು;

ಉ) ಗ್ರಾಮ ಪಂಚಾಯತ್‌ನಲ್ಲಿ ಕರ ವಸೂಲಿಗಾರ, ಗುಮಾಸ್ತರಾಗಿ ಮತ್ತು ಪಂಪು ಚಾಲಕರಾಗಿ ಕೆಲಸ ನಿರ್ವಹಿಸಿ ನಂತರ ಪದೋನ್ನತಿ ಪಡೆದು ತಾಲ್ಲೂಕು ಸಹಾಯಕ ನಿರ್ದೇಶಕರು ಮತ್ತು ಕಾರ್ಯನಿರ್ವಹಣಾಧಿಕಾರಿ, ಸಹಾಯಕ ಯೋಜನಾಧಿಕಾರಿ ಮತ್ತು ಸಹಾಯಕ ಉಪ ಕಾರ್ಯದರ್ಶಿ ಹುದ್ದೆ ಪಡೆದ ನೌಕರರ ಹೆಸರು

ಮತ್ತು ಸಂಖ್ಯೆ ಎಷ್ಟು; ಜಿಲ್ಲಾವಾರು ಮೂಲ ಹುದ್ದೆ ಪ್ರಸಕ್ತ ಹುದ್ದೆವಾರು ಹೆಸರು ಮತ್ತು ವಿದ್ಯಾರ್ಹತೆಯೊಂದಿಗೆ ಸಂಪೂರ್ಣ ವಿವರ ನೀಡುವುದು? (ಪದೋನ್ನತಿ ಪಡೆದು ನಿವೃತ್ತಿಯಾದವರ ವಿವರವನ್ನು ನೀಡುವುದು)

## ೧೩ ಮತ್ತು ೧೪ನೇ ಹಣಕಾಸು ಯೋಜನೆ ಬಗ್ಗೆ

**ಶ್ರೀ ಸೋಮಣ್ಣ ಎಂ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೫ (೪೮೯೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೪ ವರ್ಷದಲ್ಲಿ ಕುಡಿಯುವ ನೀರು ೧೩ ಮತ್ತು ೧೪ನೇ ಹಣಕಾಸು ಯೋಜನೆ, ಸ್ವಚ್ಛ ಭಾರತ, ಉದ್ಯೋಗ ಖಾತ್ರಿ ಯೋಜನೆ ಸೇರಿದಂತೆ ವಿವಿಧ ಯೋಜನೆಗಳಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಾಗೂ ಖರ್ಚಾದ ಅನುದಾನವೆಷ್ಟು;

(ಆ) ಕೇಂದ್ರ ಸರ್ಕಾರದ ಅನುದಾನ ದುರುಪಯೋಗ, ಅಕ್ರಮ ಠೇವಣಿಯಿರಿಸಿ ಯೋಜನೆಗಳಿಗೆ ಅನುದಾನವಿಲ್ಲದೆ ಯೋಜನೆಗಳ ಕುಂಠಿತ ಮತ್ತು ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಲು ರಾಜ್ಯ ಸರ್ಕಾರ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಇಲಾಖೆಯ ವಿವಿಧ ಅವ್ಯವಹಾರ ಮತ್ತು ಲೋಪದ ತನಿಖೆಗಾಗಿ ಎಷ್ಟು ಸಮಿತಿಗಳನ್ನು ರಚಿಸಲಾಗಿದೆ; ಯಾವಾಗ ರಚಿಸಲಾಗಿದೆ; ಸಮಿತಿಯ ವರದಿಗಳೇನು; ಅದರಂತೆ ಕೈಗೊಂಡ ಕ್ರಮಗಳೇನು;

(ಈ) ಕೇಂದ್ರದ ಅನುದಾನಗಳನ್ನು ಸಮರ್ಪಕವಾಗಿ ಯಾವುದೇ ಲೋಪವಿಲ್ಲದೆ ಹಾಗೂ ಕಾಲಮಿತಿಯಲ್ಲಿ ವಿನಿಯೋಗಿಸಿಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ಬೆಂಗಳೂರು ನಗರದ ಆಟೋಗಳ ಸಂಖ್ಯೆ ಹಾಗೂ ಸಬ್ಸಿಡಿ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೪೦ (೪೮೫೮) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ಆಟೋಗಳ ಸಂಖ್ಯೆ ಎಷ್ಟು; (೪ ಸ್ಟ್ರೋಕ್ ಮತ್ತು ೨ ಸ್ಟ್ರೋಕ್ ವಾಹನಗಳ ವಿವರ ಒದಗಿಸುವುದು)

(ಆ) ೨ ಸ್ಟ್ರೋಕ್ ಆಟೋಗಳ ಬದಲು ೪ ಸ್ಟ್ರೋಕ್ ಆಟೋಗಳನ್ನು ಖರೀದಿಸುವ ಚಾಲಕರಿಗೆ ಸಬ್ಸಿಡಿ ನೀಡುವ ಯೋಜನೆ ಸರ್ಕಾರದಲ್ಲಿದೆಯೇ;

(ಇ) ಈ ಸಬ್ಸಿಡಿಗೆ ಕಾರಣಗಳೇನು; ಯಾವ ಪ್ರಮಾಣದಲ್ಲಿ ಸಹಾಯಧನವನ್ನು ನೀಡಲಾಗುತ್ತದೆ; ಈ ಸಹಾಯಧನ ಯಾವಾಗಿನಿಂದ ನೀಡಲು ಬಾಕಿ ಇದೆ; ಯಾವಾಗ ಫಲಾನುಭವಿಗಳಿಗೆ ವಿತರಿಸಲಾಗುವುದು;

(ಈ) ಹಳೆಯ ಬಾಕಿಯೇ ಪಾವತಿಯಾಗದಿರುವಾಗ ಹೊಸದಾಗಿ ಸಬ್ಸಿಡಿ ನೀಡಲು ಹಣ ಒದಗಿಸುವ ಅಗತ್ಯವಿದೆಯೇ;

(ಉ) ಈ ಸಹಾಯಧನ ಮೊತ್ತ ಬಾಕಿ ಪಡೆಯಬೇಕಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)

## ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ಪ್ರಸ್ತಾವನೆ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೪೧ (೪೮೧೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಸರ್ಕಾರ ಅಕ್ಟೋಬರ್ ೨೦೧೪ ರಿಂದ ಇದುವರೆವಿಗೂ ರಾಜ್ಯ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬಿಡುಗಡೆಮಾಡಿದ ಹಣವೆಷ್ಟು; ಬಿಡುಗಡೆಯಾದ ಹಣದಲ್ಲಿ ರೂಪಿಸಿರುವ ಯೋಜನೆಗಳು ಯಾವುವು; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯ ಗ್ರಾಮೀಣಾಭಿವೃದ್ಧಿ ಇಲಾಖೆಯು ಕೇಂದ್ರದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಹಣ ಬಿಡುಗಡೆಗಾಗಿ ನೆರವು ನೀಡುವಂತೆ ಪ್ರಸ್ತಾವನೆ ಸಲ್ಲಿಸಿದೆಯೇ; ಸಲ್ಲಿಸಿದ್ದರೆ, ಬಿಡುಗಡೆಯಾದ ಹಣದ ವಿವರ ನೀಡುವುದು?

## ಆರ್.ಟಿ.ಓ ಸೇವಾಶುಲ್ಕ ಹೆಚ್ಚಳ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೪೨ (೪೮೨೦) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರಿಗೆ ಇಲಾಖೆ ಆರ್.ಟಿ.ಓ ಸೇವಾ ಶುಲ್ಕವನ್ನು ಹೆಚ್ಚಳ ಮಾಡಲು ನಿರ್ಧರಿಸಿದೆಯೇ; ಅಥವಾ ಈಗಾಗಲೇ ಇದನ್ನು ಹೆಚ್ಚಿಸಲಾಗಿದೆಯೇ; (ವಿವರ ಒದಗಿಸುವುದು)

(ಆ) ಚಾಲನಾ ತರಬೇತಿ ಶಾಲೆಗಳಲ್ಲಿನ ಸೇವಾ ಶುಲ್ಕವನ್ನು ಒಂದೊಂದು ಶಾಲೆಯಲ್ಲಿ ಒಂದೊಂದು ರೀತಿಯ ದರ ನಿಗಧಿಪಡಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಕಾರಣವೇನು;

(ಇ) ದರ ಹೆಚ್ಚಳದಿಂದ ತರಬೇತಿ ಪಡೆಯುವವರ ಸಂಖ್ಯೆಯಲ್ಲೇನಾದರೂ ಇಳಿಮುಖವಾಗಿರುವುದೇ ಅಥವಾ ಇಳಿಮುಖವಾದ ಬಗ್ಗೆ ಇಲಾಖೆ ಚರ್ಚಿಸಿದೆಯೇ?

## ಸರಕು ಸಾಗಣೆ ಲಾರಿಗಳ ಮುಷ್ಕರ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

ಳಃಳಃ (ಳಅಜ೭) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪದೇ ಪದೇ ಸರಕು ಸಾಗಣೆಯ ಲಾರಿ ಮುಷ್ಕರಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು;

(ಆ) ಈ ನಿಟ್ಟಿನಲ್ಲಿ ಸರ್ಕಾರದ ಮುಂಜಾಗ್ರತ ಕ್ರಮಗಳೇನು; ಲಾರಿ ಮುಷ್ಕರ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಲಾರಿ ಮಾಲೀಕರ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಸರ್ಕಾರ ಮುಂದಾಗದಿರುವುದು ನಿಜವೇ;

(ಈ) ರಾಜ್ಯ ಸರ್ಕಾರವು ರಾಜ್ಯ ವ್ಯಾಪ್ತಿಯಲ್ಲಿ ಪರಿಹಾರ ನೀಡಬಹುದಾಗಿದ್ದರೂ ಸಹ ಕೇಂದ್ರ ಸರ್ಕಾರದ ಮೇಲೆ ಹೊಣೆಗಾರಿಕೆ ವಹಿಸುವುದನ್ನು ಸರ್ಕಾರವು ಸಮರ್ಥಿಸುವುದೇ; (ವಿವರ ಒದಗಿಸುವುದು)

(ಉ) ಲಾರಿ ಮುಷ್ಕರದ ಹಿನ್ನೆಲೆಯಲ್ಲಿ ಸರ್ಕಾರದ ಪರ್ಯಾಯ ಸರಕು ಸಾಗಣಿಕೆಯ ಕ್ರಮಗಳೇನು?

## ಪದವಿ ಕಾಲೇಜು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ Laptop ವಿತರಣೆ ಕುರಿತು.

**ಶ್ರೀ ಎಸ್.ವ್ಹಿ ಸಂಕನೂರ (ಪದವೀಧರರ ಕ್ಷೇತ್ರ) –**

ಳಃಳಳ (ಳ೯೨ಃ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೬–೧೭ನೇ ಸಾಲಿಗೆ ಎಸ್.ಸಿ/ಎಸ್.ಟಿ ಪದವಿ ಕಾಲೇಜುಗಳಲ್ಲಿ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಓದುತ್ತಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗಾಗಿ ಕಲಿಕಾ ಸಾಮಾಗ್ರಿಯಾಗಿ ಲ್ಯಾಪ್‌ಟಾಪ್ ವಿತರಿಸುವುದಕ್ಕಾಗಿ ಸರ್ಕಾರ ಖರ್ಚುಮಾಡಿದ ಹಣವೆಷ್ಟು;

(ಆ) ಈ ಯೋಜನೆಯಡಿ ಒಟ್ಟು ಎಷ್ಟು ಜನ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡುವ ಉದ್ದೇಶ ಹೊಂದಲಾಗಿದೆ;

(ಇ) ಲ್ಯಾಪ್‌ಟಾಪ್ ಖರೀದಿಸುವಲ್ಲಿ ಅನುಸರಿಸಿದ ವಿಧಾನಗಳೇನು; ಪ್ರತಿ ಲ್ಯಾಪ್‌ಟಾಪ್ ಎಷ್ಟು ಮೊತ್ತಕ್ಕೆ ಖರೀದಿಸಲಾಗಿದೆ; ವಿವರಣೆ ನೀಡುವುದು;

(ಈ) ೨೦೧೬–೧೭ನೇ ಸಾಲಿಗೆ ಖರೀದಿ ಮಾಡಿದ ಲ್ಯಾಪ್‌ಟಾಪ್‌ಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆಯೇ;

(ಉ) ಪದವಿ ಕಾಲೇಜುಗಳಲ್ಲಿ ಓದುತ್ತಿರುವ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೂ ಲ್ಯಾಪ್‌ಟಾಪ್ ವಿತರಿಸುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ; ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು; ಹಾಗೂ ಸದ್ಯಕ್ಕೆ ಈ ಯೋಜನೆ ಯಾವ ಹಂತದಲ್ಲಿದೆ? (ವಿವರ ನೀಡುವುದು)

## ಗ್ರಾಮ ಪಂಚಾಯಿತಿ ಕಟ್ಟಡಗಳು

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) –**

೪೩೪೫ (೪೭೬೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸಂಖ್ಯೆ ಎಷ್ಟು; (ಗ್ರಾಮಗಳ ಹೆಸರುಗಳನ್ನು ನೀಡುವುದು)

(ಆ) ಸದರಿ ವಿಧಾನಸಭಾ ಕ್ಷೇತ್ರದ ಗ್ರಾಮಪಂಚಾಯಿತಿಗಳು ಎಷ್ಟು; ಒಟ್ಟು ಸದಸ್ಯರ ಸಂಖ್ಯೆ ಎಷ್ಟು; (ಅಧ್ಯಕ್ಷರು ಮತ್ತು ಸದಸ್ಯರ ವಿಳಾಸದೊಂದಿಗೆ ವಿವರ ನೀಡುವುದು)

(ಇ) ಸದರಿ ವಿಧಾನ ಸಭಾಕ್ಷೇತ್ರದ ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರುಗಳ ಸಂಖ್ಯೆ ಎಷ್ಟು; (ಪೂರ್ಣ ವಿಳಾಸದೊಂದಿಗೆ ವಿವರ ನೀಡುವುದು)

(ಈ) ಗ್ರಾಮ ಪಂಚಾಯಿತಿಗಳು ಸ್ವಂತ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದೆಯೇ; ಹಾಗಿದ್ದಲ್ಲಿ, ಸ್ವಂತ ಕಟ್ಟಡಗಳು ಎಷ್ಟು; ಬಾಡಿಗೆ ಕಟ್ಟಡಗಳು ಎಷ್ಟು; (ವಿವರ ನೀಡುವುದು)

(ಉ) ಬಾಡಿಗೆ ಕಟ್ಟಡಗಳಿಗೆ ನೀಡಿರುವ ಬಾಡಿಗೆ ಹಣವೆಷ್ಟು; (ವಿವರ ಒದಗಿಸುವುದು)

## ಶಿಕ್ಷಕರ ವೇತನ ತಾರತಮ್ಯದ ಬಗ್ಗೆ

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) –**

೪೩೪೬ (೪೮೫೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಾಥಮಿಕದಿಂದ ಪ್ರೌಢಶಾಲೆಗೆ, ಪ್ರೌಢಶಾಲೆಯಿಂದ ಪದವಿ ಪೂರ್ವ ಕಾಲೇಜಿಗೆ ಹಾಲಿ ಬಡ್ತಿ ಪಡೆದು ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು/ಉಪನ್ಯಾಸಕರುಗಳ ಜಿಲ್ಲಾವಾರು ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

(ಆ) ರಾಜ್ಯದಲ್ಲಿ ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕದಿಂದ ಪ್ರೌಢಶಾಲೆಗೆ, ಪ್ರೌಢಶಾಲೆಯಿಂದ ಪದವಿ ಪೂರ್ವ ಕಾಲೇಜಿಗೆ ಉಪನ್ಯಾಸಕರಾಗಿ, ಪ್ರೌಢಶಾಲೆ ಶಿಕ್ಷಕರು ಪ್ರೌಢಶಾಲಾ ಮುಖ್ಯಶಿಕ್ಷಕರಾಗಿ ಬಡ್ತಿ ಹೊಂದುವಾಗ ೧೦, ೧೫, ೨೦, ೨೫, ಮತ್ತು ೩೦ ವರ್ಷದ ವೇತನ ಬಡ್ತಿ ದೊರಕದೆ ಪದೋನ್ನತಿ ಹೊಂದಿದ ಮೊದಲಿನ ತತ್ಸಮಾನರು ಪಡೆಯುವ ವೇತನಕ್ಕಿಂತ ಕಡಿಮೆ ವೇತನ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ರೀತಿಯ ಪದೋನ್ನತಿ ಹೊಂದಿಯೂ ಈ ಮೂಲಕ ಮೂಲ ಹುದ್ದೆಯ ತತ್ಸಮಾನರಿಗಿಂತ ಕಡಿಮೆ ವೇತನ ಪಡೆಯುತ್ತಿರುವುದನ್ನು ಸರಿಪಡಿಸಲು ಸರ್ಕಾರದ ಕ್ರಮವೇನು; ಯಾವ ಕಾಲಮಿತಿಯೊಳಗೆ ಸರಿಪಡಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)

## ಖಾಸಗಿ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೪೩೪೭ (೪೮೩೧) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೧೯೮೭ ರಿಂದ ೧೯೯೫ರವರೆಗಿನ ಅನುದಾನಕ್ಕೆ ಒಳಪಟ್ಟಿರುವ ಖಾಸಗಿ ಪ್ರಥಮ ದರ್ಜೆ (ಪದವಿ) ಕಾಲೇಜುಗಳ ಸಂಖ್ಯೆ ಎಷ್ಟು; (ಕಾಲೇಜುಗಳ ವಿವರ ಒದಗಿಸುವುದು)

(ಆ) ಇವು ಯಾವ ವರ್ಗದ ಆಡಳಿತ ಮಂಡಳಿಗೆ ಸೇರಿದ ಕಾಲೇಜುಗಳಾಗಿವೆ; (ವಿವರ ಒದಗಿಸುವುದು)

(ಇ) ೧೯೯೫ಕ್ಕೆ ಪೂರ್ವದಲ್ಲಿ ಆರಂಭಗೊಂಡು ಇಲ್ಲಿಯವರೆವಿಗೂ ವೇತನಾನುದಾನಕ್ಕೆ ಒಳಪಡದೆ ಇರುವ ಕಾಲೇಜುಗಳ ಸಂಖ್ಯೆ ಎಷ್ಟು; ಈ ಕಾಲೇಜುಗಳು ಯಾವ ವರ್ಗದ ಆಡಳಿತ ಮಂಡಳಿಗೆ ಸೇರಿವೆ; (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗು ಇತರೆ ವರ್ಗದ ವಿವರ ಒದಗಿಸುವುದು)

(ಈ) ೧೯೯೫ರ ಪೂರ್ವದಲ್ಲಿ ಆರಂಭಗೊಂಡು ವೇತನಾನುದಾನಕ್ಕೆ ಒಳಪಡದ ಈ ಕಾಲೇಜುಗಳನ್ನು ಯಾವ ಕಾಲಮಿತಿಯೊಳಗೆ ವೇತನಾನುದಾನಕ್ಕೆ ಒಳಪಡಿಸಲಾಗುವುದು?

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯತೆ ನವೀಕರಣದ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೪೩೪೮ (೪೮೩೫) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಯಾವ ಶೈಕ್ಷಣಿಕ ವರ್ಷದಿಂದ ಪೂರ್ವಾನ್ವಯವಾಗುವಂತೆ ಮಾನ್ಯತೆಯನ್ನು ರದ್ದು ಪಡಿಸಿದೆ; ಮಾನ್ಯತೆ ರದ್ದು ಪಡಿಸಲು ಕಾರಣವೇನು; (ವಿವರ ಒದಗಿಸುವುದು)

(ಆ) ಈ ಮಾನ್ಯತೆ ರದ್ದಿಗೆ ಕಾರಣರಾದವರ ಮೇಲೆ ಸರ್ಕಾರ ಕೈಗೊಂಡ ಅಗತ್ಯ ಕ್ರಮಗಳೇನು; (ವಿವರ ಒದಗಿಸುವುದು)

(ಇ) ಈ ಶೈಕ್ಷಣಿಕ ವರ್ಷಗಳಲ್ಲಿ (ಮಾನ್ಯತೆ ಇಲ್ಲದ) ಈ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಪದವಿ ಪಡೆದ ಮತ್ತು ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

(ಈ) ರಾಜ್ಯ ಸರ್ಕಾರಕ್ಕೆ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಮುಚ್ಚುವ ಉದ್ದೇಶ ಇದೆಯೇ;

(ಉ) ಇಲ್ಲವಾದಲ್ಲಿ, ಈ ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ. ಯಿಂದ ಪೂರ್ವಾನ್ವಯ ಆಗುವಂತೆ ಅನುಮತಿ ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು)

## ಪ್ರೌಢ ಶಾಲಾ ಶಿಕ್ಷಕರು ಮತ್ತು ಉಪನ್ಯಾಸಕರ ಬಡ್ತಿ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೪೩೪೯ (೪೮೩೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾಥಮಿಕ ಶಾಲಾ ಶಿಕ್ಷಕರನ್ನು ಪ್ರೌಢಶಾಲೆಗೆ ಹಾಗೂ ಪ್ರೌಢ ಶಾಲಾ ಶಿಕ್ಷಕರನ್ನು ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಹುದ್ದೆಗೆ ಬಡ್ತಿ ನೀಡುವಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು; (ವಿವರ ಒದಗಿಸುವುದು)

(ಆ) ಇತ್ತೀಚೆಗೆ ಈ ಮಾನದಂಡಗಳಲ್ಲಿ ಬದಲಾವಣೆಯನ್ನು ಮಾಡಲಾಗಿದೆಯೇ; ಮಾಡಿದ್ದಲ್ಲಿ ವಿವರ ಒದಗಿಸುವುದು;

(ಇ) ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ ಬಡ್ತಿ ಪಡೆದ ಶಿಕ್ಷಕರಿಗೆ ಕಾಲಮಿತಿ ಬಡ್ತಿ ನೀಡುವಲ್ಲಿ ಆಗುತ್ತಿರುವ ಗೊಂದಲದಿಂದ ಅವರಿಗೆ ವೇತನದಲ್ಲಿ ತಾರತಮ್ಯ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಅನುದಾನಿತ ಶಾಲಾ ಕಾಲೇಜುಗಳ ನೌಕರರನ್ನು ನೂತನ ಪಿಂಚಣಿ ಯೋಜನೆ ವ್ಯಾಪ್ತಿಗೆ ಸೇರಿಸುವ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೪೩೫೦ (೪೮೩೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಿನಾಂಕ:೦೧/೦೪/೨೦೦೬ರ ನಂತರ ಖಾಸಗಿ ಅನುದಾನಿತ ಶಾಲಾ–ಕಾಲೇಜುಗಳಲ್ಲಿ ನೇಮಕವಾಗಿರುವ ಶಿಕ್ಷಕ ಮತ್ತು ನೌಕರರ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಆ) ಈ ಶಿಕ್ಷಕ ನೌಕರರು ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್) ವ್ಯಾಪ್ತಿಯಿಂದ ಹೊರಗೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ನೌಕರರು ಎನ್.ಪಿ.ಎಸ್ ನಿಂದ ಹೊರಗೆ ಉಳಿಯಲು ಕಾರಣವೇನು; (ವಿವರ ಒದಗಿಸುವುದು)

(ಇ) ಈ ಅನುದಾನಿತ ನೌಕರರ ವೇತನವನ್ನು ಸರ್ಕಾರವೇ ನೀಡುತ್ತಿರುವುದರಿಂದ ಎನ್.ಪಿ.ಎಸ್ ಯೋಜನೆಗೆ ನೀಡಬೇಕಾಗಿರುವ ಶೇ.೧೦ ರಷ್ಟು ವಂತಿಗೆಯನ್ನು, ಸರ್ಕಾರವೇ ಭರಿಸಲು ಕ್ರಮ ಕೈಗೊಳ್ಳಬಾರದೇಕೆ; ಈ ಶೇ.೧೦ ರಷ್ಟು ವಂತಿಗೆಯನ್ನು ಭರಿಸಲು ಸರ್ಕಾರಕ್ಕೆ ತಗಲುವ ವೆಚ್ಚ ಎಷ್ಟು; (ವಿವರ ಒದಗಿಸುವುದು)

(ಈ) ಈ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

## ೨೦೦೮ರ ನಂತರ ನೇಮಕವಾದ ಶಿಕ್ಷಕರ ವಿಶೇಷ ಭತ್ಯೆ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೪೩೫೧ (೪೮೩೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ೨೦೦೮, ಆಗಸ್ಟ್–೦೧ರ ನಂತರ ನೇಮಕಾತಿಯಾದ ಶಿಕ್ಷಕರ ಸಂಖ್ಯೆ ಎಷ್ಟು;

(ಆ) ಇವರಿಗೆ ಇಲ್ಲಿಯವರೆಗೆ ನೀಡಿರುವ ವಿಶೇಷ ಭತ್ಯೆಗೆ ತಗುಲಿರುವ ವೆಚ್ಚ ಎಷ್ಟು;

(ಇ) ಪ್ರಸ್ತುತ ಈ ಶಿಕ್ಷಕರಿಗೆ ನೀಡಿರುವ ವಿಶೇಷ ಭತ್ಯೆಯನ್ನು ವಸೂಲಾತಿ ಮಾಡಲು ಇಲಾಖೆ ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ, ಕಾರಣ ತಿಳಿಸಿ; (ವಿವರ ಒದಗಿಸುವುದು)

(ಈ) ಈ ವಿಶೇಷ ಭತ್ಯೆಯನ್ನು ಶಿಕ್ಷಕರಿಂದ ವಸೂಲಿ ಮಾಡುವ ಕ್ರಮವನ್ನು ಸರ್ಕಾರ ಕೈಬಿಡಲು ಕ್ರಮ ಕೈಗೊಳ್ಳುವುದೇ?

## ಗ್ರಾನೈಟ್ ಗುತ್ತಿಗೆ ಕರಾರು ಬಗ್ಗೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೪೩೫೨ (೪೭೯೪) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮಿನರಲ್ಸ್ ಲಿಮಿಟೆಡ್ ಕಂಪೆನಿಯ ಚಾಮರಾಜನಗರ ಜಿಲ್ಲೆಯಲ್ಲಿರುವ ಮಸ್ಕಾಪುರ–ಕಡಹಳಿಯ ೫.೩೨ ಎಕರೆಯಲ್ಲಿ ಗ್ರಾನೈಟ್

ಕ್ವಾರಿಯನ್ನು M/s MKM Enterprises (Production Contractor) and M/s Super Star Granite (Marketing Contractor) ದಿನಾಂಕ: ೦೪.೦೨.೨೦೧೦ ರಿಂದ ೦೧.೧೦.೨೦೧೧ರವರೆಗೆ ಗುತ್ತಿಗೆ ನೀಡಿರುವುದು ನಿಜವೇ;

(ಆ) ಸದರಿ ಗುತ್ತಿಗೆಯ ಕರಾರು ಪತ್ರದ ಪ್ರತಿಯನ್ನು ನೀಡುವುದು;

(ಇ) ಸದರಿ ಗುತ್ತಿಗೆಯ ಸಂಬಂಧ ಕ್ವಾರಿ ಜಾಗದಲ್ಲಿ ಹೈಟೆನ್‌ಷನ್ ವಿದ್ಯುತ್ ತಂತಿಗಳನ್ನು ತೆಗೆಸಲು ಗುತ್ತಿಗೆದಾರರಿಂದಲೇ ೨೩ ಲಕ್ಷ ರೂ.ಗಳನ್ನು CHESCOM ಸಂಸ್ಥೆಗೆ ಪಾವತಿಸಿರುವುದು ನಿಜವೇ; ಇದು ನಿಯಮಬಾಹಿರವಾಗಿರುವುದಿಲ್ಲವೇ;

(ಈ) ಗುತ್ತಿಗೆ ಸಂಬಂಧ ಠೇವಣಿ ಇಡಲಾಗಿದ್ದ ಮೊತ್ತದಲ್ಲಿ ೭೧ ಲಕ್ಷ ರೂ.ಗಳು ಮತ್ತು ೫ ಲಕ್ಷ ರೂ.ಗಳ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿರುವುದು ನಿಜವೇ; ಇದಕ್ಕೆ ಕಾರಣಗಳೇನು;

(ಉ) ಗುತ್ತಿಗೆಯ ಕ್ವಾರಿ ಜಾಗದಲ್ಲಿ ತೆಗೆದಿರುವ ಕಲ್ಲುಗಳನ್ನು ಸಹ ಇಲಾಖೆಯು ಮುಟ್ಟುಗೋಲು ಹಾಕಿಕೊಂಡಿರುವುದು ನಿಜವೇ; ಇದಕ್ಕೆ ಕಾರಣಗಳೇನು?

## ರಾಜ ಧನ ಪಾವತಿಸದಿರುವ ಬಗ್ಗೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೪೩೫೩ (೪೭೯೦) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯ ವಡ್ಡರಹಳ್ಳಿಯ ರೈಸಿಂಗ್ ಕಂಟ್ರಾಕ್ಟರ್, ಶಿವಗಂಗಾ ಗ್ರಾನೈಟ್ಸ್ ಇವರು ಸರ್ಕಾರಕ್ಕೆ ಪಾವತಿಸಬೇಕಾಗಿರುವ ಲಕ್ಷಾಂತರ ರೂ.ಗಳ ರಾಜಧನವನ್ನು ಪಾವತಿಸದಿರುವುದು ನಿಜವೇ; ಇದಕ್ಕೆ ಕಾರಣಗಳೇನು;

(ಆ) ಸದರಿ ರಾಜಧನ ಪಾವತಿಸದಿರುವ ಬಗ್ಗೆ ಸಂಬಂಧಪಟ್ಟವರ ವಿರುದ್ಧ ಕೈಗೊಂಡ ಕ್ರಮವೇನು;

(ಇ) ಈ ಬಗ್ಗೆ ಹಾಸನ ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ವರದಿ ನೀಡಿರುವುದು ನಿಜವೇ; ನಿಜವಿದ್ದಲ್ಲಿ, ಈ ಬಗ್ಗೆ ಕ್ರಮ ಕೈಗೊಳ್ಳದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು?

## ಧಾರ್ಮಿಕ ಅಲ್ಪಸಂಖ್ಯಾತ ಶಾಲೆಗಳಲ್ಲಿನ (RTE) ಆರ್.ಟಿ.ಇ ಸೀಟುಗಳ ಬಗ್ಗೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೪೩೫೪ (೪೭೬೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಎಷ್ಟು ಧಾರ್ಮಿಕ ಅಲ್ಪಸಂಖ್ಯಾತ ಸಂಸ್ಥೆಗಳಿಗೆ ಆರ್.ಟಿ.ಇ. ಕಾಯ್ದೆಯಡಿ ಕಡ್ಡಾಯ ಸೀಟುಗಳಲ್ಲಿ ವಿನಾಯಿತಿ ನೀಡಲಾಗಿದೆ; ಈ ಕಾರಣಕ್ಕಾಗಿ ನಷ್ಟವಾಗಿರುವ ಸೀಟುಗಳ ಸಂಖ್ಯೆ ಎಷ್ಟು;

(ಆ) ಪ್ರತಿಯೊಂದು ಧಾರ್ಮಿಕ ಅಲ್ಪ ಸಂಖ್ಯಾತವಾರು, ಸಂಸ್ಥೆಯ ಹೆಸರು, ಆ ಸಂಸ್ಥೆಯಲ್ಲಿರುವ ಒಟ್ಟು ಸೀಟುಗಳ ಸಂಖ್ಯೆ ಎಷ್ಟು;

(ಇ) ಆರ್.ಟಿ.ಇ. ಅಡಿ ರಿಯಾಯಿತಿ ನೀಡದಿದ್ದರೆ, ಲಭ್ಯವಾಗಬಹುದಾದ ಸೀಟುಗಳ ಸಂಖ್ಯೆ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು)

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಗೃಹ ನಿರ್ಮಾಣ ಮಂಡಳಿ ಬಗ್ಗೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೪೩೫೫ (೪೮೨೧) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಗೃಹ ನಿರ್ಮಾಣ ಮಂಡಳಿ, ಬೆಂಗಳೂರು ವತಿಯಿಂದ ನೆಲಮಂಗಲ ತಾಲ್ಲೂಕು ವ್ಯಾಪ್ತಿಗೆ ಬರುವ ಕಣೇಗೌಡನಹಳ್ಳಿ ಮತ್ತು ನಾರಾಯಣರಾವ್ ಪಾಳ್ಯದಲ್ಲಿ ಸಂಸ್ಥೆಯ ಸದಸ್ಯ ನೌಕರರು ಕಳೆದ ೧೦ ವರ್ಷಗಳಿಂದ ನಿವೇಶನ ಪಡೆಯುವ ಸಲುವಾಗಿ ಹಣ ಪಾವತಿಸಿರುವ ಎಷ್ಟು ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಫಲಾನುಭವಿಗಳ ಹೆಸರಿಗೆ ಕ್ರಯ ಮಾಡಿ ಕೊಟ್ಟಿರುವ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು; ನಿವೇಶನಗಳ ವಿಸ್ತೀರ್ಣವೇನು; (ಪೂರ್ಣ ವಿವರ ನೀಡುವುದು)

(ಆ) ಮಂಡಳಿಯಲ್ಲಿ ಅಧಿಕೃತವಾಗಿ ಈ ಹಿಂದೆ ಅಧಿಕಾರ ಹೊಂದಿದ್ದ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಹಾಗೂ ಇನ್ನಿತರರಿಂದ ಕೋಟ್ಯಾಂತರ ಹಣ ದುರುಪಯೋಗವಾಗಿರುವ ಬಗ್ಗೆ ಪತ್ರಿಕೆ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಪ್ರಕಟ/ಪ್ರಸಾರಗೊಂಡಿದ್ದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

(ಇ) ಹಾಲಿ ಇರುವ ಗೃಹ ನಿರ್ಮಾಣ ಮಂಡಳಿಯಲ್ಲಿ ಪದಾಧಿಕಾರಿಗಳು, ಹಿಂದೆ ಅಧಿಕಾರ ಹೊಂದಿದ್ದ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಹಾಗೂ ಇನ್ನಿತರರು ಕೋಟ್ಯಾಂತರ ಹಣ ದುರುಪಯೋಗವಾಗಿರುವವರ ಮೇಲೆ ಕ್ರಿಮಿನಲ್ ಕೇಸ್ ದಾಖಲು ಮಾಡಿದ್ದಾರೆಯೇ; ಮಾಡಿದ್ದರೆ, ಯಾರ ಯಾರ ಮೇಲೆ ದಾಖಲು ಮಾಡಲಾಗಿದೆ?

## ಮಾರ್ಕೋಪೋಲೋ ಬಸ್ಸುಗಳ ಕುರಿತು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೪೩೫೬ (೪೮೪೯) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಮಾರ್ಕೋಪೋಲೋ ಬಸ್ಸುಗಳನ್ನು ಓಡಿಸಲಾಗುತ್ತಿದೆಯೇ;

(ಆ) ಹಾಗಿದ್ದಲ್ಲಿ, ಯಾವ ಯಾವ ವಿಭಾಗಗಳಲ್ಲಿ ಎಷ್ಟು ಬಸ್ಸುಗಳನ್ನು ಓಡಿಸಲಾಗುತ್ತಿದೆ; (ವಿಭಾಗವಾರು ವಿವರ ನೀಡುವುದು)

(ಇ) ಈ ಬಸ್ಸುಗಳನ್ನು ಯಾವ ದರದಲ್ಲಿ ಖರೀದಿಸಲಾಗಿದೆ; ಯಾವ ವರ್ಷದಲ್ಲಿ ಖರೀದಿಸಲಾಗಿದೆ;

(ಈ) ಈ ಬಸ್ಸುಗಳನ್ನು ಖರೀದಿಸಲು ಅನುಸರಿಸಿದ ಮಾನದಂಡಗಳೇನು; (ವಿವರ ನೀಡುವುದು)

(ಉ) ಈ ಬಸ್ಸುಗಳ ಖರೀದಿಯಲ್ಲಿ ಕಾನೂನುಬಾಹಿರ ಕೃತ್ಯಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತನಿಖೆಯನ್ನು ಕೈಗೊಳ್ಳಲಾಗಿದೆಯೇ? (ವಿವರ ನೀಡುವುದು)

## ಬೀದರ್ ಜಿಲ್ಲೆಯ ಸಾರಿಗೆ ವ್ಯವಸ್ಥೆಯ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೫೭ (೪೮೮೯) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳು ಸಾರಿಗೆ ಸೌಲಭ್ಯದಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸಾರಿಗೆ ಸೌಲಭ್ಯವನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಆ) ಬೀದರ್ ಜಿಲ್ಲೆಯ ಎಷ್ಟು ಬಸ್ಸುಗಳು ದುರಸ್ಥಿಯಲ್ಲಿವೆ; ಸಾರಿಗೆ ಸೌಲಭ್ಯ ಸುಗಮವಾಗಿ ನಡೆಯಲು ಎಷ್ಟು ಹೊಸ ಬಸ್ಸುಗಳನ್ನು ೨೦೧೬–೨೦೧೭ನೇ ಸಾಲಿನಲ್ಲಿ ಖರೀದಿ ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

## ಸರ್ವ ಶಿಕ್ಷಣ ಅಭಿಯಾನ ಅಡಿಯಲ್ಲಿದ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಶಾಲಾ ಕೊಠಡಿಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೫೮ (೪೮೮೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಅನಗತ್ಯವಾಗಿ ಹೆಚ್ಚುವರಿ ಶಾಲಾ ಕೊಠಡಿಗಳನ್ನು ನಿರ್ಮಿಸಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸಂಬಂಧಿತರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; ಅನಗತ್ಯ ಕೊಠಡಿಗಳ ಕುರಿತು ಸರ್ವೆ ನಡೆಸಲಾಗಿದೆಯೇ? (ವಿವರ ಒದಗಿಸುವುದು)

# NREGA ಯೋಜನೆಯಡಿ ರೈತರಿಗೆ ಸಿಗುತ್ತಿರುವ ಸೌಲಭ್ಯಗಳ ಕುರಿತು

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೫ (೪೮೨೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ರೈತರಿಗೆ ದೊರೆಯುತ್ತಿರುವ ವೈಯುಕ್ತಿಕ ಕಾಮಗಾರಿಗಳು ಯಾವುವು; (ಸಂಪೂರ್ಣ ವಿವರ ನೀಡುವುದು)

(ಆ) ರೈತರಿಗೆ ಸಿಗುತ್ತಿರುವ ವೈಯುಕ್ತಿಕ ಕಾಮಗಾರಿಗಳಿಗೆ ನಿಗದಿಪಡಿಸಿರುವ ಮಾನದಂಡಗಳೇನು; ನಿಗದಿಪಡಿಸಿರುವ ಗರಿಷ್ಠ ಅನುದಾನವೆಷ್ಟು; ಸದರಿ ಅನುದಾನದಲ್ಲಿ ಸಾಮಾಗ್ರಿ ಹಾಗೂ ಕೂಲಿ ಅನುಪಾತವೆಷ್ಟು;

(ಇ) ರೈತ ವೈಯುಕ್ತಿಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವ ವಿವಿಧ ಇಲಾಖೆಗಳ ಕಾರ್ಯಗಳೇನು; (ಪ್ರತಿ ಇಲಾಖೆ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳ ಸಂಪೂರ್ಣ ವಿವರ ನೀಡುವುದು)

(ಈ) ೨೦೧೭–೧೮ನೇ ಸಾಲಿನಲ್ಲಿ ಈ ರೀತಿಯ ಕಾಮಗಾರಿಗಳ ಮೂಲಕ ಖರ್ಚಾಗಿರುವ ಅನುದಾನವೆಷ್ಟು? (ಜಿಲ್ಲಾವಾರು, ಇಲಾಖಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

# ರಾಜ್ಯದಲ್ಲಿ ಪ್ರಾಥಮಿಕ ಶಾಲೆ ೧ನೇ ತರಗತಿ ದಾಖಲಾತಿಗೆ ನಿಗದಿಪಡಿಸಿರುವ ವಯೋಮಿತಿ ಕುರಿತು

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೬೦ (೪೮೨೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲೆಗೆ (೧ನೇ ತರಗತಿಗೆ) ದಾಖಲಾಗಲು ಮಕ್ಕಳಿಗೆ ನಿಗದಿಪಡಿಸಿರುವ ವಯೋಮಿತಿ ಎಷ್ಟು; (ಕನಿಷ್ಟ ಮತ್ತು ಗರಿಷ್ಟ)

(ಆ) ಈ ವಯೋಮಿತಿಯನ್ನು ಯಾವ ಸಂದರ್ಭದಲ್ಲಿ ಸಡಿಲಿಸಬಹುದು;

(ಇ) ವಯೋಮಿತಿಯನ್ನು ಯಾವ ಆಧಾರದ ಮೇಲೆ ಮತ್ತು ಯಾವ ವರ್ಷ ನಿಗದಿಪಡಿಸಲಾಗಿದೆ;

(ಈ) ವಯೋಮಿತಿಯನ್ನು ಬದಲಾವಣೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ;

(ಉ) ಒಂದನೇ ತರಗತಿ ಪ್ರವೇಶಾತಿಗೆ ಪ್ರಸ್ತುತ ಐದು ವರ್ಷ ಹತ್ತು ತಿಂಗಳು ನಿಗಧಿಪಡಿಸಿದ್ದು, ಕೇವಲ ಎರಡು ಅಥವಾ ಮೂರು ತಿಂಗಳ ವಯೋಮಿತಿ ಕಡಿಮೆ ಬಂದ ಮಗುವನ್ನು ಮುಂದಿನ ಶೈಕ್ಷಣಿಕ ವರ್ಷಕ್ಕೆ ದಾಖಲಾತಿ ಮಾಡಿದಾಗ, ಮಗು ತನಗಿಂತ ಕಿರಿಯ ಮಕ್ಕಳೊಂದಿಗೆ ಕಲಿಯಬೇಕಾದ ಅನಿವಾರ್ಯತೆ ಸೃಷ್ಠಿಯಾಗುವುದಿಲ್ಲವೇ?

## ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೬೧ (೪೭೮೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಕನ್ನಡ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇರುವ ಕಾರಣಗಳಿಂದಾಗಿ, ಮುಚ್ಚಲಿರುವ ಸರ್ಕಾರಿ ಹಾಗೂ ಅನುದಾನಿತ ಕನ್ನಡ ಶಾಲೆಗಳ ಸಂಖ್ಯೆ ಎಷ್ಟು;

(ಆ) ಮುಚ್ಚಿರುವ ಶಾಲೆಗಳ, ಹೆಸರು, ಆಡಳಿತ ಮಂಡಳಿಯ ಹೆಸರು, ಮಕ್ಕಳ ಸಂಖ್ಯೆ, ಶಾಲೆಗಳು ಪ್ರಾರಂಭವಾದ ವರ್ಷದ ಬಗ್ಗೆ ವಿವರವಾದ ಮಾಹಿತಿ ನೀಡುವುದು;

(ಇ) ಮುಚ್ಚಲಾದ ಶಾಲೆಗಳಿಗೆ ಪರ್ಯಾಯವಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ;

(ಈ) ಮಂಡ್ಯ ಜಿಲ್ಲೆಯಲ್ಲಿ ಸರ್ಕಾರಿ ಹಾಗೂ ಅನುದಾನಿತ ಕನ್ನಡ ಶಾಲೆಗಳ ಸಂಖ್ಯೆ ಎಷ್ಟು; ಆಡಳಿತ ಮಂಡಳಿ ಹೆಸರು, ಮಕ್ಕಳ ಸಂಖ್ಯೆ ಹಾಗೂ ಕೈಗೊಂಡ ಪರ್ಯಾಯ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು)

## ರಸ್ತೆ ನಿರ್ಮಾಣ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೬೨ (೪೮೫೬) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆ ಕರಾವಳಿಯಲ್ಲಿ ಭಟ್ಕಳದಿಂದ ಕಾರವಾರದವರೆಗೆ ಚತುಷ್ಪಥದ ರಸ್ತೆಗೆ ಬಳಸಿದ ಜಲ್ಲಿ ಕಲ್ಲು ಪ್ರಮಾಣ ಎಷ್ಟು; ಇದಕ್ಕೆ ಸರ್ಕಾರಕ್ಕೆ ಬಂದಿರುವ ಹಣವೆಷ್ಟು;

(ಆ) ಈ ಕಾಮಗಾರಿಯನ್ನು ಯಾವ ಕಂಪನಿಗಳು ನಿರ್ವಹಿಸುತ್ತಿದೆ; ಈ ಕಾಮಗಾರಿ ಕೈಗೊಳ್ಳಲು ಎಷ್ಟು ಕಲ್ಲಿನ ಗಣಿ (ಕ್ವಾರಿ) ಪರವಾನಿಗೆ ನೀಡಲಾಗದೆ; ಅಧಿಕೃತ ಗಣಿಗಾರಿಕೆಯನ್ನು ಹೊಂದಿರುವ ಸಂಸ್ಥೆಗಳ ವಿವರ ನೀಡುವುದು;

(ಇ) ಈ ಗಣಿಗಳ ಎಂ.ಎಲ್. ನಂ ಸಹಿತ ಸಂಪೂರ್ಣ ಹೆಸರು, ವಿಳಾಸ, ಸರ್ವೆ ನಂಬರ್‌ಗಳ ವಿವರ ನೀಡುವುದು?

## ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೬೩ (೪೭೮೨) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉನ್ನತ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಲು ಜಾಹೀರಾತು ನೀಡಲಾಗಿತ್ತೆ;

(ಆ) ನೀಡಲಾದ ಜಾಹೀರಾತು ಯಾವ ಯಾವ ಹುದ್ದೆಗಳಿಗೆ ಸಂಬಂಧಿಸಿರುತ್ತದೆ;

(ಇ) ವಿವಿಧ ಹುದ್ದೆಗಳವಾರು ನಿಗಧಿಪಡಿಸಿದ ವಿದ್ಯಾರ್ಹತೆ ಏನು; (ವಿವರ ನೀಡುವುದು)

(ಈ) ಹುದ್ದೆಗಳ ಸಂಖ್ಯೆ ಎಷ್ಟು; ಆಯ್ಕೆ ಆದವರ ಸಂಖ್ಯೆ ಎಷ್ಟು;

(ಉ) ಆಯ್ಕೆಯಾದ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ನಂತರ ನೇಮಕಾತಿ ಆದೇಶ ನೀಡದಿರಲು ಕಾರಣಗಳೇನು?

## ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ನಾಮ ನಿರ್ದೇಶನ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೬೪ (೪೮೨೨) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐ.ಐ.ಎಸ್.ಸಿ) ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐ.ಐ.ಎಂ) ನಲ್ಲಿ ಕಳೆದ ೩೦ ವರ್ಷಗಳ ಅವಧಿಯಲ್ಲಿ ಯಾವುದಾದರೂ ಹಿಂದುಳಿದ ವರ್ಗ, ಎಸ್.ಸಿ/ಎಸ್.ಟಿ, ಹಿಂದುಳಿದ ಜಾತಿ, ಮುಸ್ಲಿಂ ಸಮುದಾಯದ ಇಲ್ಲವೇ ಕ್ರಿಶ್ಚಿಯನ್ ಸಮುದಾಯದ ವ್ಯಕ್ತಿ ನಿರ್ದೇಶಕರ ಹುದ್ದೆಯನ್ನು ಅಲಂಕರಿಸಿರುತ್ತಾರೆಯೇ;

(ಆ) ರಾಜ್ಯ ಸರ್ಕಾರದಿಂದ ಈ ಮೇಲಿನ ಸಂಸ್ಥೆಗಳು ಯಾವ ಯಾವ ಸೌಲಭ್ಯಗಳನ್ನು ಪಡೆಯುತ್ತಿದೆ; (ವಿವರ ಒದಗಿಸುವುದು)

(ಇ) ಸರ್ಕಾರದಿಂದ ಈ ಸಂಸ್ಥೆಗಳಿಗೆ ಮಂಜೂರಾದ ಜಮೀನಿನ ವಿವರ ನೀಡುವುದು?

## ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗಣಿಗಾರಿಕೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೬೫ (೪೭೬೯) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗಣಿಗಾರಿಕೆ ನಡೆಸಲು, ಗುತ್ತಿಗೆ ಪರವಾನಗಿಗಾಗಿ ಕಳೆದ ೩ ವರ್ಷಗಳಲ್ಲಿ ಬಂದ ಅರ್ಜಿಗಳೆಷ್ಟು; ಗುತ್ತಿಗೆ ಪರವಾನಗಿ ನೀಡಿದ ಅರ್ಜಿಗಳೆಷ್ಟು; ಹಿಂಬರಹ ನೀಡಿದ ಅರ್ಜಿಗಳೆಷ್ಟು;

(ಆ) ಗಣಿ ಗುತ್ತಿಗೆ ಪಡೆಯಲು ವಿವಿಧ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಜವಾಬ್ದಾರಿ ಇಲಾಖೆಗೆ ಇದೆಯೇ;

(ಇ) ನಿರಾಕ್ಷೇಪಣಾ ಪತ್ರ ಪಡೆಯಲು ವಿಳಂಬವಾದ ಕಾರಣದಿಂದ ತಿರಸ್ಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಮಾಹಿತಿ ನೀಡುವುದು;

(ಈ) ಹರಾಜು ಮೂಲಕ ನೀಡುವ ಪ್ರಕ್ರಿಯೆ ಜಾರಿ ಮಾಡುವ ಮೊದಲು ಬಂದಿದ್ದ ಅರ್ಜಿಗಳನ್ನು ಇಲಾಖೆ ಪರಿಶೀಲಿಸದೆ, ಮಂಜೂರು ಮಾಡದೆ ಹಿಂಬರಹ ನೀಡುವುದು, ತಿರಸ್ಕರಿಸಿರುವುದು ಸರಿಯಾದ ಕ್ರಮವೇ;

(ಉ) ತಿರಸ್ಕೃತ ಅರ್ಜಿದಾರರ ಪೈಕಿ ಎಷ್ಟು ಮಂದಿ ನ್ಯಾಯಾಲಯದಿಂದ ಆದೇಶವನ್ನು ತಂದಿರುತ್ತಾರೆ; ನ್ಯಾಯಾಲಯ ಆದೇಶ ನೀಡಿದ್ದರೂ ಸಹ ಇಲಾಖೆಯಿಂದ ಪರವಾನಗಿ ನೀಡದಿರುವುದಕ್ಕೆ ಕಾರಣಗಳೇನು?

## ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆಯ ಬಗ್ಗೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) –**

೪೩೬೬ (೪೮೦೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲುಬುರಗಿ ಜಿಲ್ಲೆಗೆ ಕಳೆದ ೩ ವರ್ಷಗಳಲ್ಲಿ ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಿಡುಗಡೆಗೊಂಡಿದೆ;

(ಆ) ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ; ಅಪೂರ್ಣಗೊಂಡಿರುವ ಕಾಮಗಾರಿಗಳಾವುವು? (ವಿವರ ನೀಡುವುದು)

## ಅಪ್ರಾಪ್ತ ವಯಸ್ಕರು ವಾಹನ ಚಲಾಯಿಸಿ ಅಪಘಾತಗಳಿಗೆ ತುತ್ತಾಗುವುದನ್ನು ತಡೆಯುವ ಬಗ್ಗೆ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೪೩೬೭ (೪೯೧೫) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಾಹನ ಚಾಲನ ಪರವಾನಗಿ ಇಲ್ಲದ ಅಪ್ರಾಪ್ತ ವಯಸ್ಕರು ದ್ವಿಚಕ್ರ ಮತ್ತು ಆಟೋ, ಕಾರು, ಲಾರಿ ಮೊದಲಾದ ವಾಹನಗಳನ್ನು ಚಲಾಯಿಸಬಾರದು ಎಂಬ ಕಾನೂನು ಜಾರಿಯಲ್ಲಿದರೂ ಇಂತಹ ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಅಪ್ರಾಪ್ತ ವಯಸ್ಕರು ವಾಹನ ಚಲಾಯಿಸಿ ಅಪಘಾತ ಮಾಡಿರುವ/ ಅಪಘಾತಕ್ಕೆ ಈಡಾಗಿರುವ ಎಷ್ಟು ಪ್ರಕರಣಗಳು ದಾಖಲಾಗಿದೆ; ಹಾಗೂ ಎಷ್ಟು ಪ್ರಕರಣಗಳನ್ನು ಕಂಡು ಹಿಡಿದಿದೆ; (ವಿವರ ನೀಡುವುದು)

(ಇ) ಇಂತಹ ಪ್ರಕರಣಗಳಲ್ಲಿ ಸರ್ಕಾರವಾಗಲಿ, ನ್ಯಾಯಾಲಯವಾಗಲಿ ಯಾವ ರೀತಿಯ ಕ್ರಮ ಕೈಗೊಂಡಿದೆ;

(ಈ) ಅಪ್ರಾಪ್ತರು ವಾಹನ ಚಲಾಯಿಸುವ ನಿಷೇಧಿತ ಕುರಿತು ಸರ್ಕಾರ ಎಂತಹ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ? (ವಿವರ ನೀಡುವುದು)

## ಬಿ.ಎಂ.ಟಿ.ಸಿ ಬಸ್ ನಿಲ್ದಾಣಗಳನ್ನು ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಬಗ್ಗೆ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೪೩೬೮ (೪೮೭೦) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿನ ಬಿ.ಎಂ.ಟಿ.ಸಿ ಬಸ್ ನಿಲ್ದಾಣಗಳಲ್ಲಿ ಶುಚಿತ್ವವನ್ನು ಕಾಪಾಡುವ ನಿಟ್ಟಿನಲ್ಲಿ ಹಾಗೂ ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣದ ಪಕ್ಕದಲ್ಲಿಯೇ ಶೌಚಾಲಯಗಳನ್ನು ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯು ಇಲ್ಲದೆ ಇರುವ ಕಾರಣ ಪ್ರಯಾಣಿಕರು ಜಲಬಾಧೆಯಿಂದ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

(ಆ) ರಸ್ತೆಯ ಸುತ್ತ ಮುತ್ತಲಿನ ಪಾದಚಾರಿಗಳ ಮಾರ್ಗವನ್ನು ಕೆಲವು ಸಾರ್ವಜನಿಕರು ಶೌಚಾಲಯವನ್ನಾಗಿ ಉಪಯೋಗ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಶೌಚಾಲಯ ನಿರ್ವಹಣೆ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸರ್ಕಾರವು ಯಾವ ರೀತಿಯ ಕ್ರಮ ಕೈಗೊಂಡಿದೆ;

(ಈ) ಈ ಶೌಚಾಲಯ ನಿರ್ವಹಣೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲು ಖಾಸಗಿ ಸಂಸ್ಥೆಗೆ ವಹಿಸಲು ಸರ್ಕಾರ ಚಿಂತಿಸಿದೆಯೇ;

(ಉ) ಪ್ರೈವೆಟೈಸ್ ಮಾಡಲು ಪಿ.ಪಿ.ಪಿ ಮಾಡಲ್ ಅಳವಡಿಸಲಾಗುವುದೇ?

## ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಯೋಜನೆ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೬೯ (೪೭೮೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಯೋಜನೆಗಾಗಿ ಕಳೆದ ೩ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನದ ಮೊತ್ತವೆಷ್ಟು; (ವರ್ಷಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಕೇಂದ್ರ ಸರ್ಕಾರದಿಂದ ಬಂದ ಅನುದಾನವನ್ನು ಎರಡು ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾಗಿದೆಯೇ; (ತಾಲ್ಲೂಕುವಾರು, ವರ್ಷಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೇಂದ್ರ ಸರ್ಕಾರದಿಂದ ಬಂದ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಾಗಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆಯೇ;

(ಈ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರದಿಂದ ಬಂದ ಅನುದಾನದಲ್ಲಿ ಎರಡು ಜಿಲ್ಲೆಗಳ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗಿದೆ; (ತಾಲ್ಲೂಕುವಾರು, ವರ್ಷಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಉ) ಕೇಂದ್ರ ಸರ್ಕಾರ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಾಗಿ ನೀಡುತ್ತಿರುವ ಅನುದಾನವನ್ನು ಕೆಲವು ತಾಲ್ಲೂಕುಗಳಲ್ಲಿ ಸಮರ್ಪಕವಾಗಿ ಬಳಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಹಾಗಿದ್ದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಗ್ರಾಮೀಣ ರಸ್ತೆ ಅಭಿವೃದ್ಧಿ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೭೦ (೪೮೫೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕಳೆದ ೩ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನದ ಮೊತ್ತವೆಷ್ಟು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಕೇಂದ್ರ ಸರ್ಕಾರದಿಂದ ಬಂದ ಅನುದಾನವನ್ನು ಎರಡು ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ ಸಮಾನವಾಗಿ ಹಂಚಿಕೆ ಮಾಡಲಾಗಿದೆಯೇ; (ತಾಲ್ಲೂಕುವಾರು, ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೇಂದ್ರ ಸರ್ಕಾರದಿಂದ ಬಂದ ಅನುದಾನವನ್ನು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆಯೇ;

(ಈ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರದಿಂದ ಬಂದ ಅನುದಾನದಲ್ಲಿ ಎರಡು ಜಿಲ್ಲೆಗಳ ಎಷ್ಟು ಗ್ರಾಮಗಳ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ; (ತಾಲ್ಲೂಕುವಾರು, ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಉ) ಕೇಂದ್ರ ಸರ್ಕಾರ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲು ನೀಡುತ್ತಿರುವ ಅನುದಾನವನ್ನು ಕೆಲವು ತಾಲ್ಲೂಕುಗಳಲ್ಲಿ ಸಮರ್ಪಕವಾಗಿ ಬಳಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಹಾಗಿದ್ದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಚಾಮರಾಜನಗರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೭೧ (೪೮೪೨) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಯಾವ ಯಾವ ಕೋರ್ಸ್‌ಗಳಿವೆ; (ಸಿವಿಲ್, ಮೆಕಾನಿಕಲ್, ಇತ್ಯಾದಿ) ಪ್ರತಿಯೊಂದು ಕೋರ್ಸ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಪ್ರತಿಯೊಂದು ಕೋರ್ಸ್‌ಗೆ ಮಂಜೂರಾಗಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಪದನಾಮ ಹಾಗೂ ಸಂಖ್ಯೆಯ ವಿವರ ಒದಗಿಸುವುದು;

(ಆ) ಸದರಿ ಹುದ್ದೆಗಳ ಪೈಕಿ ಪ್ರತಿಯೊಂದು ಕೋರ್ಸ್‌ಗಳಲ್ಲಿ ಹಾಲಿ ಭರ್ತಿಯಾಗಿರುವ ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಬೋಧಕ ಮತ್ತು ಬೋಧಕೇತರ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೂಡಲೇ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ?

## ಚಾಮರಾಜನಗರ ಜಿಲ್ಲೆಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆ

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೭೨ (೩೮೮೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಜಿಲ್ಲೆಯಲ್ಲಿ ಈಗಾಗಲೇ ಕಾರ್ಯಾರಂಭವಾಗಿರುವ (ಕಮೀಷನ್ಡ್) ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಯಾವುವು; ಇವುಗಳಿಂದ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜಾಗುತ್ತಿದೆ; ಆ ಗ್ರಾಮಗಳು ಯಾವುವು; ಯೋಜನೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಯೇ;

(ಆ) ಚಾಮರಾಜನಗರ ಜಿಲ್ಲೆಯಲ್ಲಿ ಈಗ ನಿರ್ಮಾಣ ಹಂತದಲ್ಲಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಯಾವುವು; ಇವುಗಳಿಂದ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜಾಗುತ್ತದೆ; ಆ ಗ್ರಾಮಗಳು ಯಾವುವು; ಈ ಯೋಜನೆಗಳ ಕಾಮಗಾರಿಗಳು ಯಾವ ಹಂತದಲ್ಲಿವೆ; ಯಾವಾಗ ಪೂರ್ಣಗೊಳ್ಳಲಿವೆ; ಈ ಯೋಜನೆಗಳ ಅಂದಾಜು ವೆಚ್ಚ ಎಷ್ಟು?

## ಪಿ.ಡಿ.ಓ ಮತ್ತು ಕಾರ್ಯದರ್ಶಿಗಳ ನೇಮಕಾತಿ ವಿಳಂಬವಾಗಿರುವ ಕುರಿತು

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೭೩ (೪೭೭೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ತಡವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸದರಿ ನೇಮಕಾತಿಯು ತಡವಾಗಲು ಕಾರಣವೇನು;

(ಇ) ಬಂದಿದ್ದಲ್ಲಿ, ಶೀಘ್ರವಾಗಿ ಭರ್ತಿಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಶಾಲಾ ಆವರಣದಲ್ಲಿ ಸಿ.ಸಿ ಕ್ಯಾಮರಾ ಅಳವಡಿಸುವ ಕುರಿತು

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೭೪ (೪೭೭೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಕ್ಕಳ ಮೇಲಿನ ದೌರ್ಜನ್ಯ ತಡೆಯುವ ಸಲುವಾಗಿ ಶಾಲೆಗಳ ಆವರಣದಲ್ಲಿ ಸಿ.ಸಿ ಕ್ಯಾಮರಾ ಅಳವಡಿಸುವುದು ಕಡ್ಡಾಯಗೊಳಿಸಲಾಗಿದೆಯೇ;

(ಆ) ಕಡ್ಡಾಯಗೊಳಿಸಿದ್ದಲ್ಲಿ ರಾಜ್ಯದ ಎಷ್ಟು ಶಾಲೆಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಲಾಗಿದೆ; (ಖಾಸಗಿ, ಅನುದಾನಿತ ಮತ್ತು ಸರ್ಕಾರಿ ಶಾಲೆಗಳ ವಿವರ ಪ್ರತ್ಯೇಕವಾಗಿ ನೀಡುವುದು)

(ಇ) ಸಿ.ಸಿ. ಕ್ಯಾಮರ ಅಳವಡಿಸದೇ ಇರುವ ಶಾಲೆಗಳಲ್ಲಿ ಯಾವ ಕಾಲಮಿತಿಯಲ್ಲಿ ಅಳವಡಿಸಲಾಗುವುದು;

(ಈ) ಸಿ.ಸಿ. ಕ್ಯಾಮರ ಅಳವಡಿಸದೇ ಇರುವ ಶಾಲೆಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಇ–ಸ್ವತ್ತಿನಲ್ಲಿ ಆಗಿರುವ ಅಕ್ರಮದ ಕುರಿತು

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೭೫ (೪೭೭೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇ–ಸ್ವತ್ತಿನಲ್ಲಿ ಭಾರಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಸದರಿ ಅಕ್ರಮದಿಂದ ಸರ್ಕಾರದ ಬೊಕ್ಕಸಕ್ಕೆ ಆಗಿರುವ ನಷ್ಟವೆಷ್ಟು;

(ಇ) ಅಕ್ರಮ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಈ ಅಕ್ರಮದಿಂದ ಮೋಸ ಹೋದ ಸಾರ್ವಜನಿಕರಿಗೆ ಸರ್ಕಾರ ನೀಡಿರುವ ಪರಿಹಾರವೇನು?

## ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ನೇಮಕಾತಿ ಬಗ್ಗೆ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೭೬ (೪೮೦೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ೨೦೧೨ ರಿಂದ ಇಲ್ಲಿಯವರೆಗೆ ಸರ್ಕಾರ ನೇಮಕ ಮಾಡಿದ ದೈಹಿಕ ಶಿಕ್ಷಕರ ಸಂಖ್ಯೆ ಎಷ್ಟು; (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪ್ರತ್ಯೇಕ ವಿವರ ನೀಡುವುದು)

(ಇ) ಉಳಿದ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

## ಕೆ.ಎಸ್.ಆರ್.ಟಿ.ಸಿ ಬಸ್ ಪಾಸ್‌ಗಳ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೭೭ (೪೭೭೧) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಎಸ್.ಆರ್.ಟಿ.ಸಿ ಚನ್ನಪಟ್ಟಣ ಘಟಕದಿಂದ ವಿದ್ಯಾರ್ಥಿಗಳಿಗೆ ವಿತರಿಸಲಾಗಿರುವ ಬಸ್ ಪಾಸುಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)

(ಆ) ಕೆ.ಎಸ್.ಆರ್.ಟಿ.ಸಿ ಬಸ್ ಪಾಸುಗಳಿಗೆ ಅನುಗುಣವಾಗಿ ಬಸ್ಸುಗಳ ವ್ಯವಸ್ಥೆಯಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೆಚ್ಚುವರಿ ಬಸ್ಸುಗಳ ವ್ಯವಸ್ಥೆ ಕಲ್ಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? (ಮಾಹಿತಿ ನೀಡುವುದು)

## ಟಾಸ್ಕ್‌ಫೋರ್ಸ್ ಅಡಿಯಲ್ಲಿ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ

**ಶ್ರೀ ಸಂಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೭೮ (೪೭೭೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಟಾಸ್ಕ್‌ಫೋರ್ಸ್ ಅಡಿಯಲ್ಲಿ ಪ್ರಸ್ತುತ ಸಾಲಿನಲ್ಲಿ ಬಿಡುಗಡೆ ಮಾಡಲಾದ ಅನುದಾನವೆಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಟಾಸ್ಕ್‌ಫೋರ್ಸ್‌ನಲ್ಲಿ ಅನುದಾನವನ್ನು ನಿಗಧಿಪಡಿಸಿ ಬಿಡುಗಡೆಗೊಳಿಸಲು ಅನುಸರಿಸಲಾಗುವ ಮಾನದಂಡಗಳೇನು ಹಾಗೂ ಈ ಅನುದಾನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರಗಳನ್ನು ನೀಡುವುದು)

(ಇ) ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಟಾಸ್ಕ್‌ಫೋರ್ಸ್ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಾವುವು; ಈ ಕಾಮಗಾರಿಗಳಿಗೆ ಸರ್ಕಾರ ಬಿಡುಗಡೆ ಮಾಡಿದ ಮೊತ್ತವೆಷ್ಟು; ಖರ್ಚು ಮಾಡಲಾದ ಮೊತ್ತವೆಷ್ಟು; ಕಾಮಗಾರಿಗಳ ಇತ್ತೀಚಿನ ಪ್ರಗತಿಯ ಸಂಪೂರ್ಣ ವಿವರಗಳನ್ನು ನೀಡುವುದು?

## ಬಿ.ಎಂ.ಟಿ.ಸಿ ಬಸ್‌ಗಳನ್ನು ಸುಸ್ಥಿತಿಯಲ್ಲಿಡುವ ಬಗ್ಗೆ

**ಶ್ರೀ ಸಂಯದ್ ಮುುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩೭೯ (೪೮೦೫) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಸುಸ್ಥಿತಿಯಲ್ಲಿಡಲು ನೇಮಕಗೊಂಡಿರುವ ಅಧಿಕಾರಿ/ನೌಕರರ ವೃಂದವಾರು ಸಂಪೂರ್ಣ ಮಾಹಿತಿ ನೀಡುವುದು;

(ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಒಳಭಾಗ ಮತ್ತು ಹೊರಭಾಗದಲ್ಲಿ ಶುಚಿತ್ವಗೊಳ್ಳದೆ (ತೊಳೆಯದೆ) ಪ್ರತಿನಿತ್ಯ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಬಸ್ಸುಗಳನ್ನು ಶುಚಿಗೊಳಿಸುವಂತೆ ಹಾಗೂ ಜಾಹೀರಾತು ಫಲಕಗಳಿಂದ ಪ್ರಯಾಣಿಕರು ಇಳಿಯಬೇಕಾದ ಸ್ಥಳದಲ್ಲಿ ಇಳಿಯಲು ನಾಮಫಲಕಗಳು ಕಾಣದಿರುವ ಬಗ್ಗೆ ಪ್ರಯಾಣಿಕರಿಂದ ಬಂದಿರುವ ದೂರುಗಳೆಷ್ಟು; (ವಿವರ ನೀಡುವುದು)

(ಈ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಶುಚಿಗೊಳಿಸಿ ಸುಸ್ಥಿತಿಯಲ್ಲಿಡಲು ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು)

## ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ
## ಕೆರೆ ತುಂಬಿಸುವ ಬಗ್ಗೆ

**ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩೮೦ (೪೪೫೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಇಂಚಲ ಗ್ರಾಮದ ಕೆರೆಗೆ ನೀರು ತುಂಬಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು; (ವಿವರ ನೀಡುವುದು)

(ಆ) ಪ್ರಗತಿ ಕೈಗೆತ್ತಿಕೊಂಡಿದ್ದಲ್ಲಿ, ಕಾಮಗಾರಿಯು ಯಾವ ಹಂತದಲ್ಲಿದೆ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಪರಿಷತ್ತು.

ಸರ್ಕಾರಿ ಮುದ್ರಣಾಲಯ, ಬೆಳಗಾವಿ, ಪ್ರತಿಗಳು–750